ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 18 ಭಾನುವಾರ 2024

ಸಂಪುಟ: 45 | ಸಂಚಿಕೆ: 123 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್





ಮುಖ್ಯಮಂತ್ರಿ ಸಿದ್ದರಾಮಯ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ತನಿಖೆಗೆ ರಾಜ್ಯಪಾಲರ ಅನುಮತಿ

ಮುಖ್ಯಮಂತ್ರಿಗೆ ಮುಡಾ ಮುಳ್ಳಾಯ್ತು...! ಕಾನೂನು ಸಮರಕ್ಕೆ ನಿರ್ಧಾರ

ಬೆಂಗಳೂರು, ಆ.17(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅನುಮತಿ ನೀಡಿದ್ದಾರೆ.

ನಿನ್ನೆ ರಾತ್ರಿಯೇ ಇದರ ಸುಳಿವರಿತ ಮುಖ್ಯಮಂತ್ರಿ ಅವರು, ಕಾನೂನು ತಜ್ಞರೊಂದಿಗೆ ಮುಂಜಾನೆವರೆಗೂ ಸಮಾಲೋಚನೆ ನಡೆಸಿ, ಅವರುಗಳ ಸಲಹೆಯಂತೆ ರಾಜ್ಯಪಾಲರ ನಿರ್ಧಾರ ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲು ಏರಲು ತೀರ್ಮಾನಿಸಿದ್ದಾರೆ. ಭ್ರಷ್ಟಾಚಾರ ಆರೋಪ ಹಗರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ಆಡಳಿತ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಾಗಿತ್ತು. ಕರ್ನಾಟಕ ಸರ್ಕಾರದ ಇತಿಹಾಸದಲ್ಲಿ ಬಿ.ಎಸ್.ಯಡಿಯೂರಪ್ಪ ನಂತರ ರಾಜ್ಯಪಾಲರಿಂದ ಪ್ರಾಸಿಕ್ಯೂಷನ್ ಅನುಮತಿ ಎದುರಿಸಿದ ಎರಡನೇ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಿದ್ದಾರೆ.

78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಸಿದ್ದರಾಮಯ್ಯ ಧ್ವಜಾರೋಹಣ ನೆರವೇರಿಸಿದ ಮರುದಿನವೇ ರಾಜ್ಯಪಾಲರು, ಮುಡಾ ಹಗರಣ ಸಂಬಂಧ ಬಂದಿದ್ದ ದೂರಿನ ಕಡತಕ್ಕೆ ■ 2ನೇ ಪುಟಕ್ಕೆ

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲ್ಲ

ಸಿದ್ದರಾಮಯ್ಯ ಘೋಷಣೆ; ಕಾನೂನು ಹೋರಾಟಕ್ಕೆ ಸಿದ್ಧತೆ

ಬೆಂಗಳೂರು, ಆ.17(ಕೆಎಂಶಿ)–ರಾಜ್ಯಪಾಲರ ನಿರ್ಣಯ ಸಂವಿಧಾನಬಾಹಿರವಾಗಿದ್ದು, ಅವರು ನೀಡಿರುವ ಪ್ರಾಸಿಕ್ಯೂಷನ್ ಅನುಮತಿ ವಿರುದ್ಧ ಕಾನೂನು ಹೋರಾಟ ನಡೆಸುತ್ತೇನೆಯೇ ಹೊರತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದ್ದಾರೆ.

ಕೇಂದ್ರ ಸರ್ಕಾರದ ಕೈಗೊಂಬೆಯಾಗಿರುವ ರಾಜ್ಯಪಾಲರು ಮುಡಾ ಹಗರಣ ಆರೋಪ ಸಂಬಂಧ ತೆಗೆದುಕೊಂಡಿರುವ ನಿರ್ಣಯ ಚುನಾಯಿತ ಸರ್ಕಾರವನ್ನು ಅಭದ್ರಗೊಳಿಸುವ ಷಡ್ಯಂತ್ರವಾಗಿದೆ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ವಿರುದ್ಧ ದೂರು ಬಂದ ದಿನವೇ ರಾಜ್ಯಪಾಲರು ಶೋಕಾಸ್ ನೋಟಿಸ್ ನೀಡಿದ್ದರು. ಅವರ ಇಂದಿನ ಈ ನಡೆಯನ್ನು ಮೊದಲೇ ನಿರೀಕ್ಷಿಸಿದ್ದೆ. ಶಾಸಕರು, ಸಂಪುಟ ಸಚಿವರು, ಪಕ್ಷದ ವರಿಷ್ಠರೆಲ್ಲರೂ ನನ್ನ ಪರವಾಗಿದ್ದಾರೆ, ನಾನು ಮಾಡದ ತಪ್ಪಿಗೆ ರಾಜೀನಾಮೆ ಏಕೆ ನೀಡಬೇಕು ಎಂದು ಪ್ರಶ್ನಿಸಿದರು. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ರಾಜ್ಯಪಾಲರನ್ನು ರಾಜಕೀಯ ದಾಳವಾಗಿ ■ 2ನೇ ಪುಟಕ್ಕೆ

ಸಿದ್ದರಾಮಯ್ಯಗೆ ಮತ್ತೊಂದು ಶಾಕ್, ಹೈಕೋರ್ಟ್‌ನಲ್ಲಿ 'ಕೇವಿಯಟ್' ಸಲ್ಲಿಕೆ!

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅಕ್ರಮವಾಗಿ ಸೈಟ್ ಪಡೆದ ಆರೋಪದ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ಬೆನ್ನಲ್ಲೇ ಕರ್ನಾಟಕ ಹೈಕೋರ್ಟ್‌ನಲ್ಲಿ ಕೇವಿಯಟ್ ಅರ್ಜಿ ದಾಖಲಾಗಿದೆ. ನಾಗರಭಾವಿ ನಿವಾಸಿಯಾದ ಹೈಕೋರ್ಟ್ ವಕೀಲ ಎಸ್.ಪಿ.ಪ್ರದೀಪ್‌ಕುಮಾರ್ ಶನಿವಾರ



ಈ ಕೇವಿಯಟ್ ಅರ್ಜಿ ಸಲ್ಲಿಸಿದ್ದು, ಒಂದು ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇನಾದರೂ, ■ 2ನೇ ಪುಟಕ್ಕೆ

> "ರಾಜ್ಯಪಾಲರು ತಮ್ಮ ಹಕ್ಕು ಚಲಾಯಿಸಿ ಮುಡಾ ಹಗರಣದ ತನಿಖೆಗೆ ಅನುಮತಿ ನೀಡಿದ್ದಾರೆ. ಹಗರಣ ಶುರುವಾದಾಗಲೇ ಸಂಕಷ್ಟ ತಪ್ಪಿದ್ದಲ್ಲ. ಅದನ್ನು ನಿಭಾಯಿಸಿಕೊಂಡು ಹೊರ ಬರುವುದು ಅವರು ಮಾಡಿರುವ ಕಾರ್ಯದ ಮೇಲೆ ನಿರ್ಧಾರವಾಗುತ್ತದೆ. ಮುಡಾ ವಿಚಾರದಲ್ಲಿ ಮುಖ್ಯಮಂತ್ರಿಗಳು ನೆಪಮಾತ್ರ ಅಷ್ಟೇ. ಸಿಎಂ ಮಾತ್ರವಲ್ಲ, ಇಡೀ ರಾಜ ಕಾರಣವೇ ಹಗರಣದಲ್ಲಿ ಸಿಲುಕಿಕೊಂಡಿದೆ. ಮೂರೂ ಪಕ್ಷಗಳ ರಾಜಕಾರಣಿಗಳು ಹಗರಣದಲ್ಲಿದ್ದಾರೆ. ನಿಷ್ಪಕ್ಷಪಾತವಾದ ತನಿಖೆ ನಡೆದರೆ, ಅವಕಾಶ ದೊರೆತು ಜನಪ್ರತಿನಿಧಿಗಳಾಗಿ ಮುಡಾಗೆ ಹೋಗಿರುವವರೆಲ್ಲರೂ ಇಕ್ಕಟ್ಟಿಗೆ ಸಿಲುಕಬೇಕಾಗುತ್ತದೆ. ಆದರೆ ತನಿಖೆ ನೆಪದಲ್ಲಿ ಮುಡಾಗೆ ಬೀಗ ಹಾಕಲಾಗುತ್ತದೆಯೇ? ಜನರ ಕೆಲಸ–ಕಾರ್ಯಗಳು ನಡೆಯಬಾರದೇ? ಮುಡಾ ನಿವೇಶನಕ್ಕಾಗಿ 80 ಸಾವಿರ ಮಂದಿ ಅರ್ಜಿ ಸಲ್ಲಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಮೈಸೂರಿನಲ್ಲಿ ಲಕ್ಷಕ್ಕಿಂತ ಹೆಚ್ಚು ಖಾಲಿ ನಿವೇಶನಗಳಿವೆ. ತನಿಖೆಯ ಜೊತೆಗೆ ಈ ನಿವೇಶನಗಳನ್ನು ಅರ್ಹರಿಗೆ ವಿತರಿಸುವ ಕಾರ್ಯವೂ ಆಗಬೇಕು.
>
> –ಡಿ.ಮಾದೇಗೌಡ, ಸಿಐಟಿಬಿ (ಇಂದಿನ ಮುಡಾ) ಮಾಜಿ ಅಧ್ಯಕ್ಷ



> "ಸುಪ್ರೀಂಕೋರ್ಟ್ ಸಂವಿಧಾನ ಪೀಠದ ಆದೇಶದಂತೆ ಮುಖ್ಯಮಂತ್ರಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಅಧಿಕಾರ ರಾಜ್ಯಪಾಲರಿಗೆ ಇದೆ. ರಾಜ್ಯಪಾಲರ ವಿರುದ್ಧ ನೇರ ವಾಗಿ ಪ್ರಕರಣ ದಾಖಲಿಸಲು ಸಾಧ್ಯವಿಲ್ಲ. ಆದರೆ ಅವರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಬಹುದು. ಮುಖ್ಯಮಂತ್ರಿಗಳ ವಿರುದ್ಧ ಪ್ರಕರಣ ದಾಖಲಾದರೂ ಅವರು ರಾಜೀನಾಮೆ ನೀಡದೆ ಸಿಎಂ ಸ್ಥಾನದಲ್ಲಿ (ದೆಹಲಿಯ ಅರವಿಂದ್ ಕೇಜ್ರಿವಾಲ್) ಮುಂದುವರೆಯಬಹುದು. ಒಂದೊಮ್ಮೆ ಪ್ರಾಸಿ ಕ್ಯೂಷನ್‌ಗೆ ಅವಕಾಶ ಕೊಟ್ಟಾಗ ಮುಖ್ಯಮಂತ್ರಿಗಳು ನೈತಿಕ ಹೊಣೆ ಹೊತ್ತು ರಾಜೀನಾಮೆ (ಜಾರ್ಖಂಡ್‌ನ ಹೇಮಂತ್ ಸೋರೇನ್)ಯನ್ನು ನೀಡಬಹುದು.
>
> –ಬಿ.ವಿ.ಆಚಾರ್ಯ, ಹೈಕೋರ್ಟ್ ಹಿರಿಯ ವಕೀಲರು



ನನ್ನ ಪ್ರಕಾರ ರಾಜ್ಯಪಾಲರೇ ರಾಜೀನಾಮೆ ನೀಡಬೇಕು

ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಸಿಎಂ ವಿವರಣೆ

ಬೆಂಗಳೂರು, ಆ. 17–ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸಲು ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ್ದಾರೆ. ರಾಜ್ಯಪಾಲರ ಈ ನಿರ್ಧಾರ ಸಿಎಂಗೆ ದೊಡ್ಡ ಸಂಕಷ್ಟ ತಂದಿಟ್ಟಿದೆ. ಸದ್ಯ ಈ ವಿಚಾರವಾಗಿ ಸಿಎಂ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ರಾಜ್ಯ ಸಚಿವ ಸಂಪುಟ ಸಭೆ ಮಾಡಿದ್ದು, ರಾಜ್ಯಪಾಲರ ನಿರ್ಣಯವನ್ನು ಸಂಪುಟ ಸಭೆ ಖಂಡಿಸಿದೆ. ಬಳಿಕ ಮಾತನಾಡಿದ ಸಿದ್ದರಾಮಯ್ಯ, ನಾನು ಯಾವ ಕಾರಣಕ್ಕೆ ರಾಜೀನಾಮೆಯನ್ನು ನೀಡಬೇಕು, ಯಾವ ಆಧಾರದ ಮೇಲೆ ನೀಡಬೇಕು? ನನ್ನ ಪ್ರಕಾರ ರಾಜ್ಯಪಾಲರೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ. ಸಂಪುಟ ಸಭೆ ಬಳಿಕ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್



ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಜಂಟಿ ಪತ್ರಿಕಾಗೋಷ್ಠಿ ನಡೆಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರಾಜ್ಯಪಾಲರ ನಿರ್ಧಾರಕ್ಕೆ ಕಾನೂನಿನ ಬಲ ಇಲ್ಲ. ಸಂವಿಧಾನದ ಪ್ರತಿನಿಧಿಗಳಾಗಿ ಅವರು ಕೆಲಸ ಮಾಡಬೇಕೇ ಹೊರತು ಬಿಜೆಪಿ ಪ್ರತಿನಿಧಿಯಾಗಿ ಕೆಲಸ ಮಾಡಬಾರದು. ನನ್ನ ಮೇಲೆ ಯಾಕೆ ರಾಜ್ಯಪಾಲರನ್ನು ಬಳಸಿಕೊಳ್ಳುತ್ತಿದ್ದಾರೆ. ರಾಜ್ಯಪಾಲರ ನಿರ್ಧಾರ ವಿರುದ್ಧ ನಾವು ಕೂಡ ಕಾನೂನು ಹೋರಾಟ ಮಾಡುತ್ತೇವೆ ಎಂದಿದ್ದಾರೆ.

ಬಿಜೆಪಿ ವಿರುದ್ಧ ಸಿದ್ದರಾಮಯ್ಯ ಆಕ್ರೋಶ: ರಾಜ್ಯಪಾಲರು ಕಾನೂನು ■ 2ನೇ ಪುಟಕ್ಕೆ

ನಾಳೆ ರಾಜ್ಯಾದ್ಯಂತ ಪ್ರತಿಭಟನೆ: ಡಿಕೆಶಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ಅಕ್ರಮವಾಗಿ ಸೈಟ್ ಪಡೆದ ಆರೋಪ ಎದುರಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಖಂಡಿಸಿ ಕಾಂಗ್ರೆಸ್ ಆ.19 ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ ನೀಡಿದೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಸಂವಿಧಾನ ವಿರೋಧಿಯಾಗಿ ರಾಜ್ಯಪಾಲರು ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ನೀಡಿರುವ ಅನುಮತಿ ಖಂಡಿಸಿ ಆಗಸ್ಟ್ 19ರ ಸೋಮವಾರದಂದು ■ 2ನೇ ಪುಟಕ್ಕೆ

ಕೊಲ್ಕತ್ತಾದಲ್ಲಿ ವೈದ್ಯೆ ಮೇಲೆ ಅತ್ಯಾಚಾರ, ಹತ್ಯೆ ಖಂಡಿಸಿ

ಮೈಸೂರಲ್ಲೂ ಓಪಿಡಿ ಸೇವೆ ಬಂದ್; ವೈದ್ಯರ ಪ್ರತಿಭಟನೆ



ಕೆಆರ್ ಆಸ್ಪತ್ರೆ ವೈದ್ಯರ ಪ್ರತಿಭಟನೆ

ಮೈಸೂರು, ಆ. 17(ಆರ್‌ಕೆ)–ಕೊಲ್ಕತ್ತಾದಲ್ಲಿ ಸ್ನಾತಕೋತ್ತರ ಮಹಿಳಾ ಟ್ರೇನಿ ಡಾಕ್ಟರ್ ಮೇಲಿನ ಅತ್ಯಾಚಾರ ಮತ್ತು ಹತ್ಯೆ ಖಂಡಿಸಿ ದೇಶಾದ್ಯಂತ ವೈದ್ಯರು ಓಪಿಡಿ ಸೇವೆ ಬಹಿಷ್ಕರಿಸಿ ಇಂದು ಪ್ರತಿಭಟನೆ ನಡೆಸಿದರು.

ಕೊಲ್ಕತ್ತಾದ ಆರ್‌ಜಿ ಕೆಆರ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ವೈದ್ಯೆ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣ ವಿರೋಧಿಸಿ ಮೈಸೂರಿನ ಕೆಆರ್, ಚೆಲುವಾಂಬ, ಪಿಕೆಟಿಬಿ, ಜೆಎಸ್‌ಎಸ್, ಭಾರತ್ ಕ್ಯಾನ್ಸರ್ ಆಸ್ಪತ್ರೆ ಸೇರಿದಂತೆ ಬಹುತೇಕ ಎಲ್ಲಾ ಖಾಸಗಿ ಆಸ್ಪತ್ರೆ ವೈದ್ಯರು ಶನಿವಾರ ಬೆಳಗ್ಗೆ 6ರಿಂದ ನಾಳೆ (ಆ. 18) ಬೆಳಗ್ಗೆ 6 ಗಂಟೆವರೆಗೆ ಹೊರರೋಗಿ ವಿಭಾಗದ ಸೇವೆಯನ್ನು ಬಹಿಷ್ಕರಿಸಿ ಮುಷ್ಕರ ನಡೆಸಿದರು.

ಭಾರತೀಯ ವೈದ್ಯಕೀಯ ಸಂಘ (ಐಎಂಎ)ದ ರಾಷ್ಟ್ರೀಯ ಘಟಕ ಕರೆ ನೀಡಿದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮತ್ತು ಮೈಸೂರು ಘಟಕದ ಸದಸ್ಯರು ಬೆಂಬಲ ಸೂಚಿಸಿ 24 ಗಂಟೆಗಳ ಕಾಲ ಮುಷ್ಕರ ನಡೆಸಿದರು. ಅತ್ಯಾಚಾರವೆಸಗಿ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿ ಹತ್ಯೆಗೈದಿರುವ ಆರೋಪಿಗಳಿಗೆ ಮರಣ ದಂಡನೆ ಶಿಕ್ಷೆ ವಿಧಿಸಬೇಕು, ಕೆಲಸ ಮಾಡುವ ಆಸ್ಪತ್ರೆ ಸ್ಥಳದಲ್ಲಿ ವೈದ್ಯರಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಅಪಘಾತ ಚಿಕಿತ್ಸೆ, ತುರ್ತು ಚಿಕಿತ್ಸೆ ಅಗತ್ಯ ತುರ್ತು ಶಸ್ತ್ರಚಿಕಿತ್ಸೆ (ಓಟಿ)ಗಳನ್ನು ಹೊರತುಪಡಿಸಿ ಉಳಿದಂತೆ ಆಸ್ಪತ್ರೆಗಳ ಎಲ್ಲಾ ಓಪಿಡಿ ಸೇರಿದಂತೆ ಎಲ್ಲಾ ಸೇವೆಗಳನ್ನು ವೈದ್ಯರು ಬಹಿಷ್ಕರಿಸಿದ್ದರಿಂದ ಕೆಆರ್, ಚೆಲುವಾಂಬ, ಪಿಕೆಟಿಬಿ, ಸೂಪರ್ ಸ್ಪೆಷಾಲಿಟಿ, ಟ್ರಾಮಾ ಕೇರ್ ಸೆಂಟರ್, ಜೆಎಸ್‌ಎಸ್, ಭಾರತ್ ಕ್ಯಾನ್ಸರ್ ಆಸ್ಪತ್ರೆ ಸೇರಿ ಎಲ್ಲಾ ಆಸ್ಪತ್ರೆಗಳಲ್ಲೂ ರೋಗಿಗಳಿಗೆ ತೊಂದರೆ ಉಂಟಾಯಿತು. ಘೋಷಣಾ ಫಲಕಗಳನ್ನು ಪ್ರದರ್ಶಿಸಿ ಆಸ್ಪತ್ರೆಗಳ ಮುಂದೆ ವೈದ್ಯರು ಪ್ರತಿಭಟನಾ ಧರಣಿ ನಡೆಸಿದರು. ಆದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನ ಜಿಲ್ಲಾಸ್ಪತ್ರೆ, ತಾಲೂಕು ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರ ಮತ್ತು ■ 2ನೇ ಪುಟಕ್ಕೆ

ಒಂದನೇ ಪುಟದಿಂದ

ರಾಜ್ಯಪಾಲರ ಅನುಮತಿ

ಸಹಿ ಹಾಕಿ ಪ್ರಾಸಿಕ್ಯೂಷನ್‌ಗೆ ಹಸಿರು ನಿಶಾನೆ ನೀಡಿದ್ದಾರೆ. ರಾಜ್ಯಪಾಲರ ಆದೇಶದ ಪ್ರತಿಯನ್ನು ಅವರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಇಂದು ರವಾನಿಸಿದ್ದಾರೆ. ಮುಡಾ ವತಿಯಿಂದ ತಮ್ಮ ಪತ್ನಿ ಹೆಸರಿನಲ್ಲಿ 14 ಬದಲಿ ನಿವೇಶನಗಳನ್ನು ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ ಪಡೆದಿರುವ ಬಗ್ಗೆ ಫಿರ್ಯಾದುದಾರರು ಸಲ್ಲಿಸಿರುವ ದಾಖಲೆಗಳಿಂದ ಆರೋಪ ಮೇಲ್ನೋಟಕ್ಕೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕ್ರಿಮಿನಲ್ ದಾವೆಗೆ ಅನುಮತಿ ನೀಡಿರುವುದಾಗಿ ರಾಜ್ಯಪಾಲರು ಸರ್ಕಾರಕ್ಕೆ ಕಳುಹಿಸಿರುವ ಆರು ಪುಟಗಳ ಪತ್ರದಲ್ಲಿ ತಿಳಿಸಿದ್ದಾರೆ.

ಮೂವರು ಪ್ರತ್ಯೇಕ ದೂರು: ದೂರುದಾರರಾದ ಪ್ರದೀಪ್‌ಕುಮಾರ್ ಎಸ್.ಪಿ., ಟಿ.ಜೆ.ಅಬ್ರಹಾಂ ಹಾಗೂ ಮೈಸೂರಿನ ಸ್ನೇಹಮಯಿ ಕೃಷ್ಣ ಅವರಿಂದ, ಮುಡಾ ವತಿಯಿಂದ ಮುಖ್ಯಮಂತ್ರಿ ಅವರು ತಮ್ಮ ಕುಟುಂಬಕ್ಕೆ 14 ನಿವೇಶನಗಳನ್ನು ಪಡೆದು ಅಧಿಕಾರ ದುರುಪಯೋಗ ಮಾಡಿಕೊಂಡು ರಾಜ್ಯ ಬೊಕ್ಕಸಕ್ಕೆ ದೊಡ್ಡ ಪ್ರಮಾಣದಲ್ಲಿ ನಷ್ಟ ಉಂಟು ಮಾಡಿದ್ದಾರೆ ಎಂದು ಪ್ರತ್ಯೇಕ ದೂರುಗಳು ಸಲ್ಲಿಕೆಯಾಗಿದ್ದವು. ದೂರಿನ ಜೊತೆಗೆ ಪೂರಕ ದಾಖಲೆಗಳನ್ನೂ ಸಲ್ಲಿಸಿದ್ದರು. ಇವೆಲ್ಲವನ್ನೂ ಕೂಲಂಕುಷವಾಗಿ ಪರಿಶೀಲಿಸಿ, ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988ರ ಸೆಕ್ಷನ್ 17ಎ ಹಾಗೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 2023ರ ಸೆಕ್ಷನ್ 218ರಡಿ ಮೊಕದ್ದಮೆ ದಾಖಲಿಸಲು ಅನುಮತಿ ನೀಡಲಾಗಿದೆ ಎಂದು ಮುಖ್ಯಕಾರ್ಯದರ್ಶಿ ಅವರಿಗೆ ಬರೆದಿರುವ ಪತ್ರದಲ್ಲಿ ಸ್ಪಷ್ಟಪಡಿಸಲಾಗಿದೆ. ಹಗರಣಕ್ಕೆ ಸಂಬಂಧಿಸಿದಂತೆ ಮೂರು ಮಂದಿ ದೂರು ನೀಡಿದ ನಂತರ ಹಾಗೂ ಪೂರಕ ದಾಖಲೆಗಳನ್ನು ಪರಿಶೀಲಿಸಿದ ರಾಜ್ಯಪಾಲರು, ಜೂನ್ 27ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮುಖ್ಯಕಾರ್ಯದರ್ಶಿ ಮೂಲಕ ಶೋಕಾಸ್ ನೋಟಿಸ್ ನೀಡಿದ್ದರು.

ಈ ನೋಟಿಸ್‌ಗೆ ಮುಖ್ಯಮಂತ್ರಿ ಅವರು, 70 ಪುಟಗಳ ಸವಿಸ್ತಾರವಾದ ಉತ್ತರವನ್ನು ರಾಜ್ಯಪಾಲರಿಗೆ ನೀಡಿ, ಸದರಿ ಪ್ರಕರಣದಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ, ಶೋಕಾಸ್ ನೋಟಿಸ್ ಹಿಂಪಡೆಯುವಂತೆ ಮನವಿ ಮಾಡಿದ್ದರು.

ಪತ್ರ ಬರೆಯುವುದಕ್ಕೂ ಮುನ್ನ ಪಕ್ಷದ ವರಿಷ್ಠರು ಹಾಗೂ ಸಂಪುಟ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ, ಅವರ ಸಲಹೆಯಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಸಭೆ ನಡೆಸಿ, ರಾಜ್ಯಪಾಲರ ಪತ್ರದ ಬಗ್ಗೆ ಸವಿಸ್ತಾರ ಚರ್ಚೆ ನಡೆಸಿ, ಮುಖ್ಯಮಂತ್ರಿ ಅವರಿಗೆ ನೀಡಿರುವ ಶೋಕಾಸ್ ನೋಟಿಸ್ ಅನ್ನು ಹಿಂಪಡೆಯುವ ನಿರ್ಣಯ ತೆಗೆದುಕೊಳ್ಳಲಾಗಿತ್ತು.

ಸಂಪುಟದ ನಿರ್ಣಯವನ್ನು ಅಂದಿನ ಸರ್ಕಾರದ ಮುಖ್ಯಕಾರ್ಯದರ್ಶಿ ರಜನೀಶ್ ಗೋಯಲ್ ರಾಜಭವನಕ್ಕೆ ರವಾನಿಸಿದ್ದರು. ಇದರ ನಡುವೆಯೇ ಮುಖ್ಯಮಂತ್ರಿ ಅವರು, ಬಿಜೆಪಿ ಆಡಳಿತದಲ್ಲಿ ಕೆಲವು ಸಚಿವರ ವಿರುದ್ಧ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಕ್ರಮ ಜರುಗಿಸಲು ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ರಾಜಭವನಕ್ಕೆ ಬಂದ ದೂರುಗಳ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಶ್ನಿಸಿದ್ದರು. ಮುಖ್ಯಮಂತ್ರಿ ಹಾಗೂ ಸರ್ಕಾರದ ಪತ್ರಗಳು ರಾಜಭವನಕ್ಕೆ ತಲುಪಿದ ನಂತರ ರಾಜ್ಯಪಾಲರು, ಕಾನೂನು ತಜ್ಞರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ್ದಲ್ಲದೆ, ದೂರುದಾರರನ್ನೂ ಕರೆಸಿಕೊಂಡು ಹೆಚ್ಚಿನ ವಿವರಣೆ ಪಡೆದಿದ್ದರು. ಈ ಎಲ್ಲಾ ಬೆಳವಣಿಗೆಯ 20 ದಿನಗಳ ನಂತರ ರಾಜ್ಯಪಾಲರು ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲ್ಲ

ಬಳಸಿಕೊಳ್ಳುತ್ತಿದೆ. ಬಿಜೆಪಿಯವರಿಗೆ ನನ್ನ ರಾಜೀನಾಮೆ ಕೇಳಲು ಯಾವುದೇ ನೈತಿಕತೆ ಇಲ್ಲ. ಕಾಂಗ್ರೆಸ್ ಸರ್ಕಾರ ಹಾಗೂ ಗ್ಯಾರಂಟಿ ಯೋಜನೆಗಳ ಯಶಸ್ಸು ಅವರಿಗೆ ಸಹಿಸಲು ಆಗುತ್ತಿಲ್ಲ, ಕೇಂದ್ರ ಸರ್ಕಾರ ಸಾಮಾಜಿಕ ನ್ಯಾಯ ಹಾಗೂ ನಮ್ಮ ಪಂಚ ಯೋಜನೆಗಳ ವಿರುದ್ಧವಾಗಿದೆ, ಬಿಜೆಪಿಯ ಈ ನಿಲುವಿಗೆ ಜೆಡಿಎಸ್ ಬೆಂಬಲ ನೀಡಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೂ ಅಭದ್ರಗೊಳಿಸುವ ದೊಡ್ಡ ಷಡ್ಯಂತ್ರ ನಡೆದೇ ಇತ್ತು, ಈಗ ಬಿಜೆಪಿ-ಜೆಡಿಎಸ್ ಹಾಗೂ ರಾಜ್ಯದ ಕೆಲವು ಮುಖಂಡರು ಈ ಷಡ್ಯಂತ್ರ ನಡೆಸಿದ್ದಾರೆ. ಉತ್ತರಾಖಂಡ, ಜಾರ್ಖಂಡ, ದೆಹಲಿಯಲ್ಲಿ ಮಾಡಿದಂತೆ ಕರ್ನಾಟಕದಲ್ಲೂ ಷಡ್ಯಂತ್ರ ನಡೆದಿದೆ, ಮೇಲ್ನೋಟಕ್ಕೆ ನನ್ನ ಮೇಲೆ ಯಾವುದೇ ಪ್ರಕರಣ ಇಲ್ಲ. ನನ್ನ ವಿರುದ್ಧ ಪ್ರಾಸಿಕ್ಯೂಷನ್‌ಗೆ ನೀಡಿರುವುದು ಸಂವಿಧಾನಬಾಹಿರ, ಇದರ ವಿರುದ್ಧ ನಾನು ಕಾನೂನು ಹೋರಾಟ ನಡೆಸುತ್ತೇನೆ ಎಂದರು.

ಹೈಕೋರ್ಟ್‌ನಲ್ಲಿ 'ಕೇವಿಯಟ್' ಸಲ್ಲಿಕೆ!

ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ನೀಡಿರುವ ಅನುಮತಿಯನ್ನು ರದ್ದುಪಡಿಸಬೇಕು ಎಂದು ಕೋರಿ ಹೈಕೋರ್ಟ್ ಮೆಟ್ಟಿಲೇರಿದರೆ ಆಗ ನಮ್ಮ ವಾದ ಆಲಿಸದೆ ಯಾವುದೇ ಆದೇಶ ಮಾಡಬಾರದು ಎಂದು ಕೇವಿಯಟ್ ಅರ್ಜಿದಾರರು ಕೋರಿದ್ದಾರೆ. ಹೈಕೋರ್ಟ್ ವಕೀಲ ಎಂ.ಎಚ್.ಪ್ರಕಾಶ್ ವಕಾಲತ್ತು ವಹಿಸಿದ್ದಾರೆ ಎಂದು ತಿಳಿದುಬಂದಿದೆ.

"ಮುಡಾ ಹಗರಣವನ್ನು ತನಿಖೆಗೆ ಒಳಪಡಿಸಲು ಆದೇಶಿಸಬೇಕು" ಎಂದು ಕೋರಿ ಎಸ್.ಪಿ.ಪ್ರದೀಪ್ ಕುಮಾರ್ ಈಗಾಗಲೇ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನಲ್ಲಿ ಖಾಸಗಿ ದೂರು ದಾಖಲಿಸಿದ್ದಾರೆ. ಮುಡಾದಲ್ಲಿ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರು ಅಕ್ರಮವಾಗಿ 14 ನಿವೇಶನ ಪಡೆದಿದ್ದಾರೆ ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ಕೇವಿಯಟ್ ಸಲ್ಲಿಕೆ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅರ್ಜಿದಾರ ಪ್ರದೀಪ್ ಕುಮಾರ್, 'ಕಾನೂನು ಪ್ರಕಾರ ಸಿದ್ದರಾಮಯ್ಯ ಅವರು ಹೈಕೋರ್ಟ್‌ನ ಮೊರೆ ಹೋಗಬಹುದು. ಕೇವಿಯಟ್ ಇಲ್ಲದೇ ಹೋದರೆ ಅವರಿಗೆ ರಿಲೀಫ್ ಕೂಡ ಸಿಗಬಹುದು. ಹೀಗಾಗಿ, ನಾನು ಕೇವಿಯಟ್ ಸಲ್ಲಿಸಿದ್ದೇನೆ ಎಂದಿದ್ದಾರೆ.

ರಾಜ್ಯಪಾಲರೇ ರಾಜೀನಾಮೆ ನೀಡಬೇಕು

ಬಾಹಿರವಾಗಿ ಅನುಮತಿಸಿದ್ದಾರೆ. ಅವರು ಅನುಮತಿ ನೀಡಿದ್ದು ಕೂಡ ನಿಯಮದಲ್ಲಿ ಇಲ್ಲ. ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಾಗ ಕೇಂದ್ರ ಸರ್ಕಾರದ ಎಸ್‌ಓಪಿ ಪಾಲಿಸಿಲ್ಲ. ನಮ್ಮ ಸರ್ಕಾರ ಬಡವರ ಪರ ಇರುವಂತಹ ಸರ್ಕಾರ. ಬಿಜೆಪಿಯವರು ಗ್ಯಾರಂಟಿಗಳ ವಿರುದ್ಧವಿದ್ದಾರೆ. ನಾವು ನುಡಿದಂತೆ ನಡೆದಿದ್ದೇವೆ, ಬಡವರ ಪರ ಕೆಲಸ ಮಾಡುತ್ತಿದ್ದೇವೆ. ನನ್ನ ರಾಜಕೀಯವನ್ನು ತೇಜೋವಧೆ ಮಾಡಲು ಅವರ ಈ ಪ್ರಯತ್ನ ಯಶಸ್ವಿಯಾಗಲ್ಲ. ನನ್ನ ತೇಜೋವಧೆ ಮಾಡುವುದು ಬಿಜೆಪಿಯವರ ಧ್ಯೇಯ. ನಮ್ಮ ಅಭೂತಪೂರ್ವ ಗೆಲುವು ಅವರಿಗೆ ಸಹಿಸಲು ಆಗುತ್ತಿಲ್ಲ ಎಂದು ಕಿಡಿಕಾರಿದ್ದಾರೆ. ನಾವು ಬಡವರ ಪರ ಇದ್ದೇವೆಂದು ಟಾರ್ಗೆಟ್ ಮಾಡುತ್ತಿದ್ದಾರೆ. ರಾಜ್ಯಪಾಲರು ಈ ರೀತಿ ಮಾಡುತ್ತಾರೆಂದು ನಮಗೆ ಗೊತ್ತಿತ್ತು. ಇದರಿಂದ ನಾವು ಇನ್ನೂ ಗಟ್ಟಿಯಾಗುತ್ತಿದ್ದೇವೆ. ಇದರಿಂದ ಬಿಜೆಪಿ-ಜೆಡಿಎಸ್‌ನವರು ಬಯಲಿಗೆ ಬರುತ್ತಾರೆ ಎಂದು ವಾಗ್ದಾಳಿ ಮಾಡಿದ್ದಾರೆ. ಟಿಜೆ ಅಬ್ರಹಾಂ ದೂರು ನೀಡಿದ ಕೆಲ ಗಂಟೆಗಳಲ್ಲೇ ನನಗೆ ರಾಜ್ಯಪಾಲರ ಕಚೇರಿಯಿಂದ ಶೋಕಾಸ್ ನೋಟಿಸ್ ನೀಡಲಾಗಿದೆ. ಲೋಕಾಯುಕ್ತದವರು ಹೆಚ್.ಡಿ. ಕುಮಾರಸ್ವಾಮಿ, ಜೊಲ್ಲೆ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಅನುಮತಿ ಕೋರಿದ್ದರು. ಹೆಚ್‌ಡಿಕೆ ವಿರುದ್ಧ ಪ್ರಕರಣದ ತನಿಖೆಯಲ್ಲಿ ಸಾಬೀತು ಎಂದು ಮನವಿ ಮಾಡಿದ್ದರು. ಆದರೆ ಮುಡಾ ಕೇಸ್‌ನಲ್ಲಿ ನನ್ನ ತನಿಖೆಯೇ ನಡೆದಿಲ್ಲ ಎಂದರು. ಫೆಬ್ರವರಿ 26ರಂದು ಮುರುಗೇಶ್ ನಿರಾಣಿ ವಿರುದ್ಧ ಅನುಮತಿ ಕೇಳಿದ್ದರು. ಭ್ರಷ್ಟಾಚಾರದಲ್ಲಿ ನೇರವಾಗಿ ಭಾಗಿದ್ದಾರೆ. ಹಾಗಾಗಿ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿದ್ದಾರೆ. ಇವರೆಲ್ಲ ವಿರುದ್ಧ ರಾಜ್ಯಪಾಲರು ಅನುಮತಿ ಕೊಟ್ಟಿಲ್ಲ ಆದರೆ, ನನ್ನ ಕೇಸ್‌ನಲ್ಲಿ ಆತುರವಾಗಿ ಅನುಮತಿ ಕೊಟ್ಟಿದ್ದಾರೆ. ಮುಡಾ ಪ್ರಕರಣದಲ್ಲಿ ನನ್ನ ಪಾತ್ರ ಇಲ್ಲ, ನನ್ನ ಸಹಿ ಇಲ್ಲ. ನನ್ನ ತನಿಖೆಯಾಗಿ, ಏನೂ ಇಲ್ಲದೇ ಅನುಮತಿ ನೀಡಿದ್ದಾರೆ. ರಾಜ್ಯಪಾಲರು ರಾಜಕೀಯಕ್ಕಾಗಿ ಅನುಮತಿ ನೀಡಿದ್ದಾರೆ. ಕೇಂದ್ರ ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ಮಾಡಿದ್ದಾರೆ.

ನಾಳೆ ರಾಜ್ಯಾದ್ಯಂತ ಪ್ರತಿಭಟನೆ: ಡಿಕೆಶಿ

ಬೆಳಗ್ಗೆ 11 ಗಂಟೆಗೆ ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಂಡಿದ್ದು, ಪಕ್ಷದ ಎಲ್ಲಾ ಕಾರ್ಯಕರ್ತರು, ನಾಯಕರು ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದ್ದಾರೆ. ರಾಜ್ಯಪಾಲರ ಅಸಂವಿಧಾನಿಕ ನಡೆಯನ್ನು ಖಂಡಿಸಿ ರಾಷ್ಟ್ರಪತಿಗಳಿಗೆ ನೇರವಾಗಿ ಇ-ಮೈಲ್ ಮೂಲಕ ಹಾಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮೂಲಕ ಜ್ಞಾಪನಾ ಪತ್ರವನ್ನು ನೀಡಬೇಕು ಎಂದು ಸೂಚಿಸಲಾಗಿದೆ. ಪ್ರತಿಭಟನೆ ನಡೆಯುವ ಸ್ಥಳಕ್ಕೆ ಕನಿಷ್ಠ ಅರ್ಧ ಕಿಲೋಮೀಟರ್ ಪಾದಯಾತ್ರೆ ಮೂಲಕ ಹೋಗಿ ಪ್ರತಿಭಟನೆ ಆರಂಭಿಸಬೇಕು. ಪ್ರತಿಭಟನೆಯಲ್ಲಿ ಎಲ್ಲಾ ಸಂಬಂಧಪಟ್ಟ ಸಚಿವರು, ಸಂಸದರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ಕೆಪಿಸಿಸಿ ಪದಾಧಿಕಾರಿಗಳು, ಕೆಪಿಸಿಸಿ ಸದಸ್ಯರು, ಡಿಸಿಸಿ, ಬಿಸಿಸಿ ಪದಾಧಿಕಾರಿಗಳು, ಮುಂಚೂಣಿ ಘಟಕ/ಸೆಲ್/ವಿಭಾಗಗಳ ಅಧ್ಯಕ್ಷರು/ಪದಾಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಸದಸ್ಯರು, ವಾರ್ಡ್, ಪಂಚಾಯಿತಿ ಹಾಗೂ ಬೂತ್ ಮಟ್ಟದ ಕಾರ್ಯಕರ್ತರು ಹಾಗೂ ಇತರ ಎಲ್ಲ ಸ್ಥಳೀಯ ಮುಖಂಡರುಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಸೂಚನೆ ನೀಡಲಾಗಿದೆ.

ವೈದ್ಯರ ಪ್ರತಿಭಟನೆ

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಂದಿನಂತೆ ಕಾರ್ಯನಿರ್ವಹಿಸಿದವು. ಆದರೆ, ಕೆಲವು ವೈದ್ಯರು ಮಾತ್ರ ಅಧಿಕೃತವಾಗಿ ರಜಾ ಮಂಜೂರು ಮಾಡಿಸಿಕೊಂಡು ಮುಷ್ಕರದಲ್ಲಿ ಪಾಲ್ಗೊಂಡಿದ್ದರು ಎಂದು ಮೂಲಗಳು ತಿಳಿಸಿವೆ. ಪ್ರಯೋಗಾಲಯ, ಡಯಾಗ್ನೋಸ್ಟಿಕ್ ಸೆಂಟರ್‌ಗಳು, ಕೆಲವು ಖಾಸಗಿ ಕ್ಲಿನಿಕ್‌ಗಳನ್ನು ಬಂದ್ ಮಾಡಿ ವೈದ್ಯರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಓಪಿಡಿ ಬಂದ್ ಮಾಡಿದ್ದರಿಂದ ಸಾಮಾನ್ಯ ರೋಗಿಗಳು ಸೇವೆ ಸಿಗದೆ ವಾಪಸ್ಸಾದರು. ಆದರೆ, ಆಪರೇಷನ್‌ಗಳು, ತುರ್ತು ಚಿಕಿತ್ಸಾ ವಿಭಾಗ, ಒಳರೋಗಿ ವಿಭಾಗಗಳ ಸೇವೆಗಳು ಎಂದಿನಂತೆ ನಡೆದವು.

ಆ.23ರಂದು ಅರಮನೆ ಪ್ರವೇಶಿಸಲಿರುವ ದಸರಾ ಗಜಪಡೆ



ಸಂಗ್ರಹ ಚಿತ್ರ

ಮೈಸೂರು, ಆ.17(ಎಂಟಿವೈ)– ದಸರಾ ಮಹೋತ್ಸವ ಪ್ರಮುಖ ಆಕರ್ಷಣೀಯ ಕೇಂದ್ರ ಬಿಂದು ಗಜಪಡೆ ಆಗಮನಕ್ಕೆ ದಿನಗಣನೆ ಆರಂಭವಾಗಿದ್ದು, ಹುಣಸೂರು ತಾಲೂಕಿನ ವೀರನ ಹೊಸಳ್ಳಿ ಬಳಿ ಆ.21ರಂದು ಬೆಳಗ್ಗೆ 10.10ರಿಂದ 10.40ರೊಳಗೆ ಸಲ್ಲುವ ಶುಭ ತುಲಾ ಲಗ್ನದಲ್ಲಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಮೊದಲ ತಂಡ 9 ಆನೆಗಳಿಗೆ ಪೂಜೆ ಸಲ್ಲಿಸಲಾಗುತ್ತದೆ.

ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಅ.3ರಿಂದ ಆರಂಭವಾಗಿ ಅ.12ರಂದು ಜಂಬೂಸವಾರಿ ಜರುಗಲಿದೆ. ಈ ಹಿನ್ನೆಲೆಯಲ್ಲಿ ಮೊದಲ ತಂಡದಲ್ಲಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ ಏಳು ಗಂಡು, ಎರಡು ಹೆಣ್ಣಾನೆಗಳು ಆಗಮಿಸಲಿದ್ದು, ಆ.21ರಂದು ಬೆಳಗ್ಗೆ 10.10ರಿಂದ 10.40ರೊಳಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಗಜಪಡೆಗೆ ಪೂಜೆ ಸಲ್ಲಿಸಲಿದ್ದಾರೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನ ಹೊಸಳ್ಳಿ ಗೇಟ್ ಬಳಿ ಆನೆಗಳಿಗೆ ಪುಷ್ಪಾರ್ಚನೆ ನೆರವೇರಿಸಿದ ಬಳಿಕ ಪುಷ್ಪಾರ್ಚನೆ ಮಾಡಲಾಗುತ್ತದೆ. ನಂತರ 11.20ರ ವೇಳೆಗೆ ನಾಗಾಪುರ ಹಾಡಿ ಸಮೀಪದ ಗಿರಿಜನ ವಸತಿ ಶಾಲೆ ಬಳಿ ಮೈದಾನದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮದ ಸ್ಥಳಕ್ಕೆ ಗಣ್ಯರು ಆನೆಗಳೊಂದಿಗೆ ಆಗಮಿಸಲಿದ್ದಾರೆ. ಮುಖ್ಯ ಅತಿಥಿಗಳ ಭಾಷಣ, ಮಾವುತರಿಗೆ ವಿಳ್ಯೆ ನೀಡಿ ಸನ್ಮಾನಿಸಿದ ಬಳಿಕ ಮಧ್ಯಾಹ್ನ 1.30ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ. ಆ ನಂತರ ಲಾರಿಗಳಲ್ಲಿ ಸಂಜೆ ವೇಳೆಗೆ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ಆವರಣ ತಲುಪಲಿವೆ.

ಶುಕ್ರವಾರ ಅರಮನೆಗೆ ಎಂಟ್ರಿ

ಆ.21ರಂದು ಸಂಜೆ ಅರಣ್ಯ ಭವನದ ತಲುಪಲಿರುವ ಗಜಪಡೆ ಅಲ್ಲೇ ವಿಶ್ರಾಂತಿ ಪಡೆಯಲಿವೆ. ಆ.23ರಂದು ಬೆಳಗ್ಗೆ ಅರಣ್ಯ ಇಲಾಖೆಯಿಂದ ಸಾಂಪ್ರದಾಯಿಕ ಪೂಜೆ ಸಲ್ಲಿಸಿದ ಬಳಿಕ ಅಶೋಕಪುರಂ, ಬಲ್ಲಾಳ್ ವೃತ್ತ ಜೆಎಲ್‌ಬಿ ರಸ್ತೆ ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ವೃತ್ತ, ಬಿ.ಎನ್.ರಸ್ತೆಯ ಮೂಲಕ ಜಯಮಾರ್ತಾಂಡ ದ್ವಾರದ ಬಳಿ ಆಗಮಿಸಲಿವೆ. ಅಂದು ಬೆಳಗ್ಗೆ 10ರಿಂದ 10.30ರೊಳಗೆ ಸಲ್ಲುವ ಶುಭ ತುಲಾ ಲಗ್ನದಲ್ಲಿ ಅರಮನೆ ವತಿಯಿಂದ ಗಜಪಡೆಗೆ ಸಾಂಪ್ರದಾಯಿಕ ಪೂಜೆ ಮಾಡಿ, ಅರಮನೆಗೆ ಗಜಪಡೆಯನ್ನು ಬರಮಾಡಿಕೊಳ್ಳಲಾಗುತ್ತದೆ. ನಂತರ ಅರಮನೆಯ ಆನೆ ಬಾಗಿಲ ಬಳಿ ಎಲ್ಲಾ 9 ಆನೆಗಳನ್ನು ತಂದು ಮಾವುತರಿಗೆ ಅರಮನೆ ಮಂಡಳಿ ವತಿಯಿಂದ ಅಗತ್ಯ ವಸ್ತುಗಳ ಕಿಟ್ ವಿತರಿಸ ಲಾಗುತ್ತದೆ. ಬಳಿಕ ಪ್ರತಿವರ್ಷದಂತೆ ಎಲ್ಲಾ ಆನೆಗಳ ಅರಮನೆ ಆವರಣದಲ್ಲಿ ಬೀಡು ಬಿಟ್ಟು, ಆ.25ರ ನಂತರ ಜಂಬೂಸವಾರಿ ತೆರಳುವ ಮಾರ್ಗದಲ್ಲಿ ತಾಲೀಮು ಆರಂಭಿಸಲಿವೆ.

ಬಂಡಿಪಾಳ್ಯದಲ್ಲೂ ಪ್ರತಿಭಟನೆ; ರಾಜ್ಯಪಾಲರ ವಿರುದ್ಧ ಆಕ್ರೋಶ



ಮೈಸೂರಿನ ಬಂಡಿಪಾಳ್ಯದ ಎಪಿಎಂಸಿ ಬಳಿ ರಿಂಗ್ ರಸ್ತೆ–ನಂಜನಗೂಡು ರಸ್ತೆ ಸಿಗ್ನಲ್‌ನಲ್ಲಿ ಶನಿವಾರ ಸಿದ್ದರಾಮಯ್ಯ ಅಭಿಮಾನಿಗಳು ಪ್ರತಿಭಟನೆ ನಡೆಸಿದರು.

ಮೈಸೂರು,ಆ.17(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ಕ್ರಮ ಖಂಡಿಸಿ ಬಂಡಿಪಾಳ್ಯ ಎಪಿಎಂಸಿ ಬಳಿಯ ರಿಂಗ್ ರಸ್ತೆ ಹಾಗೂ ನಂಜನಗೂಡು ರಸ್ತೆ ಸಿಗ್ನಲ್‌ನಲ್ಲಿಯೂ ಶನಿವಾರ ಸಿದ್ದರಾಮಯ್ಯ ಅಭಿಮಾನಿಗಳು ಪ್ರತಿಭಟನೆ ನಡೆಸಿದರು.

ಬಿಜೆಪಿ ಕೈಗೊಂಬೆಯಾಗಿ ವರ್ತಿಸುತ್ತಿರುವ ರಾಜ್ಯಪಾಲರಿಗೆ ಧಿಕ್ಕಾರ ಎಂಬ ಘೋಷಣೆ ಒಳಗೊಂಡ ಫಲಕಗಳನ್ನಿಡಿದು ರಾಜ್ಯಪಾಲರು ಹಾಗೂ ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಭಾವಚಿತ್ರ ಒಳಗೊಂಡ ಫಲಕಗಳನ್ನು ಸುಟ್ಟು ಕಿಡಿಕಾರಿದರು.

ಅರ್ಧ ತಾಸಿಗೂ ಹೆಚ್ಚು ಕಾಲ ರಸ್ತೆ ಮಧ್ಯೆಯೇ ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಈ ಅವಧಿಯಲ್ಲಿ ರಸ್ತೆ ಸಂಚಾರಕ್ಕೂ ತೊಡಕುಂಟಾಯಿತು. ಮೈಸೂರು ಎಪಿಎಂಸಿ ಮಾಜಿ ಅಧ್ಯಕ್ಷ ಬಂಡಿಪಾಳ್ಯ ಬಸವರಾಜು ನೇತೃತ್ವ ವಹಿಸಿದ್ದ ಪ್ರತಿಭಟನೆಯಲ್ಲಿ ಮುಖಂಡರಾದ ಚೇತನ್ ಮೌರ್ಯ, ದಡದಹಳ್ಳಿ ಮಹದೇವು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಯಾತ್ರಾರ್ಥಿಗಳಿಗೆ ಬಸ್ಸುಗಳ ವ್ಯವಸ್ಥೆ

ಮೈಸೂರು: ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿನಲ್ಲಿ ಮಹಾರಾಷ್ಟ್ರದ ನಾಗಪುರದಲ್ಲಿನ ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಬಸ್ಸುಗಳ ವ್ಯವಸ್ಥೆ ಕಲ್ಪಿಸಲಾಗಿದೆ. ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳು https://swdservices.karnataka.gov.inನಲ್ಲಿ ಅರ್ಜಿ ಆ.31ರೊಳಗೆ ಸಲ್ಲಿಸ ಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.



ಜಾಗೃತಿ...
ರವಿ ಸ್ನೇಹ ಬಳಗ ಸೇವಾ ಟ್ರಸ್ಟ್ ವತಿಯಿಂದ ಪಿಓಪಿ ಗಣಪತಿ ಬಳಸಬೇಡಿ ಹಾಗೂ ಮಣ್ಣಿನ ಗಣಪತಿ ಬಳಸಿ ಪರಿಸರ ಸಂರಕ್ಷಿಸಿ ಕುರಿತು ಜಾಗೃತಿ ಮೂಡಿಸಲಾಯಿತು. ಈ ವೇಳೆ ಆರ್.ರವಿ (ಡೆಲ್ಲಿ) ಇದ್ದರು.

ವಿಕ್ರಾಂತ್ ಪಿ.ದೇವೇಗೌಡರಿಗೆ ಸನ್ಮಾನ...




ಮೈಸೂರಿನ ಉದ್ಯಮಿ, ಶ್ರೀ ವೆಂಕಟೇಶ್ವರ ಟ್ರೇಡರ್ಸ್ ಮಾಲೀಕ ವಿಕ್ರಾಂತ್ ಪಿ.ದೇವೇಗೌಡ ಅವರನ್ನು ಮೈಸೂರು ಸೆಂಟ್ರಲ್ ಫಸ್ಟ್ ಸರ್ಕಲ್‌ನ ಕಾರ್ಯದರ್ಶಿ ಕುಮಾರ್ ಅಭಿನಂದಿಸಿದರು. ಈ ವೇಳೆ ಕನ್ನಡವೇ ಸತ್ಯ ರಂಗಣ್ಣ, ರಘುರಾಂ, ಯಮುನಾಗೌಡ, ಫಸ್ಟ್ ಸರ್ಕಲ್ ಮೈಸೂರು ವಿಭಾಗದ ಅಧ್ಯಕ್ಷ ಚೇತನ್ ಇದ್ದರು.

ನಾಳೆ ಶನಿ ಮಹಾಶಾಂತಿ


ಮೈಸೂರು, ಆ.17–ಮೈಸೂರಿನ ದೇವರಾಜ ಮೊಹಲ್ಲಾದ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಆ.19ರಂದು ಹುಣ್ಣಿಮೆ ಪ್ರಯುಕ್ತ ವಿಶೇಷವಾಗಿ ಕರ್ಕಾಟಕ, ತುಲಾ, ಮಕರ, ಕುಂಭ ಮೀನಾ ರಾಶಿಯವರಿಗೆ ಶನಿ ಮಹಾಶಾಂತಿ ಮತ್ತು ಬಾಧಕ ನಿವಾರಕ ಸುದರ್ಶನ ಹೋಮ, ಕುಜ ದೋಷ ನಿವೃತ್ತಿ ಶಾಂತಿ, ರಾಹು–ಕೇತು ಶಾಂತಿ, ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ ಅಂದು ಬೆಳಗ್ಗೆ 7.30ಕ್ಕೆ ಸಂಕಲ್ಪ, 9.30ಕ್ಕೆ ಹೋಮ ಪ್ರಾರಂಭ ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ ಹಾಗೂ ಮಹಾ ಮಂಗಳಾರತಿ ನೆರವೇರುವುದು. ವಿವರಗಳಿಗಾಗಿ ಮೈಕುಮಾರ್, ಜಾತಕ ವಿಮರ್ಶಕರು (9845183392, 9845183399) ಅವರನ್ನು ಸಂಪರ್ಕಿಸಬಹುದು.

ಜವರಮ್ಮ ನಿಧನ



ಕೆ.ಆರ್.ಪೇಟೆ, ಆ.17– ತಾಲೂಕಿನ ಮಾಕವಳ್ಳಿ ಗ್ರಾಮದ ಹಿರಿಯ ಯಜಮಾನ ರಾಮೇಗೌಡರ ಧರ್ಮಪತ್ನಿ ಜವರಮ್ಮ(75) ಗುರುವಾರ ಮುಂಜಾನೆ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಶುಕ್ರವಾರ ಮಧ್ಯಾಹ್ನ ನಡೆಯಿತು. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.08.2024 ಭಾನುವಾರ, ಮಳೆ ನಕ್ಷತ್ರ: ಮಖ 17.08.2024ರಿಂದ 30.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಉಷಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** 21ನೇ ಚಾತುರ್ಮಾಸ್ಯ ವ್ರತ, ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರಿಂದ ದತ್ತಯಾಗ, ಶ್ರೀ ಮದ್ರಾಮಾಯಣ ಯಾಗ ಮಹಾಪೂರ್ಣಾಹುತಿ, ದತ್ತ ಯಾಗ ಮಹಾಪೂರ್ಣಾಹುತಿ, ದತ್ತ ಸ್ವಾಮಿಗೆ ತೈಲಾಭಿಷೇಕ, ಸ್ಥಳ: ಆಶ್ರಮದ ಆವರಣ, ನಂಜನಗೂಡು ರಸ್ತೆ.

■ **ಮೈಸೂರು ಜಿಲ್ಲಾ ಅಮೆಚೂರ್ ಥ್ರೋಬಾಲ್ ಅಸೋಸಿಯೇಷನ್:** ಪ್ರೌಢಶಾಲಾ ಬಾಲಕರು, ಬಾಲಕಿಯರಿಗೆ ಜಿಲ್ಲಾ ಮಟ್ಟದ ಥ್ರೋಬಾಲ್ ಪಂದ್ಯಾವಳಿ, ಉದ್ಘಾಟನೆ: ಡಾ.ಸವಿತಾ ಪ್ರಶಾಂತ್, ಅಧ್ಯಕ್ಷತೆ: ಎಂಡಿಎಟಿಎ ಅಧ್ಯಕ್ಷ ಮಶೋದ ಜಾವೀದ್, ಗೌರವ ಅತಿಥಿಗಳು: ಸುಧೀರ್ ಭಟ್, ಡಾ.ಪಿ.ಕೃಷ್ಣಯ್ಯ, ಸ್ವರೂಪಿಣಿ, ಭವಾನಿ ನಾಗೇಶ್, ಸ್ಥಳ: ಮಾನಸಸರೋವರ ಪುಷ್ಕರಿಣಿ ವಿದ್ಯಾಶ್ರಮ ಮೈದಾನ, ಬೆಳಗ್ಗೆ 9.30ಕ್ಕೆ

■ **ಅನುಗ್ರಹ ಪ್ರಕಾಶನ** : ಪ್ರಕಾಶ್ ರಾಜ್ ಅವರ ಸಾರಾ ಪುಸ್ತಕ ಬಿಡುಗಡೆ ಸಮಾರಂಭ, ಸ್ಥಳ: ಹೆರಿಟೇಜ್ ಹೌಸ್, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ಶ್ರೀ ಮಾತಾ ಜನಪದ ಚಾರಿಟೆಬಲ್ ಟ್ರಸ್ಟ್** : ಉದ್ಘಾಟನೆ–ಸಾಂಸ್ಕೃತಿಕ ಕಾರ್ಯಕ್ರಮಗಳು, ಉದ್ಘಾಟನೆ: ಪ್ರೊ.ವೀರನಗೌಡ ಮರಿಗೌಡ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಮಾಜಿ ಯೋಗ ಗಜಾನನ ಭಟ್, ಎಂ.ವಿ.ರಮೇಶ್, ಶಶಿಕಲಾ ಸುರೇಂದ್ರ, ಮ.ನ. ಲತಾಮೋಹನ್, ಟಿ. ಸತೀಶ್ ಜವರೇಗೌಡ, ಡಾ. ರಘುರಾಂ ವಾಜಪೇಯಿ, ಪುರಭವನ, ಬೆಳಗ್ಗೆ 10ಕ್ಕೆ.

■ **ಆರ್ಟ್ ಆಫ್ ಲಿವಿಂಗ್** : ನಾಡಿ ಪರೀಕ್ಷೆ ಕಾರ್ಯಕ್ರಮ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ** : ಆಮವಾತ (ರುಮಟೈಡ್ ಆರ್ಥ್ರೈಟೀಸ್) ಕುರಿತು ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ, ಮೈಸೂರು ವಿಭಾಗ** : ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ 133ನೇ ಜಯಂತಿ ಪ್ರಯುಕ್ತ ಸಾಧಕರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಮನೋರಖ್ಖಿತ ಬಂತೇಜಿ, ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು : ಗೃಹ ಸಚಿವ ಡಾ. ಜಿ. ಪರಮೇಶ್ವರ್, ಸಚಿವರಾದ ಸತೀಶ್ ಜಾರಕಿಹೊಳಿ, ಪ್ರಿಯಾಂಕ ಎಂ. ಖರ್ಗೆ, ಅಧ್ಯಕ್ಷತೆ : ಸಂಘದ ರಾಜ್ಯಾಧ್ಯಕ್ಷ ಡಿ. ಚಂದ್ರಶೇಖರಯ್ಯ, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ನಾಯಕರ ಯುವಸೇನೆ** : ಪ್ರತಿಭಾ ಪುರಸ್ಕಾರ, ಸಾಧಕರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ: ಶಾಸಕ ಅನಿಲ್ ಚಿಕ್ಕಮಾದು, ಪ್ರತಿಭಾ ಪುರಸ್ಕಾರ : ವಿಧಾನಪರಿಷತ್ ಸದಸ್ಯ ಆರ್. ರಾಜೇಂದ್ರ ರಾಜಣ್ಣ, ಯತೀಂದ್ರ ಸಿದ್ದರಾಮಯ್ಯ, ರವಿ ಡಿ.ಚೆನ್ನಣ್ಣನವರ್, ಶಾಸಕರಾದ ಕೆ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಸಿದ್ದರಾಜು, ಸ್ಥಳ: ವಾಲ್ಮೀಕಿ ಭವನ, ವಿಜಯನಗರ 2ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವಪರ ಸಂಘಟನೆಗಳ ಸಹಭಾಗಿತ್ವ** : ಬಸವ ಧರ್ಮ ಜಾಗೃತಿ, ಅಭಿಯಾನ, ಇಷ್ಟಲಿಂಗ ಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ, ಡಾ. ಮಾತೆ ಬಸವಾಂಜಲಿ ದೇವಿ, ಶ್ರೀಮತಿ ಶಾರದ ಶಿವಲಿಂಗಸ್ವಾಮಿ ಅವರಿಂದ ಬಸವ ಧರ್ಮ ಪ್ರಚಾರದಲ್ಲಿ ಮಠಾ ಮಠಾಧೀಶರ ಪಾತ್ರ, 12ನೇ ಶತಮಾನದಲ್ಲಿ ಶರಣೆಯರ ಪಾತ್ರ ಕುರಿತು ಉಪನ್ಯಾಸ, ಸ್ಥಳ: ಡಾ. ಮಾತೆ ಬಸವಾಂಜಲಿ, ಬಸವ ಜ್ಞಾನಮಂದಿರ, ಮುನೇಶ್ವರನಗರ, ಬೆಳಗ್ಗೆ 11 ರಿಂದ.

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ** : ವೀರಶೈವ ಲಿಂಗಾಯಿತ ವಧುವರರ ಸಮಾವೇಶ, ಉದ್ಘಾಟನೆ : ವರುಣಾ ಮಹೇಶ್, ಅಧ್ಯಕ್ಷತೆ : ಶ್ರೀ ಬಸವರಾಜೇಂದ್ರ ಸ್ವಾಮಿ, ಸ್ಥಳ: ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪ, ಗನ್‌ಹೌಸ್ ಹತ್ತಿರ, ಮಧ್ಯಾಹ್ನ 3 ರಿಂದ.

■ **ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತಾರಿ ಸಾಂಸ್ಕೃತಿಕ ಸಂಘಟನೆ** : ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ, ಸ್ಥಳ: ಕಿರು ರಂಗಮಂದಿರ ಆವರಣ, ಕಲಾಮಂದಿರ, ಸಂಜೆ 4ರಿಂದ.

■ **ಸಂಘಟನಾ ಸಮಿತಿ** : ತಾಂತ್ರಿಕ ಶಿಕ್ಷಣ ದಿಗ್ಗಜ ಪ್ರೊ. ಎಂ.ಹೆಚ್.ಧನಂಜಯ ಅವರ ಸ್ಮರಣೆಗಾಗಿ 'ನಾವಿಗೇಟಿಂಗ್ ದಿ ಪಾತ್ ಆಫ್ ಟೆಕ್ನಿಕಲ್ ಎಜುಕೇಷನ್ ಪ್ರೊ.ಧನಂಜಯ ಅವರ ಇನ್ಸಿಪಿರೇಷನಲ್ ಜರ್ನಿ' ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗೌರವ ಅತಿಥಿಗಳು: ಕೇರಳ ತಾಂತ್ರಿಕ ವಿವಿ ಬೋರ್ಡ್ ಆಫ್ ಗವರ್ನರ್ಸ್ ಮಾಜಿ ಸದಸ್ಯ ಪ್ರೊ. ಪಿ.ಓ.ಜೆ.ಲೆಬ್ಬಾ, ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ವಿಟಿಯು ಮಾಜಿ ಕುಲಪತಿ ಡಾ.ಕೆ.ಬಾಲವೀರರೆಡ್ಡಿ, ಜೆಎಸ್‌ಎಸ್ ಪ್ರೊ–ಚಾನ್ಸಲರ್ ಡಾ.ಬಿ.ಸುರೇಶ್, ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಡಾ.ಸುಧನ್ವ ಧನಂಜಯ, ಸ್ಥಳ : ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸಂಜೆ 5ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ** : ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಪ್ರಾಧ್ಯಾಪಕರಾದ ಡಾ. ವಿನೋದ ಅವರಿಂದ ತನು ಬತ್ತಲೆ ಇದ್ದಡೇನು? ಹೊಲ ಶುದ್ಧವಲ್ಲ–ಮೋಳಿಗೆ ಮಾರಯ್ಯ ಕುರಿತು ಉಪನ್ಯಾಸ, ಸ್ಥಳ: ಡಾ. ವೀರಪ್ಪ ಡಾ. ಪುಷ್ಪಲತಾ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಸಂಸ್ಕೃತ ಭಾರತೀ** : ಸಂಸ್ಕೃತ ಸಪ್ತಾಹಃ, ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ಸ್ತೋತ್ರ ಸಾಹಿತ್ಯಮ್ ಅವರಿಂದ ಉಪನ್ಯಾಸ, ಸ್ಥಳ: ಭಗಿನಿ ಸೇವಾ ಸಮಾಜ, ವಿದ್ಯೋದಯ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ನಾದಬ್ರಹ್ಮ ಸಂಗೀತ ಸಭಾ** : ಡಾ. ಕೆ.ವಿ. ಮನೋಹರ್ ಸಂಸ್ಮರಣ ಕಾರ್ಯಕ್ರಮ, ವಿದುಷಿ ರಕ್ಷಿತಾ ರಮೇಶ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಜಿ.ಎಸ್. ರಾಮಾನುಜನ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ** : ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಮಹಾರಾಣಿ ಕಲಾ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ. ವಸಂತಕುಮಾರ್ ಅವರಿಂದ 'ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ' ಕುರಿತು ಪ್ರವಚನ, ವಿದುಷಿ ವಸಂತ ವೆಂಕಟೇಶ್ ಅವರಿಂದ ವಾಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ರಂಗವಾಹಿನಿ, ಚಾಮರಾಜನಗರ, ಜೆಪಿಐಇಆರ್:** ಸಂಚಿ ಹೊನ್ನಮ್ಮ ನಾಟಕೋತ್ಸವ ಹಾಗೂ ಸಂಚಿ ಹೊನ್ನಮ್ಮ ಮಹಿಳಾ ಪ್ರಶಸ್ತಿ ಪ್ರದಾನ ಸಮಾರಂಭ, ಬೆಂಗಳೂರಿನ ರಂಗ ಪಯಣ ತಂಡದಿಂದ ಗುಲಾಬಿ ಗ್ಯಾಂಗು–2 ನಾಟಕ ಪ್ರದರ್ಶನ, ಸಮಾರೋಪ ನುಡಿ: ರಂಗ ನಿರ್ದೇಶಕಿ ಕೆ.ಆರ್.ಸುಮತಿ, ಪ್ರಶಸ್ತಿ ಪ್ರದಾನ: ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ: ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಮಂಜುನಾಥ್, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ.

■ **ರಂಗಾಯಣ** : ನಿರ್ದಿಗಂತ ಕಲಾವಿದರಿಂದ ಮಂಟೇಸ್ವಾಮಿ ಕಾವ್ಯ ಪ್ರಯೋಗ ನಾಟಕ ಪ್ರದರ್ಶನ, ನಿರ್ದೇಶನ : ಡಾ. ಶ್ರೀಪಾದಭಟ್, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಕೆ.ಆರ್.ಮೊಹಲ್ಲಾ, ಸಂಜೆ 7ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಜಯಂತಿ. ವಿ.ಭಟ್, ಕೆ.ಪಿ.ರೇವತಿ, ವ್ಯಾಖ್ಯಾನ: ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.00 ರಾಷ್ಟ್ರೀಯ ಬಾಹ್ಯಾಕಾಶ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸರಣಿ–ಬಾಹ್ಯಾಕಾಶ ವಿಸ್ಮಯ, 9.05 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: 'ಯಾವ ಆರೋಗ್ಯ ಸಮಸ್ಯೆಯ ಸಂದರ್ಭದಲ್ಲಿ ರುಮೆಟಾಲಜಿಸ್ಟ್ ಮತ್ತು ಇಮ್ಯುನಾಲಜಿಸ್ಟ್ ತಜ್ಞರನ್ನು ಭೇಟಿಯಾಗಬಹುದು' ಕುರಿತು ಮೈಸೂರಿನ ರುಮೆಟಾಲಜಿಸ್ಟ್ ಮತ್ತು ಇಮ್ಯುನಾಲಜಿಸ್ಟ್ ತಜ್ಞರಾದ ಡಾ.ಚೆಂಗಪ್ಪ ಕೆ.ಜಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ: ಕಥೆ ಕೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ : ಪ್ರತಿಭಾ ಪಲ್ಲವ–ಅನಿವಾಸಿ ಭಾರತೀಯ ಭರತನಾಟ್ಯ ಹಾಗೂ ರಂಗಭೂಮಿ ಕಲಾವಿದೆ ಸೃಷ್ಟಿ ಭಾಟ್ನಿಯ ಪರಿಚಯ, ಪ್ರಸ್ತುತಿ: ಎಂ.ಎಸ್.ಭಾರತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿಯಲ್ಲಿ ಮಿಶ್ರಮಾಧುರ್ಯ **ಮಧ್ಯಾಹ್ನ:** 12.05 ವನಿತಾ ವಿಹಾರ–ಹಣತೆ–ಮಹಿಳಾ ಜಾಗೃತಿಯ ಬೆಳಕು ಸರಣಿಯಲ್ಲಿ ಕೋಲಾರದ ಮಹಿಳಾ ಉದ್ಯಮಿಗಳೊಂದಿಗೆ ಕಾರ್ಯಕ್ರಮ, ಭಾಗವಹಿಸುತ್ತಾರೆ–ಕೆ.ಎಸ್.ನಾಗವೇಣಿ, ಸ್ಥಾಪಕ ಅಧ್ಯಕ್ಷರು, ಯಶಸ್ವಿನಿ ಮಹಿಳಾ ಮಂಡಳಿ ಫಲಾನುಭವಿಗಳಾದ ವತ್ಸಲಾ, ಗಾಯಿತ್ರಿ ಮತ್ತು ಕೃತಿ ಆರ್, ನಡೆಸಿಕೊಡುತ್ತಾರೆ–ಪತ್ರಿಕೋದ್ಯಮಿ ಶೋಭಾ, ನಿರ್ಮಾಣ–ಕೆ.ಎಲ್.ರಾಜೇಶ್ವರಿ, 12.30 ದೇವರನಾಮ–ಸಂಪದಾ. ಜೆ. ಆಶೀಹಾಳ್, 12.45 ಜನಪದ ಸಂಗೀತ–ಹೆಗ್ಗಡಹಳ್ಳಿ ಕೃಷ್ಣೇಗೌಡ ಹಾಗೂ ಸಂಗಡಿಗರಿಂದ ಸೋಬಾನೆ ಪದ, 1.20 ಭಾವಗೀತೆಗಳು, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಶ್ರೀಕೃಷ್ಣದೇವರಾಯ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ವತ್ಸಾಕ್ಯ ವಧು, ಪ್ರಸ್ತುತಿ–ಕುಂದಾಪುರ ತಾಲೂಕು ಶಂಕರನಾರಾಯಣದ ಶ್ರೀಶಂಕರನಾರಾಯಣ ಯಕ್ಷಗಾನ ಕಲಾಸಂಘದ ಸದಸ್ಯರು, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ–ಲೋಕೇಶ್ವರಿ, 7.45 ಸುರಕ್ಷಿತ ಅಂತರ್ಜಾಲ–ಬಾನುಲಿ ಮಾಲಿಕೆ 'ಅಂತರ್ಜಾಲದಲ್ಲಿನ ಅಪಾಯಗಳು ಮತ್ತು ಪರಿಹಾರ', ಮಾತನಾಡುತ್ತಾರೆ: ಸಿರಿ ವಾನಳ್ಳಿ, 8.00 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಮಳವಳ್ಳಿ ಟೌನ್ ಕೀರ್ತಿನಗರದ ತಂಬೂರಿ ಗುರುಬಸವಯ್ಯ ಮತ್ತು ಅವರ ಮಡದಿ ನಾಗಮ್ಮ ಅವರೊಂದಿಗೆ ಸಂವಾದ, ಪ್ರಸ್ತುತಿ: ಅಬ್ದುಲ್ ರಶೀದ್, 9.15 ರಂಗಗೀತೆಗಳು–ಬಿ. ಭಾಗ್ಯಮ್ಮ, 9.30 ರಾಷ್ಟ್ರೀಯ ನಾಟಕ –ವಂದೇ ಮಾತರಂ, ಮೂಲ ಹಿಂದಿ–ವಿನೋದ್‌ಕುಮಾರ್, ಕನ್ನಡ ರೂಪಾಂತರ – ಮಾಲತಿ ಆರ್ ಭಟ್, ನಿರ್ಮಾಣ–ಸೂರ್ಯ ನಾರಾಯಣ ಭಟ್, 10.00 ರವಿವಾರದ ಅಖಿಲ ಭಾರತ ಸಂಗೀತ ಸಭೆ, ಸಂತೋಷ್ ಸಂತ್–ಕೊಳಲು

ಸಿದ್ದರಾಮಯ್ಯ ಈಗ ರಾಜೀನಾಮೆ ನೀಡಿ ಹೊರ ನಡೆಯುವುದು ಉತ್ತಮ

● ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅಭಿಮತ ● ಸಿಎಂ ಪತ್ನಿಯ 14 ನಿವೇಶನ ಮಾತ್ರವಲ್ಲ 5 ಸಾವಿರಕ್ಕೂ ಅಧಿಕ ನಿವೇಶನಗಳ ಬಗ್ಗೆ ತನಿಖೆಯಾಗಲಿ ● ಮುಡಾ ಅಧೋಗತಿಗೆ ಆಯುಕ್ತರಾಗಿದ್ದ ನಟೇಶ್, ದಿನೇಶ್ ಕುಮಾರ್ ಕಾರಣ

ಮೈಸೂರು, ಆ.17(ಎಸ್‌ಬಿಡಿ)– ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ, ಹೊರನಡೆಯುವುದು ಉತ್ತಮ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅಭಿಪ್ರಾಯಿಸಿದ್ದಾರೆ.

ರಾಜ್ಯಪಾಲರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ಬಗ್ಗೆ ಮೈಸೂರಿನಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಯಾರಿಗೂ ಬಗ್ಗುವುದು, ಜಗ್ಗುವುದು ಬೇಡ. ಆದರೆ ಕಾನೂನಿಗೆ ತಲೆಬಾಗಬೇಕು ಎಂದರು.

ಮುಡಾ ವಿಚಾರದಲ್ಲಿ ರಂಪ ಮಾಡಿಕೊಳ್ಳುವುದು ಬೇಡ. ಜನ ಅಧಿಕಾರ ಕೊಟ್ಟಿದ್ದಾರೆ. ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾರೆ. ಅವರು ಯಾವಾಗಲು ಕಾನೂನು ತನ್ನ ಪಾಡಿಗೆ ಕೆಲಸ ಮಾಡುತ್ತದೆ ಎಂದು ಹೇಳುತ್ತಾರೆ. ಅದೇ ರೀತಿ ಈಗಲೂ ಕಾನೂನು ಕೆಲಸ ಮಾಡಿದೆ. ಈಗ ರಾಜೀನಾಮೆ ಕೊಟ್ಟು, ಹೊರ ನಡೆಯುವುದು ಉತ್ತಮ. ಮೊದಲೇ ನಾನು ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದೆ. ದಯವಿಟ್ಟು ಸೈಟ್‌ಗಳನ್ನು ಮುಡಾಗೆ ವಾಪಸ್ ಕೊಡಿ. ನೀವು 14 ಸೈಟ್ ತೆಗೆದುಕೊಂಡು ಏನು ಮಾಡುತ್ತೀರಿ ಎಂದು ಪ್ರಶ್ನಿಸಿದರು. ರಾಜ್ಯಪಾಲರು ಬಿಜೆಪಿ ಕೈಗೊಂಬೆಯಾಗಿ ಕೆಲಸ ಮಾಡುತ್ತಾರೆ ಎಂಬ ಹೇಳಿಕೆ ಮಾಮೂಲಿ. ಎಲ್ಲಾ ಪಕ್ಷದವರು ಅವರಿಗೆ ಬೇಕಾದಾಗ ಇದನ್ನೇ ಹೇಳುತ್ತಾರೆ. ಆದರೆ ರಾಷ್ಟ್ರಪತಿ ಹಾಗೂ ರಾಜ್ಯಪಾಲರು ಯಾವಾಗಲೂ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುತ್ತಾರೆ. ಸಿದ್ದರಾಮಯ್ಯ ರಾಜೀನಾಮೆ ನೀಡಿದರೆ ಗೌರವ ಉಳಿಯುತ್ತದೆ. ಅದನ್ನು ಬಿಟ್ಟು ಹಠ ಮಾಡಬಾರದು. ಇಲ್ಲಿಯ ಕಾನೂನು ಹಾಗೂ ಜನರಿಗೆ ತಲೆಬಾಗಿ ತನಿಖೆ ಎದುರಿಸಬೇಕು ಎಂದು ಹೇಳಿದರು.



ಎ.ಹೆಚ್.ವಿಶ್ವನಾಥ್

ಸಮಗ್ರ ತನಿಖೆಯಾಗಲಿ: ಮುಖ್ಯಮಂತ್ರಿ ಸಿದ್ದರಾಮಯ್ಯನವರ ಧರ್ಮಪತ್ನಿಗೆ ನೀಡಿರುವ 14 ನಿವೇಶನಗಳು ಮಾತ್ರವಲ್ಲ, ಮುಡಾದಿಂದ ಅಕ್ರಮವಾಗಿ ಹಂಚಿಕೆಯಾಗಿರುವ ಎಲ್ಲಾ 5 ಸಾವಿರಕ್ಕೂ ಹೆಚ್ಚು ನಿವೇಶನಗಳ ಬಗ್ಗೆಯೂ ಈಗ ತನಿಖೆಯಾಗಬೇಕು. ಮುಡಾದಲ್ಲಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಜಂಟಿ ಸಿಂಡಿಕೇಟ್‌ನಿಂದ ಅಂದಾಜು 5 ಸಾವಿರ ಕೋಟಿ ರೂ.ಗೂ ಅಧಿಕ ಭ್ರಷ್ಟಾಚಾರ ನಡೆದಿದೆ. 2019ರಲ್ಲಿ ಮುಡಾ ಸುಪರ್ದಿಯಲ್ಲಿ 9 ಸಾವಿರ ನಿವೇಶನಗಳಿದ್ದವು. ಅದರಲ್ಲಿ 5 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ. ಹಿಂದಿನ ಬಿಜೆಪಿ ಹಾಗೂ ಈಗಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಿಯಮ ಬಾಹಿರವಾಗಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ.

ಈ ಇಬ್ಬರು ಅಧಿಕಾರಿಗಳೇ ಕಾರಣ: ನಿವೇಶನಗಳನ್ನು ಅಕ್ರಮವಾಗಿ ಹಂಚಿ, ಅಧಿಕಾರಿಗಳಿಂದಲೇ ಸರ್ಕಾರಕ್ಕೆ ನೂರಾರು ಕೋಟಿ ನಷ್ಟ ಉಂಟುಮಾಡಲಾಗಿದೆ. ಮುಡಾ ಆಯುಕ್ತರಾಗಿದ್ದ ನಟೇಶ್, ದಿನೇಶ್‌ಕುಮಾರ್ ಈ ಇಬ್ಬರು ಅಧಿಕಾರಿಗಳೇ ಮುಡಾದ ಅಧೋಗತಿಗೆ ಪ್ರಮುಖ ಕಾರಣ. ಜನಪ್ರತಿನಿಧಿಗಳ ಜತೆಗೆ ಶಾಮೀಲಾಗಿ, ಅಂದಾಜು ಐದು ಸಾವಿರಕ್ಕೂ ಹೆಚ್ಚು ನಿವೇಶನಗಳು ಈ ಇಬ್ಬರ ಅವಧಿಯಲ್ಲಿ ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ. ಮೈಸೂರಿನ ಇತಿಹಾಸದಲ್ಲಿಯೇ ಮುಡಾದಲ್ಲಿ ಭಾರಿ ಪ್ರಮಾಣದ ಭೂ ದರೋಡೆ ನಡೆಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬದಲಿ ನಿವೇಶನ ನೀಡದಂತೆ ಎರಡು ವರ್ಷದ ಹಿಂದೆಯೇ ಆದೇಶ ಮಾಡಿದ್ದು, ಅತೀ ಅಗತ್ಯ ಬಿದ್ದರೆ ಮಾತ್ರ ಸರ್ಕಾರ ಅನುಮತಿ ಪಡೆದು ಹಂಚಿಕೆಗೆ ತಾಕೀತು ಮಾಡಲಾಗಿದೆ. ಆದರೆ ಸರ್ಕಾರದ ನಿಯಮಗಳನ್ನು ಉಲ್ಲಂಘನೆ ಮಾಡಿ ಬದಲಿ ನಿವೇಶನ ಹಂಚಿಕೆ ಮಾಡಿ ಸುಮಾರು 3 ಸಾವಿರ ಕೋಟಿ ರೂ. ಹಗರಣ ನಡೆಸಲಾಗಿದೆ. ಮುಡಾ ಕರ್ಮಕಾಂಡದ ರೂವಾರಿಗಳಾದ ನಟೇಶ್ ಹಾಗೂ ದಿನೇಶ್ ಅವರನ್ನು ಈ ಕೂಡಲೇ ಬಂಧಿಸಬೇಕು. ಹಗರಣಕ್ಕೆ ಸಂಬಂಧಿಸಿದಂತೆ ಅವರ ಬಳಿ ಇರುವ ದಾಖಲೆಗಳನ್ನು ವಶಕ್ಕೆ ಪಡೆದು, ಅಕ್ರಮವಾಗಿ ಹಂಚಿಕೆಯಾಗಿರುವ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ವಿಶ್ವನಾಥ್ ಒತ್ತಾಯಿಸಿದ್ದಾರೆ.

ನಾದಮಯ ಲೋಕ ಸೃಷ್ಟಿಸಿದ ಗಾಯಕರು; ಮನಸೋತ ಶ್ರೋತೃಗಳು

ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ ಆಶ್ರಯದ 'ಅಮೃತಧಾರೆ' ಕಾರ್ಯಕ್ರಮದಲ್ಲಿ ಹರಿದ ಸಂಗೀತಧಾರೆ



ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಬಿವಿಬಿ ಮೈಸೂರು ಕೇಂದ್ರದ ಸಭಾಂಗಣದಲ್ಲಿ ಗಾಯಕರಾದ ರಮೇಶ್ ಚಂದ್ರ, ರಶ್ಮಿ ಚಿಕ್ಕಮಗಳೂರು ಅವರು ಶನಿವಾರ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಮೈಸೂರು,ಆ.17(ಪಿಎಂ)– ಭಾವಗೀತೆಗಳನ್ನು ಸಾದರಪಡಿಸುವ ಮೂಲಕ ಗಾನ ಸುಧೆಯನ್ನು ಸುಶ್ರಾವ್ಯವಾಗಿ ತಮ್ಮ ಕಂಚಿನ ಕಂಠದಲ್ಲಿ ಹೊಮ್ಮಿಸಿದ ಗಾಯಕರಾದ ರಮೇಶ್ ಚಂದ್ರ ಮತ್ತು ರಶ್ಮಿ ಚಿಕ್ಕಮಗಳೂರು, ಸಂಗೀತದ ಅಲೆಯಲ್ಲಿ ಶ್ರೋತೃ ವರ್ಗ ತೇಲುವಂತೆ ಮಾಡಿದರು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ (ಬಿವಿಬಿ) ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ 'ಅಮೃತಧಾರೆ' ಶೀರ್ಷಿಕೆಯಡಿ ಶನಿವಾರ ಹಮ್ಮಿಕೊಂಡಿದ್ದ 133ನೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಈ ಇಬ್ಬರು ಗಾಯಕರು ನಾದಮಯ ಲೋಕಸೃಷ್ಟಿಸಿ ಸಭಿಕರಿಗೆ ಸಂಗೀತದ ರಸದೌತಣ ಉಣಬಡಿಸಿದರು.

'ಅನುರಾಗ ಸಂಗಮ' ಕನ್ನಡ ಚಲನಚಿತ್ರದ 'ಓ ಮಲ್ಲಿಗೆ ನಿನ್ನೊಂದಿಗೆ ನಾನಿಲ್ಲವೇ ಸದಾ ಸದಾ...' ಗೀತೆಯು ರಮೇಶ್ ಚಂದ್ರ ಅವರದ್ದೇ ಕಂಠದಲ್ಲಿ ಮೂಡಿಬಂದಿದೆ. ಅಲ್ಲದೆ, ಅವರು ಹಲವು ಚಿತ್ರಗಳ ಗೀತೆಗಳಿಗೂ ಧ್ವನಿಯಾಗಿದ್ದಾರೆ. ಅಂತಹ ಮೇರು ಗಾಯಕ ರಮೇಶ್ ಚಂದ್ರ ಇಂದಿನ ಕಾರ್ಯಕ್ರಮದಲ್ಲಿ ಅನೇಕ ಗೀತೆಗಳನ್ನು ಸೊಗಸಾಗಿ ಪ್ರಸ್ತುತಪಡಿಸಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದರು.

ಅಂತೆಯೇ ತಮ್ಮ ಅದ್ಭುತ ಗಾಯನದ ಮೂಲಕ ರಾಜ್ಯದಲ್ಲಿ ಗಮನ ಸೆಳೆದಿರುವ ರಶ್ಮಿ ಚಿಕ್ಕಮಗಳೂರು, ಸಂಗೀತಕ್ಕೆ ಸಂಬಂಧಿಸಿದಂತೆ ಮೈಸೂರು ವಿವಿ ನಡೆಸಿದ ಪರೀಕ್ಷೆಯಲ್ಲಿ ಮೂರು ಚಿನ್ನದ ಪದಕಗಳನ್ನು ಪಡೆದ ಹಿರಿಮೆಗೆ ಭಾಜನರಾಗಿದ್ದಾರೆ. ಅಲ್ಲದೆ, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ತಮ್ಮ ಅದ್ಭುತ ಪ್ರತಿಭೆ ಅನಾವರಣಗೊಳಿಸಿ ಗಮನ ಸೆಳೆದಿರುವ ಇವರು, ಇಂದಿನ ಕಾರ್ಯಕ್ರಮದಲ್ಲಿ ಹಲವು ಹಾಡುಗಳನ್ನು ಸಾದರಪಡಿಸಿ, ಸಭಿಕರ ಮನ ಗೆದ್ದರು. 'ಗೌರಿ ನಂದನ ಗಜಾನನ ಗಣೇಶ... ಏಕದಂತ ಗಜಾನನ... ಗೀತೆ ಮೂಲಕ ಗಣಪತಿ ಸ್ತುತಿಯೊಂದಿಗೆ ರಮೇಶ್ ಚಂದ್ರ ಗಾಯನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಸುಬ್ರಾಯ ಚೊಕ್ಕಾಡಿ ರಚಿಸಿ, ಸಿ.ಅಶ್ವಥ್ ಸಂಗೀತ ನಿರ್ದೇಶನ ಮಾಡಿರುವ 'ಸಂಜೆಯ ರಾಗಕೆ ಬಾನು ಕೆಂಪೇರಿದೆ... ತಿಂಗಳು ಮೂಡಿ ಬೆಳಕಿನ ಕೋಡಿ ಚೆಲ್ಲಾಡಿದೆ... ಗೀತೆಯನ್ನು ಸಾದರಪಡಿಸಿ ಗಾನ ಕೋಡಿ ಹರಿಸಿದರು.

ನಂತರ ಗಾಯಕಿ ರಶ್ಮಿ ಚಿಕ್ಕಮಗಳೂರು 'ನೀನು ಮುಗಿಲು ನಾನು ನೆಲ ನಮ್ಮಿಬ್ಬರ ಮಿಲನದಿಂದ ಸಫಲವಾಯಿತು ಜೀವನ...' ಗೀತೆಯನ್ನು ಹಾಡಿದರು. ಜಿ.ಎಸ್.ಶಿವರುದ್ರಪ್ಪ ರಚಿಸಿ, ಸಿ.ಅಶ್ವಥ್ ಅವರು ಸಂಗೀತ ನಿರ್ದೇಶನ ಮಾಡಿರುವ ಈ ಗೀತೆಯನ್ನು ಪ್ರಸ್ತುತಪಡಿಸಿ ಸಂಗೀತಾಸಕ್ತರು ಮೈ ಮರೆಯುವಂತೆ ಮಾಡಿದರು.

ಬಳಿಕ ನಾ.ಕೃ.ಸತ್ಯನಾರಾಯಣ ರಚಿಸಿ, ಮೈಸೂರು ಅನಂತಸ್ವಾಮಿ ಅವರ ಸಂಗೀತ ನಿರ್ದೇಶನವಿರುವ 'ಸ್ನೇಹ ಅತಿ ಮಧುರ... ಓಡುವ ನದಿಗೆ ಮೋಡದ ಸ್ನೇಹ...' ಗೀತೆಯನ್ನು ಹಾಡಿದ ರಮೇಶ್ ಚಂದ್ರ, ಸ್ನೇಹದ ಲೋಕ ಅನಾವರಣಗೊಳಿಸಿ ಸಭಿಕರ ಮನಸ್ಸಿಗೆ ಲಗ್ಗೆ ಇಟ್ಟರು. ಅಲ್ಲದೆ, ಸುಬ್ರಾಯ ಚೊಕ್ಕಾಡಿಯವರ ರಚನೆಯ 'ಮುನಿಸು ತರವೇ ಮುಗುದೆ ಹಿತವಾಗಿ ನಗಲೂ ಬಾರದೇ...' ಗೀತೆಯನ್ನೂ ಹಾಡಿ ಸಂಗೀತದ ರಸಧಾರೆ ಹರಿಸಿದರು.

ಪಕ್ಕವಾದ್ಯದಲ್ಲಿ ರಘುನಾಥ (ತಬಲ), ನಾಗಲಿಂಗು (ಕೀ ಬೋರ್ಡ್) ಹಾಗೂ ರಿದಂ ಪ್ಯಾಡ್‌ನಲ್ಲಿ ಕಿರಣ್ ಸಹಕಾರ ನೀಡಿದರು. ಬಿವಿಬಿ ಮೈಸೂರು ಕೇಂದ್ರದ ಉಪಾಧ್ಯಕ್ಷ ಪ್ರೊ.ಸಿ.ನಾಗಣ್ಣ ಕಾರ್ಯಕ್ರಮ ಉದ್ಘಾಟಿಸಿದರು. ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಗೌರವ ಖಜಾಂಚಿ ಡಾ. ಎ.ಟಿ.ಭಾಷ್ಯಂ, ಕಾರ್ಯಕಾರಿ ಸಮಿತಿ ಸದಸ್ಯರಾದ ಟಿ.ಎಸ್.ಗಂಗಾಧರ್, ಡಾ.ಪಿ.ಕೆ.ನಾಗಲಕ್ಷ್ಮೀ, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್ ಮತ್ತಿತರರು ಹಾಜರಿದ್ದರು.

ಭಾರೀ ಕೊಂಬೆ ಮುರಿದು ಬಿದ್ದು ಕಾರು, ಆಟೋ ಜಖಂ



ಮೈಸೂರು, ಆ.17(ಎಸ್‌ಬಿಡಿ)– ಬೃಹತ್ ಕೊಂಬೆ ಮುರಿದು ಬಿದ್ದು ಕಾರು ಹಾಗೂ ಆಟೋ ಜಖಂಗೊಂಡಿರುವ ಘಟನೆ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಬಳಿ ಶನಿವಾರ ಸಂಜೆ ನಡೆದಿದೆ.

ಜೆಎಸ್‌ಎಸ್ ಮಹಾವಿದ್ಯಾಪೀಠ ಕಟ್ಟಡದ ಬಳಿ ವೃತ್ತದ ಕಡೆಗಿರುವ ಗುಲ್‌ಮೊಹರ್ ಮರದ ಬೃಹತ್ ಕೊಂಬೆ ಸಂಜೆ ಸುಮಾರು 5.30ರ ವೇಳೆಯಲ್ಲಿ ಮುರಿದು ಬಿದ್ದಿದೆ. ಘಟನೆಯಲ್ಲಿ ಮರದ ಬಳಿ ನಿಲ್ಲಿಸಿದ್ದ ಆಟೋ ಹಾಗೂ ಕಾರು ಜಖಂಗೊಂಡಿವೆ.

ಶಬ್ದ ಕೇಳಿ ಆಟೋ ಚಾಲಕ ದೂರಕ್ಕೆ ಓಡಿ ಬಂದಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರು ಚಾಲಕ ವಾಹನದಲ್ಲೇ ಇದ್ದರಾದರೂ ಕೊಂಬೆ ಹಿಂಭಾಗಕ್ಕೆ ಬಿದ್ದಿದ್ದರಿಂದ ಅವರಿಗೂ ಯಾವುದೇ ತೊಂದರೆಯಾಗಿಲ್ಲ. ಈ ಮರದ ಕೆಳಗೆ ನಿತ್ಯ ಪರಂಗಿಹಣ್ಣು ವ್ಯಾಪಾರ ಮಾಡುತ್ತಿದ್ದ ವ್ಯಕ್ತಿ, ಇಂದು ಕೆಲಸವಿದೆ ಎಂದು ಮಧ್ಯಾಹ್ನ 3.30ಕ್ಕೆ ಮನೆಗೆ ಹೋಗಿದ್ದರು. ಎಂದಿನಂತೆ ಸಂಜೆ 5.30ರವರೆಗೂ ವ್ಯಾಪಾರ ಮಾಡುತ್ತಿದ್ದರೆ ಪ್ರಾಣಾಪಾಯ ಸಂಭವಿಸುವ ಸಾಧ್ಯತೆ ಇತ್ತು ಎಂದು ಸ್ಥಳೀಯರು ಹೇಳಿದರು.

ಘಟನೆ ಬಗ್ಗೆ ಮಾಹಿತಿ ತಿಳಿದ ಕೂಡಲೇ ನಗರಪಾಲಿಕೆ ಅಧಿಕಾರಿಗಳನ್ನು ಸಂಪರ್ಕಿಸಲಾಯಿತು. ಅಭಯ ತಂಡದವರು ಧಾವಿಸಿ, ವಾಹನಗಳ ಮೇಲೆ ಬಿದ್ದಿದ್ದ ಕೊಂಬೆ ತೆರವು ಮಾಡಿದ್ದು, ಉಳಿದಿದ್ದನ್ನು ಬೆಳಗ್ಗೆ ತೆರವುಗೊಳಿಸಲಿದ್ದಾರೆ ಎಂದು ಮಾಜಿ ಕಾರ್ಪೊರೇಟರ್ ಬಿ.ವಿ. ಮಂಜುನಾಥ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಅನುಮತಿ ಖಂಡಿಸಿ

ನಾಳೆ ಮೈಸೂರು ಬಂದ್‌ಗೆ ಅಹಿಂದ ನಿರ್ಧಾರ



ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಅನುಮತಿ ಸಂಬಂಧ ಅಹಿಂದ ಸಮುದಾಯ ಮುಖಂಡರು, ಸಿದ್ದರಾಮಯ್ಯ ಅಭಿಮಾನಿಗಳ ತುರ್ತು ಸಭೆಯಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿದರು.

ಮೈಸೂರು, ಆ.17(ಎಂಕೆ)– ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಖಂಡಿಸಿ ಆ.19 ರಂದು ಮೈಸೂರು ಬಂದ್‌ಗೆ ಕರೆ ನೀಡಲು ಅಹಿಂದ ಸಮುದಾಯಗಳ ಮುಖಂಡರು, ಸಿದ್ದರಾಮಯ್ಯನವರ ಅಭಿಮಾನಿಗಳು ನಿರ್ಧಾರ ಕೈಗೊಂಡರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ನೇತೃತ್ವದಲ್ಲಿ ನಡೆದ ವಿವಿಧ ಸಮುದಾಯದ ಮುಖಂಡರ ತುರ್ತು ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲೇಬೇಕೆಂದು ಬಿಜೆಪಿ–ಜೆಡಿಎಸ್ ರಾಜ್ಯಪಾಲರ ಮೂಲಕ ಹುನ್ನಾರ ನಡೆಸುತ್ತಿರುವುದು ಅತ್ಯಂತ ಖಂಡನೀಯ. ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ವಾಪಸ್ ಪಡೆಯದಿದ್ದರೆ ಮೈಸೂರು ಬಂದ್‌ಗೆ ಕರೆ ನೀಡುವ ಜೊತೆಗೆ ಬಂದ್‌ಗೆ ಇನ್ನಿತರೆ ಸಂಘ–ಸಂಸ್ಥೆಗಳ ಸಹಕಾರ ಕೋರಲು ನಿರ್ಧರಿಸಲಾಯಿತು. ಪಂಚ ಗ್ಯಾರಂಟಿಗಳ ಮೂಲಕ ರಾಜ್ಯದ ಬಡವರ ಪರವಾಗಿರುವ ಜನಾನುರಾಗಿ ಮುಖ್ಯಮಂತ್ರಿಗಳ ವಿರುದ್ಧ ವಿರೋಧ ಪಕ್ಷಗಳು ಅಸೂಯೆಯಿಂದ ಪಿತೂರಿ ನಡೆಸುತ್ತಿವೆ. ಮುಡಾದ ಯಾವುದೇ ಹಗರಣಗಳಲ್ಲಿ ಭಾಗಿಯಾಗದಿದ್ದರೂ ಮುಖ್ಯಮಂತ್ರಿಗಳನ್ನು ಸಿಲುಕಿಸಿ, ರಾಜೀನಾಮೆ ನೀಡುವಂತೆ ಮಾಡಲು ಹುನ್ನಾರ ನಡೆಸಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿ, ಕಳೆದ 11 ವರ್ಷದಿಂದ ದೇಶದಲ್ಲಿ ಪ್ರಧಾನಿ ಮೋದಿ ಮತ್ತು ಅಮಿತ್ ಷಾ ಸಂವಿಧಾನ ಚಾಲ್ತಿಯಲ್ಲಿದ್ದು, ಬಾಬಾ ಸಾಹೇಬ್ ಅಂಬೇಡ್ಕರ್ ರಚಿತ ಸಂವಿಧಾನವನ್ನು ಮರೆಮಾಚಲಾಗಿದೆ. ಮೋದಿ ಮತ್ತು ಅಮಿತ್ ಷಾ ಸಂವಿಧಾನದಲ್ಲಿ ಜನಾನುರಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ರಾಜ್ಯಪಾಲರಿಂದ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಾಗಿದೆ ಎಂದು ಕಿಡಿಕಾರಿದರು.

ಆ.19 ರಂದು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸಭೆ ನಡೆಸಿ, ಮೈಸೂರು ಬಂದ್ ನಡೆಸಲಾಗುವುದು. ದಿನನಿತ್ಯ ಒಂದಲ್ಲಾ ಒಂದು ರೀತಿಯ ಪ್ರತಿಭಟನೆ ನಡೆಸಲಿದ್ದು, ರಾಜ್ಯಪಾಲರು ನೀಡಿರುವ ಪ್ರಾಸಿಕ್ಯೂಷನ್ ವಾಪಸ್ ಪಡೆಯದಿದ್ದರೆ ರಾಜ್ಯಾದ್ಯಂತ ನಡೆಯುವ ರಕ್ತಪಾತಕ್ಕೆ ನೇರವಾಗಿ ಅವರೇ ಹೊಣೆಯಾಗಿರುತ್ತಾರೆ. ಬಂದ್‌ಗೆ ಎಲ್ಲಾ ಸಂಘ–ಸಂಸ್ಥೆಗಳ ಬೆಂಬಲ ಕೋರಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಬೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಮ್, ಕಾಂಗ್ರೆಸ್ ಮುಖಂಡರಾದ ವಿ.ರಾಮಸ್ವಾಮಿ, ಶಿವಣ್ಣ, ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ, ಡಿಎಸ್‌ಎಸ್ ಮುಖಂಡ ವರುಣ ಮಣಿ, ಹೆಚ್.ಡಿ.ಕೋಟೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಎಂ.ಬಿ.ಆನಂದ್, ಪಿರಿಯಾಪಟ್ಟಣ ತಾಲೂಕು ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಸುನೀಲ್, ಮುಖಂಡರಾದ ಗಂಧನಹಳ್ಳಿ ವೆಂಕಟೇಶ್, ಕೆಎಸ್‌ಆರ್‌ಟಿಸಿ ನೌಕರರ ಸಂಘದ ಬಿ.ಜವೇಗೌಡ, ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಎಸ್.ಆರ್.ರವಿಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಬಿ.ಎಂ.ನಟರಾಜ್, ಕೆ.ಆರ್ ಬ್ಯಾಂಕ್‌ನ ಬಸಪ್ಪ, ಕನ್ನಡ ವೇದಿಕೆ ಬಾಲಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಮೈಸೂರು, ಪಿ.ಪಿ.ಮೊಹಲ್ಲಾ, ಮನೆ ನಂ.117 ರಲ್ಲಿ ವಾಸವಾಗಿರುವ ಶ್ರೀ. ನೀಲಕಂಠ ಎಸ್. **ಶರ್ಮ (ಆಧಾರ್ ನಂ.9627 9555 4925)** ರವರಿಂದ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಈ ಸಂಬಂಧ ಒಂದು ಕ್ರಯದ ಒಪ್ಪಂದದ ಕರಾರು ಪತ್ರವನ್ನು ಸಹ ಮೇಲ್ಕಂಡ ವ್ಯಕ್ತಿಗಳು ನನ್ನ ಕಕ್ಷಿದಾರರಿಗೆ ಬರೆದುಕೊಟ್ಟಿರುತ್ತಾರೆ, ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾರಿಗಾದರೂ, ಯಾವುದೇ ವಿಧವಾದ ಹಕ್ಕುಭಾಧ್ಯತೆ ಇದ್ದಲ್ಲಿ ಈ ದಿನದಿಂದ 15 (ಹದಿನೈದು) ದಿನದೊಳಗೆ ತಮ್ಮ ಲಿಖಿತ ತಕರಾರುಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 15 (ಹದಿನೈದು) ದಿನಗಳ ಒಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು. 15 (ಹದಿನೈದು) ದಿನಗಳ ನಂತರ ಬರುವ ಯಾವುದೇ ತಕರಾರು ಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತುಗಳ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.89/2 ರ ಒಟ್ಟು ವಿಸ್ತೀರ್ಣ 4.19.00.00 (ನಾಲ್ಕು ಎಕರೆ ಹತ್ತೊಂಭತ್ತು ಗುಂಟೆ) ಜಮೀನಿನ ಪೈಕಿ ಭಾರತ ಸರ್ಕಾರದ ರಾಷ್ಟ್ರೀಯ ಹೆದ್ದಾರಿಗೆ ಭೂ ಸ್ವಾಧೀನವಾಗಿರುವ 0.18.00.00 (ಹದಿನೆಂಟು ಗುಂಟೆ) ಜಮೀನಿನ ಜಾತ ಉಳಿಕೆ 4.01.00.00 (ನಾಲ್ಕು ಎಕರೆ ಒಂದು ಗುಂಟೆ) ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ : ಕುಳ್ಳದಾಸಯ್ಯ ರವರ ಜಮೀನು, ಪಶ್ಚಿಮಕ್ಕೆ: ಮೈಸೂರು–ನಂಜನಗೂಡು ರಸ್ತೆ, ಉತ್ತರಕ್ಕೆ: ನಾಗರಾಜು ರವರ ಜಮೀನು, ದಕ್ಷಿಣಕ್ಕೆ : ಕುಮಾರಸ್ವಾಮಿ ರವರ ಜಮೀನು

Sd.- S. PRADEEP KUMAR,
M.B.A.LL.B. Roll No KAR/1332/2012
ADVOCATE, #2917/A, 1st Floor,
Opp. TTL College, Kantharaja
Urs Road, Saraswathipuram,
Mysuru-570 009.
Mob.: 9740315184

ದಿನಾಂಕ: 17.08.2024

ಸವಿನೆನಪು



ಡಾ. ಹೆಚ್.ಕೆ. ಕಾಳಪ್ಪ
18-8-2019
ದುಃಖತಪ್ತರು: ಕುಟುಂಬವರ್ಗದವರು ಮತ್ತು ಸ್ನೇಹಿತರು

SAD DEMISE
ಜೀವನದ ಶಕ್ತಿ, ಮಮತೆಯ ಮೂರ್ತಿ ನಮ್ಮ ಪ್ರೀತಿಯ ಅಪ್ಪ



K. VENKATASWAMY
P.W.D. & Archeology Contractor
Former Proprietor : Balaji Deluxe (Srinivasa Theatre)
D.O.D. 14.08.2024 (Wednesday)
You are the greatest Gift that God gave us but recalled back to Heaven knowing that you are not with us anymore makes our heart shatter, every time you are always in our thoughts Dad
"We Miss You" & We Love you forever
- In Grief - Family Members

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ಸನ್ಯಾಸಿಗೂ ಸಂಸಾರಿಗೂ ಏನು ವ್ಯತ್ಯಾಸರೀ?

ಗಂಡ : ಹುಲಿ ಚರ್ಮದ ಮೇಲೆ ಮಲಗೋನು ಸನ್ಯಾಸಿ.
ಹುಲಿ ಜೊತೆ ಮಲಗೋನು ಸಂಸಾರಿ.

ಮೈಸೂರು ಮಿತ್ರ

ಭಾನುವಾರ, 18 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........


ಕೆಲವೊಮ್ಮೆ ನಾವು ಓದಲು ಮನಸ್ಸು ಮಾಡದ ಪುಟಗಳಲ್ಲೇ ನಾವು ಅರಸಬೇಕಾದ ಉತ್ತರಗಳಿರುತ್ತವೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಿಡಿ ಸಣ್ಣದಾದರೂ ಕಾಡೆಲ್ಲವನ್ನು ಸುಡುತ್ತದೆ.

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



1890ನೇ ಇಸವಿಯಲ್ಲಿದ್ದ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಚಿತ್ರ

32. ಎಂ. ನಾರಾಯಣರಾವ್



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಸರ್ಕಾರಿ ಸೇವೆಯಲ್ಲಿ ಸಾಮಾನ್ಯ ಗುಮಾಸ್ತನಾಗಿದ್ದು ಕ್ರಮೇಣ ತಮ್ಮ ಶ್ರಮದ ಫಲವಾಗಿ ಎಕ್ಸೈಸ್ ಕಮೀಷನರ್ ಮತ್ತು ಜಿಲ್ಲಾ ನ್ಯಾಯಾಧೀಶರ ಹುದ್ದೆಗೇರಿದ ವ್ಯಕ್ತಿ ಎಂ. ನಾರಾಯಣರಾಯರು.

ನಾರಾಯಣರಾವ್ ಹುಟ್ಟಿದ್ದು ನವೆಂಬರ್ 28, 1854ರಲ್ಲಿ. ಇವರು ಹುಟ್ಟಿದ ಸ್ಥಳ ಮೈಸೂರು ನಗರ. ಬೆಂಗಳೂರಿನ ವೆಸ್ಲಿಯನ್ ಮೆಥಾಡಿಸ್ಟ್ ಶಾಲೆಯಲ್ಲಿ ಓದಿ ನಂತರ ಅಲ್ಲಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ಪದವಿಯನ್ನು ಪಡೆದರು.

ಮೈಸೂರು ರಾಜ್ಯದಲ್ಲಿ ಶಿಕ್ಷಣದ ಅಭಿವೃದ್ಧಿಗೆ ವೆಸ್ಲಿಯನ್ನರು ನೀಡಿರುವ ಕೊಡುಗೆ ಅಪಾರ. ಮೈಸೂರು, ಬೆಂಗಳೂರು ನಗರಗಳಲ್ಲಿ ಮೊದಲು ಶಾಲೆಗಳನ್ನು ತೆರೆದು ಸಾರ್ವಜನಿಕರಿಗೆ, ಅದರಲ್ಲಿಯೂ ಕೆಳವರ್ಗದ ಜನರಿಗೆ ಶಿಕ್ಷಣ ದೊರೆಯುವಂತೆ ಮಾಡಿದರು ಇವರು. ಹಾಗೆ ಸ್ಥಾಪಿತವಾಗಿದ್ದ ಒಂದು ಶಾಲೆ ಬೆಂಗಳೂರಿನ ಮೆಥಾಡಿಸ್ಟ್ ಶಾಲೆ. 1822ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯಲ್ಲಿ ವೆಸ್ಲಿಯನ್ ಮೆಥಾಡಿಸ್ಟ್ ಮಿಷನರಿಗಳು ಈ ಶಾಲೆಯನ್ನು ಶಿವಾಜಿನಗರದಲ್ಲಿ ಸ್ಥಾಪಿಸಿದರು. ಪ್ರಾರಂಭದಲ್ಲಿಯೇ ಈ ಶಾಲೆಯಲ್ಲಿ ಸುಮಾರು 500 ವಿದ್ಯಾರ್ಥಿಗಳು ಓದುತ್ತಿದ್ದರು ಎನ್ನಲಾಗಿದೆ. ಅಂದರೆ ಈ ಶಾಲೆ 200 ವರ್ಷಗಳಿಗೂ ಹಿಂದಿನದು. ಈಚೆಗೆ ಅದು ತನ್ನ 200 ವರ್ಷಗಳನ್ನು ಸಂಭ್ರಮದಿಂದ ಆಚರಿಸಿತು. ನಾರಾಯಣರಾವ್ ಇಲ್ಲಿಗೆ ಸೇರುವ ವೇಳೆಗೆ ಈ ಶಾಲೆ ಸ್ಥಾಪಿಸಿ ಸುಮಾರು ನಾಲ್ಕು ದಶಕಗಳು ಕಳೆದಿದ್ದವು.

ನಾರಾಯಣರಾವ್ ಅವರಿಗೆ ಮೊದಲ ಸರ್ಕಾರಿ ಹುದ್ದೆ ನೀಡಿದವರು ಅಂದು ಮೈಸೂರಿನ ಜಿಲ್ಲಾ ನ್ಯಾಯಾಧೀಶರಾಗಿದ್ದ ಕರ್ನಲ್ ಹಿಲ್. ಈ ಆಂಗ್ಲ ಅಧಿಕಾರಿ ನಾರಾಯಣರಾಯರಿಗೆ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗುಮಾಸ್ತನ ಕೆಲಸ ನೀಡಿದರು. ಇದು 1871ರಲ್ಲಿ. 1876ರಲ್ಲಿ ನಾರಾಯಣರಾವ್ ಹೆಡ್ ಮುನ್ಷಿ ಸ್ಥಾನಕ್ಕೆ ಬಂದರು. ಅದು ಬರಗಾಲ ವಾದ ಕಾರಣ ಅವರ ಸೇವೆಯನ್ನು ಕ್ಷಾಮದ ವಿಶೇಷ ಕಾರ್ಯಕ್ಕೆ ಬಳಸಿಕೊಳ್ಳಲಾಯಿತು. 1879ರವರೆಗೆ ಮೂರು ವರ್ಷಗಳ ಕಾಲ ಕ್ಷಾಮದ ಕಮೀಷನರ್ ಅವರ ಕಚೇರಿಯಲ್ಲಿ ಮುಖ್ಯ ಗುಮಾಸ್ತನಾಗಿ ಕೆಲಸ ನಿರ್ವಹಿಸಿದರು. ಸರ್ ಈಲಿಯಾಟ್ ಅವರ ಅವಧಿಯಲ್ಲಿ ನಾರಾಯಣರಾವ್ ಅವರನ್ನು ಅದೇ ಸ್ಥಾನದಲ್ಲಿ ಮುಂದುವರಿಸಿ ಕ್ಷಾಮಕ್ಕೆ ಸಂಬಂಧಪಟ್ಟಂತೆ ವಿಶೇಷ ಕಾರ್ಯವನ್ನು ವಹಿಸಲಾಯಿತು.

ರಾಜ್ಯದ ಕ್ಷಾಮ ಪರಿಹಾರ ಮತ್ತು ನಿವಾರಣೆಯ ಕಮೀಷನರ್ ಆಗಿ ಸರ್ ಚಾರ್ಲ್ಸ್ ಆಲ್ಫ್ರೆಡ್ ಈಲಿಯಾಟ್ ಅಪಾರ ಸೇವೆ ಸಲ್ಲಿಸಿದರು. 1877ರಲ್ಲಿ ಕ್ಷಾಮದ ಕಮೀಷನರ್ ಆಗಿ ನೇಮಕವಾದ ಇವರು 1878ರಲ್ಲಿ ರಾಜ್ಯದಲ್ಲಿ ಕ್ಷಾಮದ ಬಗ್ಗೆ ನೇಮಿಸಲಾಗಿದ್ದ ಆಯೋಗದ ಕಾರ್ಯದರ್ಶಿಯಾಗಿದ್ದರು. ಕ್ಷಾಮದ ಭೀಕರತೆ ಕಡಿಮೆಯಾದ ಮೇಲೆ ಎರಡು ವರ್ಷಗಳ ನಂತರ ಇವರನ್ನು ರಾಜ್ಯದ ಸೆನ್ಸಸ್ ಕಮೀಷನರಾಗಿ ನೇಮಿಸಲಾಯಿತು. ನಂತರ ಈಲಿಯಾಟ್ ಅಸ್ಸಾಂ ರಾಜ್ಯಕ್ಕೆ ವರ್ಗಾವಣೆಯಾದರು. ನಾರಾಯಣರಾವ್ ಅವರಿಗೆ ಕ್ಷಾಮದ ತಜ್ಞರಾಗಿದ್ದ ಈಲಿಯಾಟ್ ಅವರ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿತು.

1886ರಲ್ಲಿ ನಾರಾಯಣರಾವ್ ದಿವಾನರ ಕಚೇರಿಯಲ್ಲಿ ರೆವಿನ್ಯೂ ಅಸಿಸ್ಟೆಂಟ್ ಕಮೀಷನರ್ ಹುದ್ದೆಗೆ ನೇಮಕವಾದರು. ಅವರು ಸುಮಾರು ಐದು ವರ್ಷಗಳ ಕಾಲ ಈ ಸ್ಥಾನದಲ್ಲಿದ್ದರು. 1891ರಲ್ಲಿ ಅವರು ಮೇಲ್ಬಡ್ತಿ ಗಳಿಸಿ ಮೈಸೂರಿನ ದಿವಾನರಿಗೆ ಅಂಡರ್ ಸೆಕ್ರೆಟರಿಯಾಗಿ ಸೇವೆ ಸಲ್ಲಿಸಿದರು.

ದಿವಾನರ ಅಂಡರ್ ಸೆಕ್ರೆಟರಿಯಾಗಿ ಮೂರು ವರ್ಷ ಕಾಲ ಸೇವೆ ಸಲ್ಲಿಸಿದ ನಂತರ 1894ರಲ್ಲಿ ಅವರು ಸಂಖ್ಯಾಶಾಸ್ತ್ರ ಇಲಾಖೆಯಲ್ಲಿ ವಿಶೇಷ ಕಾರ್ಯಕ್ಕಾಗಿ ನಿಯುಕ್ತಿಗೊಂಡರು. ಅದೇ ವರ್ಷ ನಾರಾಯಣರಾವ್ ಅವರಿಗೆ ಮೊದಲನೇ ದರ್ಜೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ನೀಡಲಾಯಿತು. ಸಂಖ್ಯಾಶಾಸ್ತ್ರ ಇಲಾಖೆಯಲ್ಲಿ ಒಂದು ವರ್ಷ ಕೆಲಸ ಮಾಡಿದ ನಂತರ ಅವರನ್ನು ಮೈಸೂರಿನ ಜಿಲ್ಲಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಆಗ ಅವರ ಅಧಿಕಾರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ಮಟ್ಟಕ್ಕೆ ಹೆಚ್ಚಿಸಲಾಯಿತು.

ಮೊದಲಿಗೆ ತಾತ್ಕಾಲಿಕ ಜಿಲ್ಲಾಧಿಕಾರಿಯಾಗಿ ನೇಮಿಸಿದರೂ ನಂತರ ಅವರನ್ನು ಆ ಹುದ್ದೆಯಲ್ಲಿ ಕಾಯಂಗೊಳಿಸಲಾಯಿತು.

1905ರಲ್ಲಿ ಅವರಿಗೆ ಮೊದಲನೇ ದರ್ಜೆ ಅಧಿಕಾರಿಯಾಗಿ ಮೇಲ್ಬಡ್ತಿ ನೀಡಲಾಯಿತು. 1908ರಲ್ಲಿ ಅವರನ್ನು ಮತ್ತೆ ಎಕ್ಸೈಜ್ ಇಲಾಖೆಗೆ ವರ್ಗಾಮಾಡಿ ಎಕ್ಸೈಜ್ ಕಮೀಷನರನ್ನಾಗಿ ನೇಮಿಸಲಾಯಿತು.

ಹೀಗೆ ಹಲವಾರು ಹುದ್ದೆಗಳಲ್ಲಿ ಸರ್ಕಾರದ ಸೇವೆ ಸಲ್ಲಿಸಿದ ಮೈಸೂರಿನವರೇ ಆದ ನಾರಾಯಣರಾವ್ ನಿವೃತ್ತಿಯ ನಂತರ ತಮ್ಮ ಊರಾದ ಮೈಸೂರಿನಲ್ಲಿಯೇ ನೆಲೆಸಿದರು.

ನಿಮ್ಮ ಪತ್ರಗಳು

■ ಮತ್ತೆ ಮರುಕಳಿಸುತ್ತಿರುವ ಹೆಣ್ಣು ಭ್ರೂಣಹತ್ಯೆ ಪ್ರಕರಣ

ಮಾನ್ಯರೆ,

ಕಳೆದ ಎಂಟು ತಿಂಗಳ ಹಿಂದೆಯಷ್ಟೇ ರಾಜ್ಯ ಮತ್ತು ದೇಶವನ್ನೇ ತಲ್ಲಣಗೊಳಿಸಿದ್ದ ಸುದ್ದಿ ಎಂದರೆ ಮೈಸೂರು ಮತ್ತು ಮಂಡ್ಯದಲ್ಲಿ ನಡೆದಿದೆ ಎನ್ನಲಾದ ಹೆಣ್ಣು ಮಕ್ಕಳ ಭ್ರೂಣ ಹತ್ಯೆ ಪ್ರಕರಣ.

ಮತ್ತೆ ಮರುಕಳಿಸುತ್ತಿರುವ ಈ ಹೆಣ್ಣು ಭ್ರೂಣಹತ್ಯೆ ಪ್ರಕರಣ ಈಗ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಮಾವಿನಕೆರೆಯ ತೋಟದ ಮನೆಯಲ್ಲಿ ನಡೆಯುತ್ತಿರುವುದು ಬೆಳಕಿಗೆ ಬಂದಿದೆ. ಈ ಮೊದಲೇ ಮಂಡ್ಯ ಜಿಲ್ಲೆಯ ಪಾಂಡವಪುರದ ಡಿಎಚ್‌ಓ ಕಚೇರಿಯ ಹಿಂಭಾಗದ ವಸತಿ ಗೃಹದಲ್ಲೇ ಹೆಣ್ಣು ಮಕ್ಕಳ ಭ್ರೂಣ ಹತ್ಯೆಗಳು ನಡೆಯುತ್ತಿದೆ ಎಂದರೆ 'ಬೇಲಿಯೇ ಎದ್ದು ಹೊಲ ಮೇಯ್ದಂತೆ' ಅತಿ ಹೆಚ್ಚು ಹೆಣ್ಣು ಭ್ರೂಣಹತ್ಯೆ ಪ್ರಕರಣಗಳು, ಮಂಡ್ಯ ಜಿಲ್ಲೆಯಲ್ಲೇ ನಡೆಯುತ್ತಿರುವುದು ವಿಷಾದದ ಸಂಗತಿ.

ಆತಂಕ ಪಡುವ ವಿಷಯ ಎಂದರೆ, ರಾಜ್ಯದ ಸುಮಾರು 14 ಜಿಲ್ಲೆಗಳಲ್ಲಿ 6 ವರ್ಷದ ಒಳಗಿನ ಹೆಣ್ಣು ಮಕ್ಕಳ ಸಂಖ್ಯೆಯಲ್ಲಿ, ಗಂಡು ಮಕ್ಕಳ ಸಂಖ್ಯೆಗಿಂತ ತುಂಬಾ ಕಡಿಮೆ ಇರುವುದು. ಬಾಗಲಕೋಟೆ, ಬಿಜಾಪುರ, ವಿಜಯಪುರ, ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ 1000 ಗಂಡು ಮಕ್ಕಳಿಗೆ ಕೇವಲ 624 ರಿಂದ 750 ಹೆಣ್ಣು ಮಕ್ಕಳಿರುವುದು, ದೇಶದ ಜನಗಣತಿ 2011 ರ ಪ್ರಕಾರ, ಇಡೀ ದೇಶದಲ್ಲಿ, 1000 ಗಂಡಸರಿಗೆ, 924 ಹೆಂಗಸರ ಸಂಖ್ಯೆ ಇತ್ತು. ಈಗ ಇದು ಇನ್ನೂ ಕಡಿಮೆ ಇರಬಹುದು.

ರಾಜ್ಯದ ಸಚಿವರೊಬ್ಬರು, ನಾವು ಎಷ್ಟೇ ಕಠಿಣ ಕ್ರಮ ಕೈಗೊಂಡರೂ, ಇಂತಹ ಭ್ರೂಣ ಹತ್ಯೆಗಳು ಮರುಕಳಿಸುತ್ತಿವೆ ಎಂದು ತಮ್ಮ ಬೇಜವಾಬ್ದಾರಿ ಮತ್ತು ತಮ್ಮ ಅಸಹಾಯಕತೆಯ ಹೇಳಿಕೆ ನೀಡಿದ್ದಾರೆ.

ಈಗಾಗಲೇ ದಾಖಲಾಗಿರುವ ಇಂತಹ ಪ್ರಕರಣಗಳಲ್ಲಿ ಸರ್ಕಾರ ಯಾವ ಕಾನೂನು ಕ್ರಮ ಕೈಗೊಂಡಿದೆ. ಯಾರಿಗೆ ಕಾನೂನು ಪ್ರಕಾರ ಶಿಕ್ಷೆ ಆಗಿದೆ ಎಂಬುದನ್ನು ಬಹಿರಂಗಪಡಿಸಲಿ. ನನಗೆ ತಿಳಿದಿರುವಂತೆ, ಇಂತಹ ಪ್ರಕರಣದಲ್ಲಿ, ಇದುವರೆವಿಗೂ ಯಾರಿಗೂ ಶಿಕ್ಷೆಯಾದ ಉದಾಹರಣೆಗಳೇ ಇಲ್ಲ.

1994ರ ಕಾನೂನಿನ ಪ್ರಕಾರ, ಭ್ರೂಣ ಹತ್ಯೆ ಮತ್ತು ಪತ್ತೆ ಮಾಡುವವರಿಗೆ, ಮೂರರಿಂದ ಐದು ವರ್ಷಗಳ ಕಾಲ ಜೈಲು ಶಿಕ್ಷೆ, 10 ರಿಂದ 50 ಸಾವಿರದ ವರೆಗೆ ದಂಡ, ಮತ್ತು ಅವರ ವೈದ್ಯಕೀಯ ಪರವಾನಗಿಯನ್ನು ರದ್ದು ಪಡಿಸುವುದು, ಅವರನ್ನು ಕಪ್ಪುಪಟ್ಟಿಗೆ ಸೇರಿಸುವುದು ಎಂದು ಕಾನೂನು ಹೇಳುತ್ತಿದೆ, ಆದರೆ ಕಾನೂನು ಜಾರಿಗೆ ಬಂದು 30 ವರ್ಷಗಳಾದರೂ, ಇದುವರೆಗೂ ಒಬ್ಬರಿಗೂ, ಶಿಕ್ಷೆಯಾಗಿರುವ ಉದಾಹರಣೆಗಳಿಲ್ಲ, ಅಂದರೆ 30 ವರ್ಷಗಳಿಂದಲೂ ಯಾರೂ ಕೂಡ ಸಿಕ್ಕಿಹಾಕಿಕೊಂಡಿಲ್ಲ ಎಂದಾಯಿತು. ಕಠಿಣ ಕಾನೂನುಗಳನ್ನು ಜಾರಿ ಮಾಡದ ಹೊರತು, ಹೆಣ್ಣು ಮಕ್ಕಳ ಭ್ರೂಣ ಹತ್ಯೆಯನ್ನು ತಡೆಯಲು ಸಾಧ್ಯವೇ ಇಲ್ಲ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

■ ಚಾಮುಂಡಿಬೆಟ್ಟದ ಪರಿಸರ ಕಾಪಾಡಬೇಕು

ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನ ನಾಡದೇವತೆ ಚಾಮುಂಡೇಶ್ವರಿ ನೆಲೆಸಿರುವ ಪ್ರಸಿದ್ಧ ಪುಣ್ಯಕ್ಷೇತ್ರ ಮತ್ತು ಮೈಸೂರಿನ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ ಹೇರಿದ್ದರೂ ಸಹ ಕಳೆದ ಜುಲೈ ತಿಂಗಳಲ್ಲಿ ಶುರುವಾದ ಆಷಾಢ ಮಾಸದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ ಸಾರ್ವಜನಿಕರು ಹಾಗೂ ಭಕ್ತರು ಚಾಮುಂಡಿಬೆಟ್ಟದ ಮೆಟ್ಟಿಲಿಗೆ ಅರಿಶಿನ, ಕುಂಕುಮ ಹಚ್ಚುವ ಮೂಲಕ ದೇವಿಗೆ ವಿಶೇಷ ಪೂಜೆ, ಭಕ್ತಿಯನ್ನು ಅರ್ಪಿಸಿದ್ದಾರೆ. ಕೆಲವು ಸಾರ್ವಜನಿಕರು ಅರಿಶಿನ, ಕುಂಕುಮ, ಕರ್ಪೂರ, ಗಂಧದಕಡ್ಡಿ, ಇತ್ಯಾದಿ ಪೂಜಾ ಪದಾರ್ಥಗಳನ್ನು ಬಳಕೆ ಮಾಡಿ, ಅದರ ಪ್ಲಾಸ್ಟಿಕ್ ಕವರ್‌ಗಳನ್ನು ಬೆಟ್ಟದ ಮೆಟ್ಟಿಲುಗಳಲ್ಲಿ ಇಟ್ಟು, ಪ್ಲಾಸ್ಟಿಕ್ ವಾಟರ್ ಬಾಟಲ್, ತಿಂಡಿ ತಿನಿಸುಗಳನ್ನು ಅಲ್ಲೇ ಬಿಸಾಡಿ ಬೆಟ್ಟದ ಪರಿಸರ ಸೌಂದರ್ಯದಲ್ಲಿ ಅನೈರ್ಮಲ್ಯ ಉಂಟು ಮಾಡಿದ್ದಾರೆ. ಹಾಗೂ ಈಗಲೂ ಹಾಗೆಯೇ ಮಾಡುತ್ತಿದ್ದಾರೆ. ಇದರಿಂದ ಬೆಟ್ಟದ ಪರಿಸರ ಹಾಳಾಗುತ್ತಿದೆ. ಆದ್ದರಿಂದ ಚಾಮುಂಡಿಬೆಟ್ಟ ಪ್ರಾಧಿಕಾರವು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಮೈಸೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ಹೊರಡಿಸಿ, ಪ್ಲಾಸ್ಟಿಕ್ ಅನ್ನು ಚಾಮುಂಡಿಬೆಟ್ಟದಲ್ಲಿ ಸಂಪೂರ್ಣವಾಗಿ ನಿಷೇಧಿಸಿ ಬೆಟ್ಟದ ಪರಿಸರ ಸೌಂದರ್ಯವನ್ನು ಕಾಪಾಡಬೇಕೆಂದು ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

■ ವಯನಾಡ್‌ನಲ್ಲಿ ಮನೆ ನಿರ್ಮಾಣ ಸ್ವಾಗತಾರ್ಹ




ಮಾನ್ಯರೆ,

ದೇವರು ಸೃಷ್ಟಿಸದ ಜೀವಿಯಿಲ್ಲ, ದೇವರು ತಿಳಿಯದ ಮನಸಿಲ್ಲ, ದೇವರು ಮುನಿದರೆ ಪ್ರಪಂಚ ಇನ್ನಿಲ್ಲ. ಈ ಕೊನೆಯ ಸಾಲು ದೇವರ ನಾಡು ಎಂದು ಕರೆಯಲ್ಪಡುವ ಕೇರಳದ ವಯನಾಡ್ ಜಿಲ್ಲೆಯ ಮೆಪ್ಪಾಡಿಯಲ್ಲಿ ಜಲ ಪ್ರಳಯ ಭೂಕುಸಿತ ಪ್ರಕೃತಿಯ ತನ್ನ ವಿಕೋಪವನ್ನು ತೋರಿಸಿದೆ.

ಬಡವ ಶ್ರೀಮಂತ ಎನ್ನದೆ ಊರನ್ನೇ ಸ್ಮಶಾನವಾಗಿಸಿದೆ. ಈ ದುರಂತಗಳಲ್ಲಿ ಮನೆ ಕಳೆದುಕೊಂಡ ನಿರಾಶ್ರಿತರು ಶಿಬಿರದಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಈ ಶಿಬಿರಗಳಿಗೆ ಸಹಾನುಭೂತಿ ಅನುಕಂಪ ವ್ಯಕ್ತವಾಗುವುದರ ಜೊತೆಗೆ ಸಂಘ ಸಂಸ್ಥೆಗಳು ಪರಿಹಾರ ಸಾಮಗ್ರಿಗಳನ್ನು ಒದಗಿಸುತ್ತಿವೆ. ರಾಜ್ಯ ಸರ್ಕಾರ ನಿರಾಶ್ರಿತರಾದವರಿಗೆ ನೂರು ಮನೆ ನಿರ್ಮಾಣ ಮಾಡಿಕೊಡಲು ತೀರ್ಮಾನಿಸಿರುವುದು ಸ್ವಾಗತಾರ್ಹ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು.

ಡಾ.ಜಮುನಾರಾಣಿ ರಚನೆಯ ಕಲಾಕೃತಿಗಳ ಪ್ರದರ್ಶನ



ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಲಾವಿದೆ ಡಾ.ಜಮುನಾರಾಣಿ ವಿ.ಮಿರ್ಲೆ ಅವರು ರಚಿಸಿರುವ ಕಲಾಕೃತಿಗಳ ಪ್ರದರ್ಶನ ಹಾಗೂ 'ಸಾಧ್ಯಸಿದ್ಧಿ' ಮತ್ತು 'ಜೀವನಯಾನ' ಕೃತಿ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು, ಆ.17(ಜಿಎ)– ಮೈಸೂರು ಆರ್ಟ್ ಗ್ಯಾಲರಿ ವತಿಯಿಂದ ಕಲಾಮಂದಿರದ ಆವರಣದಲ್ಲಿರುವ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಲಾವಿದೆ ಡಾ.ಜಮುನಾರಾಣಿ ವಿ.ಮಿರ್ಲೆ ಅವರು ರಚಿಸಿರುವ ಕಲಾಕೃತಿಗಳ ಪ್ರದರ್ಶನ ಹಾಗೂ 'ಸಾಧ್ಯಸಿದ್ಧಿ' ಮತ್ತು 'ಜೀವನಯಾನ' ಕೃತಿ ಲೋಕಾರ್ಪಣೆಗೊಳಿಸಲಾಯಿತು.

ಕೃತಿ ಲೋಕಾರ್ಪಣೆಗೊಳಿಸಿದ ಸಂಸ್ಕೃತ ವಿದ್ವಾನ್ ಡಾ.ಹೆಚ್.ವಿ.ನಾಗರಾಜ ರಾವ್ ಮಾತನಾಡಿ, ಜಗತ್ತಿನ ಮೊದಲ ಕಲಾವಿದ ಭಗವಂತ. ಭಗವಂತನ ಅಂಶ ಉಳ್ಳವರು ಮಾತ್ರ ಕಲಾವಿದರಾಗಿ ಕಾಣಿಸಿಕೊಳ್ಳುತ್ತಾರೆ. ಕಲಾವಿದರಾದ ಶಿವಲಿಂಗಪ್ಪ ತಮ್ಮಲ್ಲಿನ ವಿದ್ಯೆಯನ್ನು ಇತರರಿಗೆ ಧಾರೆ ಎರೆದಿದ್ದಾರೆ. ಅವರಿಂದ ಜಮುನಾರಾಣಿ ಅವರು ಹೊರಹೊಮ್ಮಿದ್ದು, ಉತ್ತಮ ಚಿತ್ರಗಳನ್ನು ರಚಿಸಿದ್ದಾರೆ ಎಂದರು.

ಸಂಗೀತ ಜ್ಞಾನದ ಅನುಭವವನ್ನು ಬಳಸಿಕೊಂಡು ರಾಗಗಳ ಚಿತ್ರ ಬಿಡಿಸಿದ್ದಾರೆ. ಇದು ಅವರಿಗೆ ಭಗವಂತ ಕೊಟ್ಟಿರುವ ಶಕ್ತಿಯಾಗಿದೆ. ಜಮುನಾ ಅವರು ಕಾಲೇಜಿನಲ್ಲಿ ಇದ್ದಾಗ ಶೇಕ್ಸ್‌ಪಿಯರ್, 'ಮ್ಯಾಕ್ ಬೇತ್ ನಾಟಕವನ್ನು ಅಭಿನಯಿಸಿದ್ದಾರೆ ಎಂದ ಅವರು, ಸಂಗೀತ ಎಂಬುವುದೇ ದೊಡ್ಡ ಪ್ರಪಂಚ. ಅದಕ್ಕೆ ಹೆಚ್ಚಿನ ಗಮನ ನೀಡಬೇಕು. ಆದರೆ ಸಂಗೀತವನ್ನು ಪೂರ್ಣಗೊಳಿಸಿದ್ದಾರೆ. ನೃತ್ಯದಲ್ಲಿ ಪ್ರಾವೀಣ್ಯತೆ ಪಡೆದುಕೊಂಡು ಹೀಗೆ ಎಲ್ಲಾ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಆರ್.ಜಿ.ಸಿಂಗ್, ಮೈಸೂರು ವಿವಿ ಸಂದರ್ಶಕ ಪ್ರಾಧ್ಯಾಪಕ ಡಾ.ಸಿ. ನಾಗಣ್ಣ ಮೈಸೂರು ಆರ್ಟ್ ಗ್ಯಾಲರಿ ಸಂಸ್ಥಾಪಕ ಎಲ್.ಶಿವಲಿಂಗಪ್ಪ, ಲೇಖಕಿ ಬಿ.ಆರ್. ನಾಗರತ್ನ, ಕಲಾವಿದೆ ಡಾ.ಜಮುನಾರಾಣಿ ಮಿರ್ಲೆ ಇನ್ನಿತರರು ಉಪಸ್ಥಿತರಿದ್ದರು.

ಯಾತ್ರಾರ್ಥಿಗಳಿಗೆ ಸಿಹಿಸುದ್ದಿ: ಕೊನೆಗೂ ಕೇದಾರನಾಥ್ ಟ್ರೆಕಿಂಗ್ ಮಾರ್ಗ ದುರಸ್ತಿ



ಕೇದಾರನಾಥ ಚಾರಣ ಮಾರ್ಗ ದುರಸ್ತಿಯಾಗಿರುವುದು.

ಕೇದಾರನಾಥ: ಕಳೆದ ಜುಲೈ 31ರ ರಾತ್ರಿ ಸುರಿದ ಭಾರಿ ಮಳೆಯಿಂದ ಉಂಟಾದ ಭೂಕುಸಿತದಿಂದ ಹಾನಿಗೊಳಗಾಗಿದ್ದ ಕೇದಾರನಾಥ ಚಾರಣ ಮಾರ್ಗ ದುರಸ್ತಿಯಾಗಿದ್ದು, ಯಾತ್ರಾರ್ಥಿಗಳಿಗೆ ಪುನಃ ತೆರೆಯಲಾಗಿದೆ. ಬರೋಬ್ಬರಿ 15 ದಿನಗಳ ನಿರಂತರ ದುರಸ್ತಿ ಕಾಮಗಾರಿ ಪೂರ್ಣಗೊಂಡಿದ್ದು, ಯಾತ್ರಾರ್ಥಿಗಳಿಗೆ ಟ್ರೆಕಿಂಗ್ ಮಾರ್ಗವನ್ನು ಬಳಕೆಗೆ ತೆರೆಯಲಾಗಿದೆ. ಭೂಕುಸಿತದಿಂದ 29 ಸ್ಥಳಗಳಲ್ಲಿ ನಿರ್ಬಂಧಿಸಲಾಗಿದ್ದ 19 ಕಿಮೀ ಉದ್ದದ ಮಾರ್ಗವನ್ನು ಶನಿವಾರ ಪುನಃ ಸ್ಥಾಪಿಸಲಾಗಿದೆ ಎಂದು ಡೆಹ್ರಾಡೂನ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಸುಮಾರು 260 ಕಾರ್ಮಿಕರು ಹಗಲಿರುಳು ಶ್ರಮಿಸಿ ಯಾತ್ರಾರ್ಥಿಗಳಿಗೆ ಮಾರ್ಗವನ್ನು ಸರಿಪಡಿಸಿದ್ದು, ಭದ್ರತಾ ಸಿಬ್ಬಂದಿ ಯಾತ್ರಾರ್ಥಿಗಳಿಗೆ ರಸ್ತೆ ದಾಟಲು ಸಹಾಯ ಮಾಡುತ್ತಿರುವ ಒಂದೆರಡು ಸ್ಥಳಗಳನ್ನು ಹೊರತುಪಡಿಸಿ ಬಹುತೇಕ ಮಾರ್ಗವನ್ನು ಈಗ ದುರಸ್ತಿ ಮಾಡಲಾಗಿದೆ ಎಂದರು.

ಜು.31ರಂದು ಭಾರಿ ಮಳೆ ಸುರಿದ ನಂತರ ಈ ಮಾರ್ಗದಲ್ಲಿ ಸರಣಿ ಭೂಕುಸಿತಗಳು ಸಂಭವಿಸಿತ್ತು. ಅಂದು ಸಾವಿರಾರು ಯಾತ್ರಾರ್ಥಿಗಳು ಸಿಲುಕಿಕೊಂಡಿದ್ದರು. ಭಾರತೀಯ ವಾಯುಪಡೆ, ಖಾಸಗಿ ಹೆಲಿಕಾಪ್ಟರ್‌ಗಳ ನೆರವಿನಿಂದ ಭೀಮಾಲಿ ಮತ್ತು ಲಿಂಚೋಲಿ ಸೇರಿದಂತೆ ಮಾರ್ಗದುದ್ದಕ್ಕೂ ಸಿಕ್ಕಿಬಿದ್ದ 11,000ಕ್ಕೂ ಹೆಚ್ಚು ಯಾತ್ರಾರ್ಥಿಗಳನ್ನು ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್, ಪೊಲೀಸ್ ಸಿಬ್ಬಂದಿ ಸುಮಾರು ವಾರದ ರಕ್ಷಣಾ ಕಾರ್ಯಾಚರಣೆಯಲ್ಲಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದರು.

ಕೊಲ್ಕತ್ತಾ ವೈದ್ಯಕೀಯ ವಿದ್ಯಾರ್ಥಿ ಹತ್ಯೆ ಖಂಡಿಸಿ ಮೋಂಬತ್ತಿ ಪ್ರದರ್ಶನ



ಮೈಸೂರಿನ ನ್ಯಾಯಾಲಯದ ಮುಂಭಾಗ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.





ಮೈಸೂರಿನಲ್ಲಿ ವಿವಿಧ ಸಂಘಟನೆಗಳು ಮೇಣದ ಬತ್ತಿ ಮೆರವಣಿಗೆ ನಡೆಸಿ, ವೈದ್ಯ ವಿದ್ಯಾರ್ಥಿನಿ ಮೇಲಿನ ದುಷ್ಕೃತ್ಯವನ್ನು ಖಂಡಿಸಿದವು.

ಮೈಸೂರು, ಆ.17(ಎಸ್‌ಬಿಡಿ)– 'ತೂರ ಬೇಡಿ ಗಾಳಿಗೆ ಹೆಣ್ತನದ ಘನತೆಯ...' ಹಾಡಿನೊಂದಿಗೆ ಮೋಂಬತ್ತಿ ಬೆಳಗುವ ಮೂಲಕ ಕೊಲ್ಕತ್ತಾ ವೈದ್ಯಕೀಯ ವಿದ್ಯಾರ್ಥಿನಿಯ ಸಾಮೂಹಿಕ ಅತ್ಯಾಚಾರ ಹಾಗೂ ಹತ್ಯೆಯನ್ನು ಮೈಸೂರಿನಲ್ಲಿ ಖಂಡಿಸಲಾಯಿತು.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಪಿಯುಸಿಎಲ್, ಸಮತಾ ವೇದಿಕೆ ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಮೈಸೂರು ನ್ಯಾಯಾಲಯ ಮುಂಭಾಗದ ಮಹಾತ್ಮ ಗಾಂಧೀ ಪುತ್ಥಳಿ ಬಳಿ ಶನಿವಾರ ಸಂಜೆ ಮೋಂಬತ್ತಿ ಕೊಲ್ಕತ್ತಾ ವೈದ್ಯಕೀಯ ವಿದ್ಯಾರ್ಥಿನಿ ಮೇಲಿನ ಸಾಮೂಹಿಕ ಅತ್ಯಾಚಾರ ಹಾಗೂ ಹತ್ಯೆಯನ್ನು ಖಂಡಿಸಲಾಯಿತು. 'ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯವೆಸಗುವ ವಿಕೃತ ಮನಸ್ಸುಗಳಿಗೆ ದಿಕ್ಕಾರ', 'ಮಹಿಳೆಯರ ಆತ್ಮಗೌರವ, ಸುರಕ್ಷತೆ ಎಲ್ಲಿ?', 'ಅಮಾನುಷ ಕೃತ್ಯವೆಸಗಿದ ಪಾಪಿಗಳನ್ನು ಗಲ್ಲಿಗೇರಿಸಿ' ಎಂಬಿತ್ಯಾದಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಲಾಯಿತು.

'ಹೆಣ್ಣಿಗೆ ಬೇಕು ರಕ್ಷಣೆ', 'ಹಂತಕರನ್ನು ಗಲ್ಲಿಗೇರಿಸಿ', 'ನಮ್ಮ ದೇಹ ನಮ್ಮ ಹಕ್ಕು' ಘೋಷಣೆ ಕೂಗಿದರು. ಇದೇ ವೇಳೆ 'ತೂರ ಬೇಡಿ ಗಾಳಿಗೆ ಹೆಣ್ತನದ ಘನತೆಯ, ಜೀವ ಕೊಡುವ ಜೀವ ಇದು ಕಡಿಮೆ ಯಾರಿಗೆ?' ಗೀತೆಯನ್ನು ಸಾಮೂಹಿಕವಾಗಿ ಹಾಡುವ ಮೂಲಕ ಮಹಿಳೆಯರ ಮೇಲಿನ ದೌರ್ಜನ್ಯ ನಿಲ್ಲಬೇಕು. ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಸುರಕ್ಷತೆಯ ವಾತಾವರಣ ನಿರ್ಮಾಣವಾಗಬೇಕು ಎಂದು ಆಗ್ರಹಿಸಲಾಯಿತು.

ಪ್ರೊ.ಸಬಿಹಾ ಭೂಮಿಗೌಡ, ರತಿರಾವ್, ಲತಾ ಬಿದ್ದಪ್ಪ, ಶ್ರೀದೇವಿ, ವಸಂತಮ್ಮ, ಸುಮಾ ರವೀಂದ್ರ, ಕಾಳಚನ್ನೇಗೌಡ, ಉಗ್ರ ನರಸಿಂಹೇಗೌಡ, ಖೈಸರ್ ನಿಕ್ಕಂ, ನಿಖಿತಾ ನಿಕ್ಕಂ, ಶಾಂತಿ ಯದುನಂದನ್, ಜಗನ್ನಾಥ, ಪಂಡಿತಾರಾಧ್ಯ, ಸುಮತಿ, ವನಜಾ, ನಾ.ದಿವಾಕರ್, ಡಾ. ಸುಧಾ, ಡಾ.ಗಿರಿಜಾ, ಸುಮನಾ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಳಿಕ ವಿವಿಧ ಸಂಘಟನೆಗಳ ಸದಸ್ಯರು ಮೇಣದಬತ್ತಿ ಮೆರವಣಿಗೆ ಮೂಲಕ ಗಾಂಧಿ ಪುತ್ಥಳಿ ಬಳಿ ಆಗಮಿಸಿ, ಮಾನವ ಸರಪಳಿ ನಿರ್ಮಿಸುವ ಮೂಲಕ ವೈದ್ಯ ವಿದ್ಯಾರ್ಥಿನಿ ಮೇಲಿನ ಸಾಮೂಹಿಕ ಅತ್ಯಾಚಾರ ಹಾಗೂ ಹತ್ಯೆಯನ್ನು ಖಂಡಿಸಿ, ದುಷ್ಕೃತ್ಯವೆಸಗಿದವರ ಗಲ್ಲಿಗೇರಿಸಲು ಒತ್ತಾಯಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಭಾನುವಾರ 18 ಆಗಸ್ಟ್ 2024

ರಾಜ್ಯಪಾಲರ ಕಚೇರಿ ದುರ್ಬಳಕೆ; ಸರ್ಕಾರ ಅಸ್ಥಿರಗೊಳಿಸುವ ಷಡ್ಯಂತ್ರ

● ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಾಗ್ದಾಳಿ ● ಸಿದ್ದರಾಮಯ್ಯ ನಮ್ಮ ನಾಯಕರು; ಅವರು ಮುಖ್ಯಮಂತ್ರಿಯಾಗೇ ಮುಂದುವರೆಯುತ್ತಾರೆ

ಬೆಂಗಳೂರು, ಆ.17(ಕೆಎಂಶಿ)–ರಾಜ್ಯಪಾಲರ ಕಚೇರಿ ದುರ್ಬಳಕೆ ಮಾಡಿಕೊಂಡು ಮುಡಾದ ಸುಳ್ಳು ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಿಲುಕಿಸಿ ಸರ್ಕಾರ ಅಸ್ಥಿರಗೊಳಿಸುವ ಷಡ್ಯಂತ್ರ ನಡೆಯುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲುತ್ತದೆ, ಅವರು ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ಎಂದರು.

ಸಿದ್ದರಾಮಯ್ಯ ನಮ್ಮ ಮುಖ್ಯಮಂತ್ರಿ, ಅವರು ಮುಖ್ಯಮಂತ್ರಿಗಳಾಗಿಯೇ ಮುಂದುವರೆಯುತ್ತಾರೆ. ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ. ನಾವು ಒಟ್ಟಾಗಿ ರಾಜ್ಯದ ಜನರ ಸೇವೆ ಮುಂದುವರಿಸುತ್ತೇವೆ.

ಕೇವಲ ಕಾಂಗ್ರೆಸ್ ಮಾತ್ರವಲ್ಲ 'ಇಂಡಿಯಾ' ಒಕ್ಕೂಟ ಮುಖ್ಯಮಂತ್ರಿಗಳ ಬೆನ್ನಿಗೆ ನಿಲ್ಲಲಿದೆ, ಸುಳ್ಳು ಪ್ರಕರಣದ ವಿರುದ್ಧ ಕಾನೂನು ಚೌಕಟ್ಟಿನಲ್ಲಿ ಹೋರಾಟ ಮುಂದುವರಿಸುತ್ತೇವೆ. ರಾಜಕೀಯವಾಗಿಯೂ ಜನರ ಮುಂದೆ ಹೋಗುತ್ತೇವೆ. ರಾಜಭವನ ಬಿಜೆಪಿ ಕಚೇರಿಯಾಗಿ ಪರಿವರ್ತನೆ ವಿರುದ್ಧ ಹೋರಾಟ ಮಾಡುತ್ತೇವೆ. ಮುಖ್ಯಮಂತ್ರಿ ಗಳ ವಿರುದ್ಧ ಕಾನೂನುಬಾಹಿರವಾಗಿ ವಿಚಾರಣೆಗೆ ಅನುಮತಿ ನೀಡಲಾಗಿದೆ, ದೇಶದ ಕಾನೂನು ನಮಗೆ ರಕ್ಷಣೆ ನೀಡಲಿದೆ, ನ್ಯಾಯಪೀಠದಿಂದ ಅನ್ಯಾಯ ಆಗುವುದಿಲ್ಲ ಎಂಬ ನಂಬಿಕೆಯಿಂದ ಕಾನೂನು ಸಮರಕ್ಕೆ ಸಜ್ಜಾಗಿದ್ದೇವೆ ಎಂದರು.



ಡಿ.ಕೆ.ಶಿವಕುಮಾರ್

ಹಿಂದುಳಿದ ವರ್ಗದ ನಾಯಕ ರಾಜ್ಯದಲ್ಲಿ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದನ್ನು ಸಹಿಸಲಾಗದೇ ಕೇಂದ್ರ ಬಿಜೆಪಿ ಸರ್ಕಾರ ದೊಡ್ಡ ಪಿತೂರಿ ನಡೆಸಿದೆ. ರಾಜಭವನ ಬಿಜೆಪಿ ಪಕ್ಷದ ಕೈಗೊಂಬೆಯಾಗಬಾರದು. ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಪ್ರತಿ ವರ್ಷ 56 ಸಾವಿರ ಕೋಟಿ ರೂ. ಬಡವರಿಗೆ ಹಂಚುತ್ತಿದೆ. ಇಂತಹ ಐತಿಹಾಸಿಕ ಯೋಜನೆಗಳನ್ನು ಜಾರಿಗೆ ತಂದಿರುವ ಸರ್ಕಾರದ ವಿರುದ್ಧ ಈ ಷಡ್ಯಂತ್ರ ನಡೆಸಲಾಗುತ್ತಿದೆ ಎಂದು ಕಿಡಿಕಾರಿದರು. ಇಂತಹ ಪ್ರಕರಣಗಳ ಸಂದರ್ಭದಲ್ಲಿ ರಾಜ್ಯಪಾಲರು ಯಾವ ರೀತಿ ನಡೆದುಕೊಳ್ಳಬೇಕು ಎಂಬ ಬಗ್ಗೆ ನ್ಯಾಯಾಲಯಗಳ ಮಾರ್ಗದರ್ಶನ ಇದೆ, ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಜಾರ್ಖಂಡ್, ತೆಲಂಗಾಣ, ಪಂಜಾಬ್ ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿನ ಪ್ರಕರಣಗಳು ಇದಕ್ಕೆ ಉದಾಹರಣೆಗಳಾಗಿವೆ, ಮುಡಾ ಪ್ರಕರಣದಲ್ಲಿ ಯಾವುದೇ ಕಾನೂನು ಪ್ರಕ್ರಿಯೆ ಪಾಲನೆ ಆಗಿಲ್ಲ. ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರ ಶೋಕಾಸ್ ನೋಟಿಸ್‌ಗೆ ವಿವರವಾದ ಉತ್ತರ ನೀಡಿದ್ದೆವು, ಸಚಿವ ಸಂಪುಟ ಸಭೆಯೂ ದೂರು ತಿರಸ್ಕರಿಸುವಂತೆ ಮನವಿ ಮಾಡಿತ್ತು.

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಪ್ರಕರಣ ಲೋಕಾಯುಕ್ತದಲ್ಲಿ ತನಿಖೆ ನಡೆದು ವಿಚಾರಣೆಗೆ ಅನುಮತಿ ಕೋರಿ ಮನವಿ ಮಾಡಲಾಗಿದೆ, ಮಾಜಿ ಸಚಿವ ಜನಾರ್ದನ ರೆಡ್ಡಿ ವಿರುದ್ಧ ವಿಚಾರಣೆಗೆ ಅನುಮತಿ ಕೋರಲಾಗಿದೆ.

ಅಲ್ಲದೆ, ಮಾಜಿ ಸಚಿವೆ ಶಶಿಕಲಾ ಜೊಲ್ಲೆ ವಿರುದ್ಧವೂ ವಿಚಾರಣೆಗೆ ಅನುಮತಿ ಕೋರಿ ರಾಜ್ಯಪಾಲರಿಗೆ ಪತ್ರ ಬರೆಯಲಾಗಿದೆ. ಮಾಜಿ ಸಚಿವ ಮುರುಗೇಶ ನಿರಾಣಿ ವಿರುದ್ಧವೂ ವಿಚಾರಣೆಗೆ ಅನುಮತಿ ಕೋರಿದ ಅರ್ಜಿ ಬಾಕಿ ಇದೆ. ಈ ಎಲ್ಲಾ ಪ್ರಕರಣಗಳಲ್ಲಿ ಪ್ರಾಥಮಿಕ ತನಿಖೆ ವರದಿ ಆಧಾರದ ಮೇಲೆ ವಿಚಾರಣೆಗೆ ಅನುಮತಿ ಕೇಳಲಾಗಿದೆ ಎಂದರು.

ಇವುಗಳ ಬಗ್ಗೆ ರಾಜ್ಯಪಾಲರು ತೀರ್ಮಾನ ಮಾಡದೆ, ಸಿದ್ದರಾಮಯ್ಯ ವಿರುದ್ಧದ ಪ್ರಕರಣದಲ್ಲಿ ದೂರು ಬಂದ 24 ತಾಸಿನಲ್ಲೇ ಸರ್ಕಾರಕ್ಕೆ ಶೋಕಾಸ್ ನೋಟಿಸ್ ನೀಡಿ ವಿವರಣೆ ಕೇಳುತ್ತಾರೆ.

ಇದು ಸಿದ್ದರಾಮಯ್ಯ ವಿರುದ್ಧದ ಷಡ್ಯಂತ್ರ ಮಾತ್ರವಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 136+2 ಶಾಸಕರ ಬಲದೊಂದಿಗೆ ಅಧಿಕಾರಕ್ಕೆ ಬಂದಿರುವ ಸರ್ಕಾರದ ವಿರುದ್ಧ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜ್ಯದ ಜನರು ಕೊಟ್ಟಿರುವ ಆಶೀರ್ವಾದದ ವಿರುದ್ಧ ನಡೆದಿರುವ ಷಡ್ಯಂತ್ರ. ಮುಂದಿನ 8–10 ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುತ್ತೇವೆ ಎಂದು ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ ಹಾಗೂ ಕುಮಾರಸ್ವಾಮಿ ಹೇಳಿಕೆ ನೀಡಿದ್ದರು, ಇದಕ್ಕೆ ಪೂರಕವಾಗಿ ಷಡ್ಯಂತ್ರ ನಡೆಯುತ್ತಿದೆ ಎಂದರು.

ಪ್ರಾಸಿಕ್ಯೂಷನ್‌ಗೆ ಅನುಮತಿ ಹಿನ್ನೆಲೆ; ನಿಷ್ಪಕ್ಷಪಾತ ತನಿಖೆಯಾಗಲಿ

ಮೈಸೂರು, ಆ.17(ಬಿಎಲ್‌ಯು)– ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ನಿಷ್ಪಕ್ಷಪಾತ ತನಿಖೆ ನಡೆಯಬೇಕು ಎಂದು ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆಗ್ರಹಿಸಿದ್ದಾರೆ. ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ನಿಷ್ಪಕ್ಷಪಾತ ತನಿಖೆ ನಡೆಯುವುದರ ಮೂಲಕ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು ಎಂದು ಹೇಳಿದರು.



ಯದುವೀರ್

ಮುಡಾ ಹಾಗೂ ವಾಲ್ಮೀಕಿ ನಿಗಮದ ಹಗರಣದಲ್ಲಿ ಬಿಜೆಪಿ ಹೋರಾಟ ಮಾಡುತ್ತಾ ಬಂದಿತ್ತು. ಈಗ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ರಾಜ್ಯಪಾಲರ ಹುದ್ದೆ ಸಂವಿಧಾನಾತ್ಮಕವಾಗಿದ್ದು, ರಾಜ್ಯಪಾಲರು ಅದರಂತೆಯೇ ಕ್ರಮ ಕೈಗೊಂಡಿದ್ದಾರೆ ಎಂದು ಥಾವರ್‌ಚಂದ್ ಗೆಹ್ಲೋಟ್ ಅವರ ತೀರ್ಮಾನವನ್ನು ಯದುವೀರ್ ಸಮರ್ಥಿಸಿಕೊಂಡರು. ಬಿಜೆಪಿ ಜವಾಬ್ದಾರಿಯುತವಾಗಿ ಹೋರಾಟ ಮುಂದುವರೆಸುತ್ತದೆ. ಕಾನೂನಾತ್ಮಕವಾಗಿ ಕೂಡ ಹೋರಾಟ ಮುಂದುವರೆಸಲಿದೆ ಎಂದು ತಿಳಿಸಿದರು.

ರಾಮಕೃಷ್ಣ ಹೆಗಡೆ ನನ್ನ ಆದರ್ಶ ಎನ್ನುವ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ನೀಡಲಿ

ಮೈಸೂರು, ಆ.17(ಬಿಎಲ್‌ಯು)– ದಿವಂಗತ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ನನ್ನ ಆದರ್ಶ ಎಂದು ಹೇಳುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ತಮ್ಮ ಸ್ಥಾನಕ್ಕೆ ತಕ್ಷಣ ರಾಜೀನಾಮೆ ನೀಡಿ ತನಿಖೆ ಎದುರಿಸಲಿ ಎಂದು ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಆಗ್ರಹಿಸಿದ್ದಾರೆ..

ಕರ್ನಾಟಕದ ರಾಜಕಾರಣಕ್ಕೆ ದೊಡ್ಡ ಪರಂಪರೆ ಇದೆ. ರಾಮಕೃಷ್ಣ ಹೆಗಡೆ ಅವರು ಟೆಲಿಫೋನ್ ಹಗರಣದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಈಗ ಸಿದ್ದರಾಮಯ್ಯ ಕೂಡ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದರಿಂದ ನಮ್ಮ ಹೋರಾಟಕ್ಕೆ ಜಯ ಸಿಕ್ಕಿದೆ. ಮುಡಾದಲ್ಲಿ ಅಕ್ರಮವಾಗಿ ಬಹಳಷ್ಟು ನಿವೇಶನ ಹಂಚಿಕೆ ಮಾಡಲಾಗಿದ್ದು, ಇದರ ವಿರುದ್ಧ ನಮ್ಮ ಹೋರಾಟ ಮುಂದುವರೆಯಲಿದೆ ಎಂದು ರಘು ಕೌಟಿಲ್ಯ ತಿಳಿಸಿದ್ದಾರೆ. ವಿಧಾನಸಭಾ ಅಧಿವೇಶನದಲ್ಲಿ ಸಿದ್ದರಾಮಯ್ಯ ಮುಡಾ ಹಗರಣದ ಬಗ್ಗೆ ಉತ್ತರ ನೀಡಿದ್ದರೆ ನಾವು ಪಾದಯಾತ್ರೆ ಮಾಡುತ್ತಿರಲಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.



ರಘು

ಹಿಂದುಳಿದ ವರ್ಗಗಳ ಟ್ರಂಪ್ ಕಾರ್ಡ್ ಬಳಸಿಕೊಳ್ಳುವ ನೈತಿಕತೆ ಸಿದ್ದರಾಮಯ್ಯ ಅವರಿಗಿಲ್ಲ. ಸಿದ್ದರಾಮಯ್ಯ ಹಿಂದುಳಿದ ವರ್ಗಗಳಿಗೆ ಭಾರಿ ಅನ್ಯಾಯ ಮಾಡಿದ್ದಾರೆ. ಈ ಹಿನ್ನೆಲೆ ಹಿಂದುಳಿದ ವರ್ಗಗಳ ಚಾಂಪಿಯನ್ ಎಂದೇಳಿಕೊಳ್ಳುವ ನೈತಿಕತೆ ಅವರಿಗೆ ಇಲ್ಲ ಎಂದು ಹೇಳಿದ್ದಾರೆ. ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ ರಾಜೀನಾಮೆ ನೀಡಿ ತನಿಖೆ ಎದುರಿಸಲಿ. ಈ ಮೂಲಕ ತಾವು ನಿರ್ದೋಷಿ ಎಂದು ಸಾಬೀತುಪಡಿಸಲಿ ಎಂದು ರಘು ಕೌಟಿಲ್ಯ ಒತ್ತಾಯ ಮಾಡಿದ್ದಾರೆ.

14 ನಿವೇಶನಗಳ ವಾಪಸ್ ಮಾಡಿ ತನಿಖೆ ಮಾಡಿಸಿದ್ದರೆ ಸಿದ್ದರಾಮಯ್ಯ ಗೌರವ ಹೆಚ್ಚಾಗುತ್ತಿತ್ತು

ಮೈಸೂರು, ಆ. 17(ಆರ್‌ಕೆ)– ಮುಡಾ ನಿವೇಶನಗಳ ಹಂಚಿಕೆ ಪ್ರಕರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸಲು ಅನುಮತಿ ನೀಡಿರುವ ರಾಜ್ಯಪಾಲರ ಕ್ರಮವನ್ನು ಶಾಸಕ ಟಿ.ಎಸ್. ಶ್ರೀವತ್ಸ ಸ್ವಾಗತಿಸಿದ್ದಾರೆ. ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ನಿಯಮಬಾಹಿರವಾಗಿ ತಮ್ಮ ಪತ್ನಿ ಹೆಸರಲ್ಲಿ ಶೇ. 50:50ರ ಅನುಪಾತದಡಿ ದೇವನೂರು ಬಡಾವಣೆಯಲ್ಲಿ ಬಳಸಿಕೊಂಡ ಜಾಗದ ಬದಲು ಪ್ರತಿಷ್ಠಿತ ವಿಜಯನಗರ ಬಡಾವಣೆಯಲ್ಲಿ ಬೆಲೆ ಬಾಳುವ ನಿವೇಶನಗಳನ್ನು ಪಡೆಯುವ ಮೂಲಕ ಈ ರಾಜ್ಯದ ಚುಕ್ಕಾಣಿ ಹಿಡಿದ ಜವಾಬ್ದಾರಿಯುತ ಮುಖ್ಯಮಂತ್ರಿಗಳು ಭ್ರಷ್ಟಾಚಾರ ನಡೆಸಿದ್ದಾರೆ. ನಿಷ್ಪಕ್ಷಪಾತದ ತನಿಖೆಗೆ ಆದೇಶಿಸಬೇಕೆಂದು ತಾವು ರಾಜ್ಯಪಾಲರು, ರಾಜ್ಯ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೂ ದೂರು ನೀಡಿದ್ದಾಗಿ ತಿಳಿಸಿದರು.



ಶ್ರೀವತ್ಸ

ಆರೋಪ ಕೇಳಿ ಬರುತ್ತಿದ್ದಂತೆಯೇ ಮುಖ್ಯಮಂತ್ರಿಗಳು, ತಮ್ಮ ಪತ್ನಿ ಹೆಸರಿಗೆ ಹಂಚಿಕೆಯಾಗಿರುವ 14 ನಿವೇಶನಗಳನ್ನೂ ಮುಡಾಗೆ ವಾಪಸ್ ನೀಡಿ, ಪ್ರಾಧಿಕಾರದಲ್ಲಿ 2020ರಿಂದೀಚೆಗೆ ಶೇ. 50:50ರ ಅನುಪಾತದಡಿ ಹಂಚಿಕೆಯಾಗಿರುವ ಎಲ್ಲಾ ನಿವೇಶನಗಳನ್ನು ರದ್ದುಪಡಿಸಿ ಮುಟ್ಟುಗೋಲು ಹಾಕಿಕೊಳ್ಳಬೇಕಿತ್ತು. ಈ ರೀತಿಯ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಿಗೆ ಬಂದ ತಕ್ಷಣ, ಲೋಪವೆಸಗಿರುವ ಅಧಿಕಾರಿಗಳನ್ನು ಅಮಾನತುಗೊಳಿಸಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಸಿಬಿಐನಂತಹ ಸಂಸ್ಥೆಯಿಂದ ತನಿಖೆ ಮಾಡಿಸಿದ್ದರೆ ಮುಖ್ಯಮಂತ್ರಿಗಳ ಗೌರವ ಇಮ್ಮಡಿಯಾಗುತ್ತಿತ್ತು ಎಂದು ಶ್ರೀವತ್ಸ ತಿಳಿಸಿದರು.


ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್‌ರಂತಹ ಹಿತಶತ್ರುಗಳ ಮಾತು ಕೇಳಿ ಉಡಾಫೆಯಿಂದ ವರ್ತಿಸಿದ್ದರಿಂದಲೇ ಇಂದು ಮುಖ್ಯಮಂತ್ರಿಗಳಿಗೆ ಈ ಸ್ಥಿತಿ ಬಂದಿದೆ. ಅನ್ಯಾಯ, ಅಕ್ರಮದ ವಿರುದ್ಧ ಹೋರಾಡಿದ ನಮಗೆ ಜಯ ಸಿಕ್ಕಿದಂತಾಗಿದೆ. 'ಸತ್ಯ ಮೇವ ಜಯತೆ' ಎಂಬಂತೆ 'ಸತ್ಯ' ಎಂದಿಗೂ ಗೆಲ್ಲುತ್ತದೆ ಎಂಬುದು ಈ ಪ್ರಕರಣದಲ್ಲಿ ಮತ್ತೊಮ್ಮೆ ಸಾಬೀತಾಗಿದೆ ಎಂದು ಅವರು ನುಡಿದರು.

ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಕ್ಕೆ ರಾಜ್ಯಪಾಲರ ವಿರುದ್ಧ 'ಗೋ ಬ್ಯಾಕ್ ಗವರ್ನರ್' ಪ್ರತಿಭಟನೆ ಮಾಡುತ್ತಿರುವ ಕಾಂಗ್ರೆಸ್, ಅಹಿಂದ ಮುಖಂಡರು ಸ್ವಜನಪಕ್ಷಪಾತ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಶಾಸಕರು, ಈ ಪ್ರಕರಣ ದಲ್ಲಿ ನೈತಿಕ ಹೊಣೆ ಹೊತ್ತು ಸಿದ್ದ ರಾಮಯ್ಯನವರು ಮುಖ್ಯಮಂತ್ರಿ ಸ್ಥಾನಕ್ಕೆ ತಕ್ಷಣ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಸಿದ್ದರಾಮಯ್ಯ ಯಾವ ರೀತಿ ತಪ್ಪು ಮಾಡಿದ್ದಾರೆಂಬುದಕ್ಕೆ ದಾಖಲೆಗಳನ್ನು ನೀಡಿದ್ದೆವು. ಅವುಗಳನ್ನು ನೋಡದೆಯೇ ಉಡಾಫೆಯಿಂದ ನಡೆದುಕೊಂಡ ಸಿದ್ದರಾಮಯ್ಯ, ಮೈಸೂರಲ್ಲಿ ಭೂಮಿ ತಾಯಿಗೆ ಅಪಚಾರ ಮಾಡಿದ್ದಾರೆ ಎಂದ ಶ್ರೀವತ್ಸ, ಬಿಜೆಪಿ ಅಥವಾ ಜೆಡಿಎಸ್‌ನವರೂ ತಪ್ಪು ಮಾಡಿದ್ದಾರೆಂದರೆ ತನಿಖೆ ನಡೆಸಬಹುದಿತ್ತು ಎಂದರು.

ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಬೆನ್ನಲ್ಲೇ ರಾಜ್ಯಪಾಲರ ಭೇಟಿಯಾದ ಟಿ.ಜೆ.ಅಬ್ರಹಾಂ

ಬೆಂಗಳೂರು, ಆ.17–ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಅನುಮತಿ ಬೆನ್ನಲ್ಲೇ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿದ್ದಾರೆ. ಬಳಿಕ ರಾಜಭವನದ ಬಳಿ ಮಾತನಾಡಿದ ಅವರು, ಸೋಮವಾರ ಕೇವಿಯಟ್ ಹಾಕುತ್ತೇನೆ. ಸಣ್ಣ ಸ್ಪಷ್ಟನೆ, ಕ್ಲಾರಿಟಿ ಬೇಕಿತ್ತು ಅದಕ್ಕೆ ನನ್ನ ನೋಡಬೇಕು ಎಂದು ಗವರ್ನರ್ ಕರೆದಿದ್ದರು. ರಾಜ್ಯಪಾಲರನ್ನು ಭೇಟಿಯಾಗಿ ಆ ಬಗ್ಗೆ ಸ್ಪಷ್ಟನೆ ನೀಡಿದ್ದೇನೆ ಎಂದರು.



ಇನ್ನು ಪ್ರಾಸಿಕ್ಯೂಷನ್‌ಗೆ ಗವರ್ನರ್ ಅನುಮತಿ ನೀಡಿದ ಪ್ರತಿಯನ್ನು ಕೋರ್ಟ್‌ಗೆ ಸಲ್ಲಿಸುತ್ತೇನೆ. ಆ ಬಳಿಕ ಕೋರ್ಟ್ ನಿರ್ದೇಶನದಂತೆ ಎಫ್‌ಐಆರ್ ದಾಖಲಾಗಲಿದೆ. ಈಗಾಗಲೆ ಕೋರ್ಟ್‌ನಲ್ಲಿ ಈ ವಿಚಾರ ಇದೆ. ಲೋಕಾಯುಕ್ತಕ್ಕೆ ಸ್ಯಾಂಕ್ಷನ್ ಕಾಪಿಯನ್ನ ಕಳಿಸಲಾಗುತ್ತದೆ. ಈ ಹಿಂದೆ ಎಸ್.ಎಂ.ಕೃಷ್ಣ, ಧರ್ಮಸಿಂಗ್, ಹೆಚ್‌ಡಿಕೆ, ನಿರಾಣಿ, ಜೊಲ್ಲೆ ಮೇಲೂ ಸಹ ದೂರು ನೀಡಿದ್ದೆ. ಆ ಕೇಸ್‌ನಲ್ಲಿ ಅನುಮತಿ ನೀಡದ ವಿಚಾರವಾಗಿ ಮಾತನಾಡಿ, ಅದು ನನಗೆ ಸಂಬಂಧ ಪಡದ ವಿಚಾರ ಮತ್ತು ರಾಜಕೀಯ ಆರೋಪಗಳಿಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

ಸಿಎಂ ಸ್ಥಾನಕ್ಕೆ ರಾಜೀನಾಮೆ ವಿಚಾರ: ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ಎಂದು ನಾವು ಕೇಳಿಲ್ಲ, ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ ಎಂದು ಕೇಳಿದ್ದೆವು. ಜೊತೆಗೆ ನಾನು ಕೇಸ್‌ನಲ್ಲಿರುವ ಅಕ್ರಮವನ್ನು ಮನವರಿಕೆ ಮಾಡಿದ್ದೀನಿ. ನಮ್ಮ ಮನವಿಯಂತೆ ರಾಜ್ಯಪಾಲರು ಅನುಮತಿ ಕೊಟ್ಟಿದ್ದಾರೆ. ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಕ್ಕೆ ಧನ್ಯವಾದ ಸಲ್ಲಿಸಿದ್ದೇನೆ ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಅನುಮತಿ ಖಂಡಿಸಿ ಪಂಜಿನ ಮೆರವಣಿಗೆ



ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಅನುಮತಿ ಖಂಡಿಸಿ ಅಹಿಂದ ಮುಖಂಡರಿಂದ ಪಂಜಿನ ಮೆರವಣಿಗೆ ನಡೆಸಲಾಯಿತು.

ಮೈಸೂರು, ಆ.17(ಎಂಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಖಂಡಿಸಿ ಪಂಜಿನ ಮೆರವಣಿಗೆ ನಡೆಸಲಾಯಿತು.

ನಗರದ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಜಮಾವಣೆಗೊಂಡ ಅಹಿಂದ ಸಮುದಾಯಗಳ ಮುಖಂಡರು, ಸಿದ್ದರಾಮಯ್ಯನವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಟೌನ್ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆವರೆಗೆ ಪಂಜಿನ ಮೆರವಣಿಗೆ ನಡೆಸಿದರಲ್ಲದೆ ಕೇಂದ್ರ ಬಿಜೆಪಿ ಸರ್ಕಾರ ಹಾಗೂ ರಾಜ್ಯಪಾಲರ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರದ ವಿರುದ್ಧ ಕೂಗುತ್ತಾ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಜೈಕಾರ ಮೊಳಗಿಸಿದರು. ಕೂಡಲೇ ರಾಜ್ಯಪಾಲರು ನೀಡಿರುವ ಪ್ರಾಸಿಕ್ಯೂಷನ್‌ಗೆ ನೀಡಿರುವ ಅನುಮತಿ ಹಿಂಪಡೆಯದಿದ್ದರೇ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಪಂಜಿನ ಮೆರವಣಿಗೆಯ ನೇತೃತ್ವ ವಹಿಸಿದ್ದ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಬಿಜೆಪಿ–ಜೆಡಿಎಸ್ ಕೈಗೊಂಬೆಯಾಗಿರುವ ರಾಜ್ಯಪಾಲರು, ಪ್ರಾಸಿಕ್ಯೂಷನ್‌ಗೆ ನೀಡಿರುವ ಅನುಮತಿ ವಾಪಸ್ ಪಡೆಯದಿದ್ದರೆ ಪ್ರತಿನಿತ್ಯ ಒಂದಲ್ಲಾ ಒಂದು ರೀತಿಯ ಪ್ರತಿಭಟನೆಗಳು ನಡೆಯಲಿವೆ ಎಂದು ಎಚ್ಚರಿಕೆ ನೀಡಿದರು.

ರಾಜ್ಯಪಾಲರದು ಅಸಂವಿಧಾನಿಕ ನಡೆ

ಮೈಸೂರು, ಆ.17– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನು ಮತಿ ನೀಡಿರುವ ರಾಜ್ಯ ಪಾಲರ ಅಸಂವಿಧಾನಿಕ ನಡೆ ಖಂಡನಾರ್ಹ ಎಂದು ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್ ಹೇಳಿದ್ದಾರೆ. ಮೂರು ದಶಕಗಳಿಂದ ನಾನು ಸಿದ್ದರಾಮಯ್ಯನವರ ರಾಜಕೀಯ ಜೀವನ ಹಾಗೂ ಅವರ ವ್ಯಕ್ತಿತ್ವವನ್ನು ಹತ್ತಿರದಿಂದ ನೋಡಿದ್ದೇನೆ. ಒಂದೂ ಕಪ್ಪುಚುಕ್ಕೆ ಇಲ್ಲದೆ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಅವರ ಶ್ರೀಮತಿಯವರಿಗೆ ಕಾನೂನು ಬದ್ಧವಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ನೀಡಿರುವುದನ್ನು ವಿಪಕ್ಷಗಳು ತಪ್ಪಾಗಿ ಬಿಂಬಿಸುತ್ತಿವೆ. ರಾಜ್ಯಪಾಲರು ಬಿಜೆಪಿ ಕೈಗೊಂಬೆಯಾಗಿ ಶೋಕಾಸ್ ನೋಟೀಸ್ ನೀಡಿದ್ದಲ್ಲದೆ ಇದೀಗ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ರಾಜ್ಯಪಾಲರು ಸರ್ಕಾರಕ್ಕೆ ಮಾರ್ಗದರ್ಶನ ನೀಡಬೇಕೇ ಹೊರತು ಬಿಜೆಪಿ ಹೈಕಮಾಂಡ್ ಹೇಳಿದಂತೆ ಅಸಂವಿಧಾನಿಕವಾಗಿ ನಡೆದುಕೊಳ್ಳಬಾರದು. ಇದು ರಾಜ್ಯಪಾಲರ ಹುದ್ದೆಗೆ ಗೌರವ ತರುವಂತದ್ದಲ್ಲ. ಇದರಿಂದ ಪ್ರಜಾಪ್ರಭುತ್ವದ ಕಗ್ಗೊಲೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ರಾಜ್ಯಪಾಲರ ಈ ನಡೆಯನ್ನು ಖಂಡಿಸಿ ರಾಜ್ಯಾದ್ಯಂತ ಈಗಾಗಲೇ ಪ್ರತಿಭಟನೆ ಪ್ರಾರಂಭವಾಗಿದೆ. ಏನೇ ಆದರೂ ಸರ್ಕಾರವನ್ನು ಅಸ್ಥಿರಗೊಳಿಸಿ, ಲಾಭ ಪಡೆಯಬೇಕೆಂಬ ವಿಪಕ್ಷಗಳ ಹುನ್ನಾರ ಫಲಿಸುವುದಿಲ್ಲ ಎಂದು ತಿಳಿಸಿದ್ದಾರೆ.



ಮಹೇಶ್

ದಲಿತ ಕುಟುಂಬದ ಭೂಮಿ ಕಬಳಿಸಿದ ಕಾಂಗ್ರೆಸ್ ಸಿಎಂ

ನವದೆಹಲಿ: 'ನ್ಯಾಷನಲ್ ಹೆರಾಲ್ಡ್' ಹಗರಣದಿಂದ 'ಮುಡಾ' ಹಗರಣದವರೆಗೆ ಕಾಂಗ್ರೆಸ್ ಪಕ್ಷದ ಭ್ರಷ್ಟಾಚಾರ ಪರಂಪರೆ ಮುಂದುವರಿದಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಜೆ.ಪಿ.ನಡ್ಡಾ ಹೇಳಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದರ ಕುರಿತು ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ನಡ್ಡಾ, ಕಾಂಗ್ರೆಸ್ ಪಕ್ಷದ ಭ್ರಷ್ಟಾಚಾರದ ಇತಿಹಾಸವನ್ನು ಉತ್ತಮವಾಗಿ ದಾಖಲಿಸಲಾಗಿದೆ ಎಂದು ಲೇವಡಿ ಮಾಡಿದರು. ವೈಯಕ್ತಿಕ ಲಾಭಕ್ಕಾಗಿ ಕಾಂಗ್ರೆಸ್ ಮತ್ತೊಮ್ಮೆ ಜನರ ವಿಶ್ವಾಸವನ್ನು ಕಳೆದುಕೊಂಡಿದೆ. ಕಾಂಗ್ರೆಸ್ ಪಕ್ಷವು ರಾಜ್ಯಪಾಲರ ನಿರ್ಧಾರವನ್ನು ಅಸಾಂವಿಧಾನಿಕ ಎಂದು ಹೇಳುವ ಬದಲು ತಾನು ಮಾಡಿರುವ ಕಾರ್ಯಗಳ ಬಗ್ಗೆ ಚಿಂತನೆ ನಡೆಸಲಿ ಎಂದು ಹೇಳಿದರು. ದಲಿತ ಮತ್ತು ಅಲ್ಪಸಂಖ್ಯಾತರ ರಕ್ಷಕರು ಎಂದು ಕಾಂಗ್ರೆಸ್ ಬಿಂಬಿಸಿಕೊಳ್ಳುತ್ತಿದ್ದರೆ, ಅದೇ ಪಕ್ಷದ ಮುಖ್ಯಮಂತ್ರಿಯೊಬ್ಬರು ದಲಿತ ಕುಟುಂಬದ ಭೂಮಿ ಕಬಳಿಸಿಕೊಳ್ಳುವುದರಲ್ಲಿ ತೊಡಗಿದ್ದಾರೆ. ಇದು ಕಾಂಗ್ರೆಸ್‌ನ ಕೇಂದ್ರಿತ ರಾಜಕಾರಣಕ್ಕೆ ಮತ್ತೊಂದು ನಿದರ್ಶನವಾಗಿದೆ ಎಂದು ಕಿಡಿಕಾರಿದರು.



ನಡ್ಡಾ

ಇಂದು ಜಿಲ್ಲಾ ಮಟ್ಟದ ಥ್ರೋಬಾಲ್ ಪಂದ್ಯಾವಳಿ

ಮೈಸೂರು,ಆ.17(ಪಿಎಂ)– ಮೈಸೂರು ಡಿಸ್ಟ್ರಿಕ್ ಅಮೆಚೂರ್ ಥ್ರೋಬಾಲ್ ಅಸೋಸಿಯೇಷನ್ (ಎಂಡಿಎಟಿಎ) ಮತ್ತು ಸೈಕಲ್ ಪ್ಯೂರ್ ಅಗರಬತ್ತಿ ಕಂಪನಿ ಜಂಟಿ ಆಶ್ರಯದಲ್ಲಿ ಪ್ರೌಢಶಾಲೆಯ ಬಾಲಕರು ಹಾಗೂ ಬಾಲಕಿಯರಿಗಾಗಿ ಆ.18ರಂದು ಜಿಲ್ಲಾ ಮಟ್ಟದ ಥ್ರೋಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಮಾನಸ ಸರೋವರ ಪುಷ್ಕರಣಿ ವಿದ್ಯಾಶ್ರಮ ಶಾಲೆ ಆವರಣದಲ್ಲಿ ನಡೆಯುವ ಪಂದ್ಯಾವಳಿಯು ಅಂದು ಬೆಳಗ್ಗೆ 9.30ಕ್ಕೆ ಉದ್ಘಾಟನೆಗೊಳ್ಳಲಿದೆ. ಅಂತಾರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಮಾಜಿ ಆಟಗಾರರಾದ ಡಾ.ಎಂ.ಆರ್.ಸವಿತಾ ಪ್ರಶಾಂತ್ ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ. ಎಂಡಿಎಟಿಎ ಅಧ್ಯಕ್ಷ ಮಶೂದಾ ಜಾವೇದ್ ಅಧ್ಯಕ್ಷತೆ ವಹಿಸಲಿದ್ದಾರೆ. ಎಂಡಿಎಟಿಎ ಉಪಾಧ್ಯಕ್ಷರಾದ ಸುಧೀರ್ ಭಟ್, ಡಾ.ಪಿ.ಕೃಷ್ಣಯ್ಯ, ಸ್ವರೂಪಿಣಿ, ಭಾವನಿ ನಾಗೇಶ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಕೊಲ್ಕತ್ತಾ ವೈದ್ಯಕೀಯ ವಿದ್ಯಾರ್ಥಿನಿ ಅತ್ಯಾಚಾರ–ಹತ್ಯೆ ಖಂಡಿಸಿ ಮೈಸೂರಲ್ಲಿ ವೈದ್ಯರ ಪ್ರತಿಭಟನೆ: ಡಿಸಿಗೆ ಮನವಿ

ಮೈಸೂರು, ಆ.17(ಎಂಕೆ)– ಕೊಲ್ಕತ್ತಾದ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿರುವ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಭಾರತೀಯ ವೈದ್ಯಕೀಯ ಸಂಘ ಮೈಸೂರು ಘಟಕ, ಮೈಸೂರು ಪ್ರಸೂತಿ ಮತ್ತು ಸ್ತ್ರೀರೋಗ ಸಮಾಜ, ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಮೈಸೂರು ಶಾಖೆ, ಆಯುಷ್ ಫೆಡರೇಷನ್ ಆಫ್ ಇಂಡಿಯಾ, ಸೆಂಟ್ ಜೋಸೆಫ್ ಶುಶ್ರೂಷಾ ಸಂಸ್ಥೆಗಳ ವತಿಯಿಂದ ಬೃಹತ್ ಜಾಥಾ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ದೊಡ್ಡಕೆರೆ ಮೈದಾನದಿಂದ ಆರಂಭಗೊಂಡ ಜಾಥಾ ಇಟ್ಟಿಗೆಗೂಡು ಮಾರ್ಗವಾಗಿ, ಮಹದೇವಪುರ ಮುಖ್ಯ ರಸ್ತೆ ಮೂಲಕ ಹೊಸ ಜಿಲ್ಲಾಧಿಕಾರಿಗಳ ಕಚೇರಿವರೆಗೆ ನಡೆಸಲಾಯಿತು. ಮಾರ್ಗದುದ್ದಕ್ಕೂ ಅತ್ಯಾಚಾರಿಗಳನ್ನು ಗಲ್ಲಿಗೇರಿಸಿ, ವೈದ್ಯಕೀಯ ಸಿಬ್ಬಂದಿಗಳಿಗೆ ಭದ್ರತೆ ನೀಡುವಂತೆ ಘೋಷಣೆಗಳನ್ನು ಕೂಗಲಾಯಿತು.



ಕೊಲ್ಕತ್ತಾ ವೈದ್ಯಕೀಯ ವಿದ್ಯಾರ್ಥಿನಿ ಅತ್ಯಾಚಾರ–ಹತ್ಯೆ ಖಂಡಿಸಿ ಭಾರತೀಯ ವೈದ್ಯಕೀಯ ಸಂಘ ಮೈಸೂರು ಘಟಕದ ವತಿಯಿಂದ ಜಾಥಾ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ವೈದ್ಯಕೀಯ ಸಿಬ್ಬಂದಿಗಳ ಮೇಲೆ ಹಲ್ಲೆ ನಡೆದಾಗ ತಪ್ಪಿತಸ್ಥರಿಗೆ ವಿಧಿಸುವ ಕಾನೂನಿನಲ್ಲಿ ಬದಲಾವಣೆ ತರಬೇಕು. ಕರ್ತವ್ಯನಿರತ ವೈದ್ಯರ ಮೇಲೆ ಹಲ್ಲೆ ಮಾಡುವವರಿಗೆ ಕಠಿಣ ಶಿಕ್ಷೆಯಾಗಬೇಕು. ಹಾಗೆಯೇ ಕೊಲ್ಕತ್ತಾದ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿ ಹತ್ಯೆಗೈದಿರುವ ಆರೋಪಿಗಳಿಗೆ ಉಗ್ರ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು. ಬಳಿಕ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಅವರಿಗೆ ಪ್ರಧಾನಮಂತ್ರಿಗಳಿಗೆ ನೀಡಿರುವ ಮನವಿ ಪತ್ರವನ್ನು ಹಸ್ತಾಂತರಿಸಲಾಯಿತು.

ಬೃಹತ್ ಜಾಥಾದಲ್ಲಿ ಮೈಸೂರಿನ ಕಾಮಾಕ್ಷಿ ಆಸ್ಪತ್ರೆ, ಸಿಗ್ಮಾ, ಶಾಂತವೇರಿ ಗೋಪಾಲಗೌಡ ಆಸ್ಪತ್ರೆ, ನಾರಾಯಣ ಹೃದಯಾಲಯ, ಕಾವೇರಿ ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳ ವೈದ್ಯಕೀಯ ಸಿಬ್ಬಂದಿ ಭಾಗವಹಿಸಿದ್ದರು.

ಯಡಿಯೂರಪ್ಪ ವಿರುದ್ಧವೂ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ್ದರು!

13 ವರ್ಷಗಳ ಒಂದು ರಾಜಕೀಯ ಬೆಳವಣಿಗೆ ಹಿನ್ನೋಟ

ಬೆಂಗಳೂರು: ಪತ್ನಿಗೆ ಮೈಸೂರಿನ ಮುಡಾದಿಂದ ಅಕ್ರಮ ನಿವೇಶನ ಹಂಚಿಕೆ ನಡೆದಿದೆ ಎಂಬ ಆರೋಪದಲ್ಲಿ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅನುಮತಿ ನೀಡಿರುವುದು ಭಾರಿ ಚರ್ಚೆಗೆ ಗ್ರಾಸವಾಗಿದೆ. ಇದು ದ್ವೇಷ ರಾಜ ಕಾರಣ. ಕೇಂದ್ರ ಸರ್ಕಾರದ ನಿರ್ದೇಶನ ದಂತೆ ರಾಜ್ಯಪಾಲರು ಕೆಲಸ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ. ಆದರೆ 13 ವರ್ಷಗಳ ಹಿಂದೆ ಕೂಡ ಇಂತಹದ್ದೇ ಪ್ರಸಂಗ ನಡೆದಿತ್ತು.

2011ರಲ್ಲಿ ಸಿಎಂ ಆಗಿದ್ದ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಾಗಿತ್ತು. ಆಗ ರಾಜ್ಯಪಾಲರಾಗಿದ್ದವರು ಎಚ್.ಆರ್.ಭಾರದ್ವಾಜ್. ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರದಲ್ಲಿತ್ತು ಎನ್ನುವುದು ಗಮನಾರ್ಹ.

ರಾಜ್ಯದಲ್ಲಿ ಕಬ್ಬಿಣದ ಅದಿರು ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾದ ಆರೋಪಕ್ಕೆ ಸಿಲುಕಿದ್ದ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರು ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವಂತಾಗಿತ್ತು. 1988ರ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಕಾನೂನು ಕ್ರಮ ಜರುಗಿಸಲು ಕರ್ನಾಟಕ ಲೋಕಾಯುಕ್ತರಿಗೆ ಆಗಿನ ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಅನುಮತಿ ನೀಡಿದ್ದರು.

ಕರ್ನಾಟಕ ರಾಜ್ಯಪಾಲರು ಮತ್ತು ಕರ್ನಾಟಕ ಲೋಕಾಯುಕ್ತ ಕಾಯಿದೆಯಡಿ ಸಕ್ಷಮ ಪ್ರಾಧಿಕಾರ, ಲೋಕಾಯುಕ್ತರ ವರದಿಯನ್ನು ಸಂಬಂಧಿತ ಅನುಬಂಧಗಳೊಂದಿಗೆ ಪರಿಶೀಲಿಸಿದ ನಂತರ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1994 ಮತ್ತು ಭ್ರಷ್ಟಾಚಾರ ತಡೆ ಕಾಯ್ದೆ, 1988ರ ನಿಬಂಧನೆಗಳನ್ನು ಉಲ್ಲೇಖಿಸಿ, ಕರ್ನಾಟಕದ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಪ್ರಾರಂಭಿಸಲು ವರದಿಯ ಅಧ್ಯಾಯ 22ರಲ್ಲಿ ಲೋಕಾಯುಕ್ತರ ಅಂಶಗಳು ಮತ್ತು ಶಿಫಾರಸನ್ನು ಅಂಗೀಕರಿಸಲಾಗಿದೆ ಎಂದು ರಾಜ್ಯಪಾಲರ ಕಚೇರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿತ್ತು. ಲೋಕಾಯುಕ್ತ ಪೊಲೀಸರು ತನಿಖೆ ನಡೆಸಬೇಕಿರುವ ಕಾರಣ, ಈ ಹಂತದಲ್ಲಿ ಯಡಿಯೂರಪ್ಪ ಅವರನ್ನು ವಿಚಾರಣೆಗೆ ಒಳಪಡಿಸಲು ವಿಶೇಷ ಅನುಮತಿಯ ಅಗತ್ಯವಿಲ್ಲ ಲೋಕಾಯುಕ್ತರು ತನಿಖಾ ವರದಿಯ ಪ್ರತಿಯನ್ನು ನನಗೆ ಸಲ್ಲಿಸಿದ್ದಾರೆ ಮತ್ತು ನಾನು ಅದನ್ನು ಸಕ್ಷಮ ಅಧಿಕಾರಿಯಾಗಿ ಸ್ವೀಕರಿಸಿದ್ದೇನೆ ಎಂದು ಭಾರದ್ವಾಜ್ ಹೇಳಿದ್ದರು.

2015ರ ನವೆಂಬರ್‌ನಲ್ಲಿ ಈ ಪ್ರಾಸಿಕ್ಯೂಷನ್ ಅನುಮತಿಯ ಆದೇಶವನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿತ್ತು. ಪ್ರಾಸಿಕ್ಯೂಷನ್ ವಿರುದ್ಧ ಆಗಿನ ಕ್ಯಾಬಿನೆಟ್ ನೀಡಿದ್ದ ಶಿಫಾರಸುಗಳನ್ನು ರಾಜ್ಯಪಾಲರು ಪರಿಗಣಿಸಿರಲಿಲ್ಲ ಎಂದು ಹೈಕೋರ್ಟ್ ವಿಭಾಗೀಯ ಪೀಠ ಹೇಳಿತ್ತು.



ಬಿ.ಎಸ್.ಯಡಿಯೂರಪ್ಪ

2011ರಲ್ಲಿಯೇ ಮುಖ್ಯಮಂತ್ರಿಗೆ ಪತ್ರ ಬರೆದಿದ್ದ ರಾಜ್ಯಪಾಲರು, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದಂತೆ ಮನವಿ ಸಲ್ಲಿಸುವ ಸಂಪುಟ ನಿರ್ಣಯ ಅನಧಿಕೃತ ಎಂದು ಹೇಳಿದ್ದರು. ರಾಜ್ಯದಲ್ಲಿ ರಾಜ್ಯಪಾಲರು ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ಮೊದಲ ಪ್ರಕರಣ ಇದಾಗಿತ್ತು. ಈಗ ಸಿದ್ದರಾಮಯ್ಯ ಅವರದು ಎರಡನೇ ಪ್ರಕರಣವಾಗಿದೆ. ರಾಜ್ಯಪಾಲರು ಕಾಂಗ್ರೆಸ್ ಮತ್ತು ಜೆಡಿಎಸ್ ಏಜೆಂಟ್ ರೀತಿ ವರ್ತಿಸುತ್ತಿದ್ದಾರೆ. ಇದು ಹಾಡ ಹಗಲೇ ನಡೆದ ಪ್ರಜಾಪ್ರಭುತ್ವ ಮತ್ತು ನ್ಯಾಯದ ಕೊಲೆ ಎಂದು ಯಡಿಯೂರಪ್ಪ ಆರೋಪಿಸಿದ್ದರು.

ಕಾಂಗ್ರೆಸ್ ಸಂಭ್ರಮ: ಯಡಿಯೂರಪ್ಪ ಬಂಧನದ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಸಂಭ್ರಮಾಚರಣೆ ನಡೆಸಿತ್ತು. ಕರ್ನಾಟಕವು ದೇಶದ ಇತರೆ ಭಾಗಗಳಿಗೆ ಮಾದರಿ ಹಾಗೂ ಪ್ರಗತಿಪರ ರಾಜ್ಯವಾಗಿತ್ತು. ಆದರೆ ಬಿಜೆಪಿ ಸರ್ಕಾರವು ರಾಜ್ಯದ ವರ್ಚಸ್ಸನ್ನು ಕೆಡಿಸಿದೆ. ತಾವೇ ಹೆಣೆದ ಬಲೆಗೆ ಯಡಿಯೂರಪ್ಪ ತಾವೇ ಸಿಲುಕಿದ್ದಾರೆ. ತನ್ನ ಉಳಿದ ಅವಧಿಯಲ್ಲಾದರೂ ಬಿಜೆಪಿ ಆಡಳಿತದ ಬಗ್ಗೆ ಗಮನ ಹರಿಸಲಿ ಎಂದು ಆಗ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಹೇಳಿದ್ದರು. ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವುದಕ್ಕೂ ಮುನ್ನ ಒಂದು ತಿಂಗಳು ಅವರು ದಾಖಲೆಗಳನ್ನು ಅಧ್ಯಯನ ಮಾಡಿದ್ದರು ಎಂದು ರಾಜ್ಯಪಾಲರನ್ನು ಸಿದ್ದರಾಮಯ್ಯ ಬೆಂಬಲಿಸಿದ್ದರು.

ಯಡಿಯೂರಪ್ಪ ವಿರುದ್ಧದ ರಾಜ್ಯಪಾಲರ ನಡೆಯನ್ನು ಆಗ ಕಾಂಗ್ರೆಸ್ ಸಮರ್ಥಿಸಿಕೊಂಡಿತ್ತು. ರಾಜ್ಯಪಾಲರು ಸಾಂವಿಧಾನಿಕ ಅಧಿಕಾರಿ. ಸಂವಿಧಾನದ ಅಡಿಯಲ್ಲಿ ಅವರು ಅಂತಹ ವಿಷಯಗಳನ್ನು ನಿರ್ಧರಿಸುವ ವಿವೇಚನಾಧಿಕಾರ ಹೊಂದಿದ್ದಾರೆ. ಅವರು ಕಳೆದ ತಿಂಗಳಿನಿಂದ ಆ ವಿವೇಚನಾಧಿಕಾರವನ್ನು ಬಳಸುತ್ತಿದ್ದಾರೆ. ಇದರಿಂದ ಸಮಸ್ಯೆಯಾಗಿದ್ದಲ್ಲಿ ಯಾರಾದರೂ ಕಾನೂನು ಪರಿಹಾರ ಕಂಡುಕೊಳ್ಳಬಹುದು ಎಂದು ಕಾಂಗ್ರೆಸ್ ಮುಖಂಡ ಅಭಿಷೇಕ್ ಮನು ಸಿಂಘ್ವಿ ಹೇಳಿದ್ದರು. ಕಾನೂನಿನ ನಿಯಮದಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಯಾವುದೇ ಸಚಿವರಿಗೆ ವಿನಾಯಿತಿ ಇಲ್ಲ ಮತ್ತು ಮುಖ್ಯಮಂತ್ರಿಗೆ ಕೂಡ ರಕ್ಷಣೆ ಸಿಗುವುದಿಲ್ಲ. ಭ್ರಷ್ಟಾಚಾರದ ಪ್ರಶ್ನೆ ಉದ್ಭವಿಸಿದಾಗ, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದೆ ರಾಜ್ಯಪಾಲರಿಗೆ ಬೇರೆ ಆಯ್ಕೆ ಇಲ್ಲ ಎಂದು ವೀರಪ್ಪ ಮೊಯ್ಲಿ ಹೇಳಿದ್ದರು. ಬಿಎಸ್ ಯಡಿಯೂರಪ್ಪ ಹಾಗೂ ರೆಡ್ಡಿ ಸಹೋದರರ ವಿರುದ್ಧ ಕ್ರಮ ಕೈಗೊಳ್ಳದಂತೆ ಕಾಂಗ್ರೆಸ್‌ನ ಕೆಲವು ನಾಯಕರು ತಮಗೆ ಸಲಹೆ ನೀಡಿದ್ದರು ಎಂದು 2015ರಲ್ಲಿ ಎಚ್.ಆರ್. ಭಾರದ್ವಾಜ್ ಹೇಳಿದ್ದರು. ರಾಜ್ಯದಲ್ಲಿನ ಬಿಜೆಪಿ ಉನ್ನತ ನಾಯಕರ ಜತೆ ಕಾಂಗ್ರೆಸ್ ಮುಖಂಡರಿಗೆ ಗೆಳೆತನವಿದೆ ಎಂದಿದ್ದರು.

2013ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದು ಅಧಿಕಾರಕ್ಕೆ ಮರಳಿತ್ತು. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವಿದೆ. ಇದು ಕಾಂಗ್ರೆಸ್ ನಾಯಕತ್ವದಿಂದ ಬಂದಿರುವುದಲ್ಲ. ನಾನು ರಾಜ್ಯಪಾಲನಾಗಿ ತೆಗೆದುಕೊಂಡಿದ್ದ ನಿರ್ಧಾರಗಳ ಕಾರಣದಿಂದ ಬಂದಿದ್ದು ಎಂದು ಎಚ್.ಆರ್.ಭಾರದ್ವಾಜ್ ಹೇಳಿಕೊಂಡಿದ್ದರು.

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಧ್ವಜಾರೋಹಣ



ಮೈಸೂರಿನ ಊಟಿ ರಸ್ತೆಯಲ್ಲಿರುವ ಅವಧೂತ ದತ್ತಪೀಠ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಆಶ್ರಮದ ಉತ್ತರಾಧಿಕಾರಿ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಧ್ವಜಾರೋಹಣ ನೆರವೇರಿಸಿದರು. ನಂತರ ಪಾಠಶಾಲೆಯ ಎಲ್ಲಾ ಮಕ್ಕಳಿಗೂ ಸಿಹಿ ವಿತರಿಸಿ ದೇಶ ಪ್ರೇಮದ ಅರಿವು ಮೂಡಿಸಿದರು. ಇದೇ ಸಂದರ್ಭದಲ್ಲಿ ನೂರಾರು ಭಕ್ತಾದಿಗಳು ಉಪಸ್ಥಿತರಿದ್ದರು.



ಮುಡಾ ಕಚೇರಿಯಲ್ಲಿ 78ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಈ ವೇಳೆ ಅಧ್ಯಕ್ಷ ಕೆ.ಮರಿಗೌಡ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಮುಡಾ ಆಯುಕ್ತ ರಘುನಂದನ್, ಅಧಿಕಾರಿಗಳು. ಸಿಬ್ಬಂದಿ ಹಾಜರಿದ್ದರು.



ಮೈಸೂರಿನ ಲಿಟಲ್ ಏಂಜಲ್ಸ್ ಮಾಂಟಿಸ್ಸೋರಿಯಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಈ ವೇಳೆ ಲಿಟಲ್ ಏಂಜಲ್ಸ್ ಮಾಂಟಿಸ್ಸೋರಿಯ ಪ್ರಾಂಶುಪಾಲೆ ಡಾ.ಸುಲ್ತಾನಾ ಜಬೀನ್, ಕೇಂದ್ರ ನಿರ್ವಾಹಕ ಅಸ್ಮಾ ತಹೂರಾ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ನಗರ-ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ 78ನೇ ಸ್ವಾತಂತ್ರ್ಯೋತ್ಸವ ಅಂಗವಾಗಿ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಸಿಹಿ ವಿತರಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣಗೌಡ, ಉಪಾಧ್ಯಕ್ಷ ಬಿಎಸ್‌ಪಿ ಬಾಬು, ಕಾನೂನು ಸಲಹೆಗಾರ ಶಶಿಕಿರಣ್, ಮೋಹನ್‌ಕುಮಾರ್‌ಗೌಡ, ರಂಗಪ್ಪ ಗೌಡ ಇನ್ನಿತರರು ಉಪಸ್ಥಿತರಿದ್ದರು.

ಕರ್ನಾಟಕ ಬುದ್ಧ ಧಮ್ಮ ಸಮಿತಿಯಿಂದ 78ನೇ ಸ್ವಾತಂತ್ರ್ಯ ದಿನಾಚರಣೆ



ಮೈಸೂರಿನ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧ ವಿಹಾರದಲ್ಲಿ ಕರ್ನಾಟಕ ಬುದ್ಧ ಧಮ್ಮ ಸಮಿತಿ ವತಿಯಿಂದ 78ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು.


ಮೈಸೂರು, ಆ.17(ಎಂಕೆ)- ಮೈಸೂರಿನ ವಿಜಯನಗರ ಒಂದನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧ ವಿಹಾರದಲ್ಲಿ ಕರ್ನಾಟಕ ಬುದ್ಧ ಧಮ್ಮ ಸಮಿತಿ ವತಿಯಿಂದ 78ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು.

ಧ್ವಜಾರೋಹಣ ನೇರವೇರಿಸಿ ಮಾತನಾಡಿದ ಕರ್ನಾಟಕ ಬುದ್ಧ ಧಮ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ, ದಾಸ್ಯ ಹಾಗೂ ದಮನಕಾರಿ ನೀತಿಯ ವಿರುದ್ಧ ಹೋರಾಟ ಮತ್ತು ಪ್ರತಿಭಟನೆ ಅಗತ್ಯ. 1947ರಲ್ಲಿ ಬ್ರಿಟಿಷರಿಂದ ಪಡೆದ ದೇಶದ ಸ್ವಾತಂತ್ರ್ಯ ಅದು ಬಾಹ್ಯ ಸ್ವಾತಂತ್ರ್ಯವಾಗಿದ್ದು, 77 ವರ್ಷಗಳು ಕಳೆದರೂ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಇನ್ನೂ ಬಡ ಜನರನ್ನು ತಲುಪಿಲ್ಲ ಎಂದು ಹೇಳಿದರು.

ಸಮಿತಿಯ ಸಹ ಕಾರ್ಯದರ್ಶಿ ಹೆಚ್.ಶಿವರಾಜ್, ರಾಜು ಹಂಪಾಪುರ, ಸಾವಕಯ್ಯ, ನಟರಾಜ್, ಮಹದೇವ, ಸಿದ್ದರಾಜು, ಮಹದೇವಯ್ಯ, ಡಾ.ಮಂಜು, ರೂಪೇಶ್ ಮತ್ತಿತರರು ಉಪಸ್ಥಿತರಿದ್ದರು.

ಹಳ್ಳಿ ಹಕ್ಕಿ ಹೆಚ್.ವಿಶ್ವನಾಥರ ಪ್ರಾಚೀನ ಪಾರ್ಲಿಮೆಂಟ್‌ಗಳ ಪ್ರದಕ್ಷಿಣೆಗಳು ಪುಸ್ತಕ ಬಿಡುಗಡೆ

ಸಂಸತ್ತಿನಲ್ಲಿ ರಾಜವಂಶಸ್ಥರೂ ಸೇರಿದಂತೆ ಪ್ರತಿಯೊಬ್ಬರು ಸಮಾನರು: ಲೋಕಸಭಾ ಸದಸ್ಯ ಯದುವೀರ್ ಅಭಿಪ್ರಾಯ



ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶನಿವಾರ ಹಳ್ಳಿ ಹಕ್ಕಿ ಅಡಗೂರು ಹೆಚ್.ವಿಶ್ವನಾಥ್ ಅವರ 'ಪ್ರಾಚೀನ ಪಾರ್ಲಿಮೆಂಟ್‌ಗಳ ಪ್ರದಕ್ಷಿಣೆಗಳು' ಪುಸ್ತಕವನ್ನು ಲೋಕಸಭಾ ಸದಸ್ಯ ಯದುವೀರ್ ಬಿಡುಗಡೆ ಮಾಡಿದರು.

ಮೈಸೂರು, ಆ.17(ಬಿಎಲ್‌ಯು)- ದೇಶದ ಪ್ರಜಾಪ್ರಭುತ್ವದ ಶಕ್ತಿ ಕೇಂದ್ರ ಸಂಸತ್ತಿನಲ್ಲಿ ರಾಜವಂಶಸ್ಥರು ಸೇರಿದಂತೆ ಪ್ರತಿಯೊಬ್ಬರಿಗೂ ಸಮಾನತೆ ಇರುತ್ತದೆ ಎಂದು ಮೈಸೂರು-ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶನಿವಾರ ಹಳ್ಳಿ ಹಕ್ಕಿ ಅಡಗೂರು ಹೆಚ್.ವಿಶ್ವನಾಥ್ ಅವರ 'ಪ್ರಾಚೀನ ಪಾರ್ಲಿಮೆಂಟ್‌ಗಳ ಪ್ರದಕ್ಷಿಣೆಗಳು' ಪುಸ್ತಕ ಬಿಡುಗಡೆ ಮಾತನಾಡಿದ ಅವರು, ಸಂಸತ್ತು ಅತ್ಯದ್ಭುತ ವ್ಯವಸ್ಥೆಯಾಗಿದ್ದು, ಅಲ್ಲಿಗೆ ಆಯ್ಕೆ ಆಗಿ ಹೋದ ವ್ಯಕ್ತಿ ಬಹಳಷ್ಟು ವಿಚಾರಗಳನ್ನು ಅರಿತಿರಬೇಕು ಎಂದು ಹೇಳಿದರು.

ಮೊದಲ ಬಾರಿಗೆ ಲೋಕಸಭೆಗೆ ಆಯ್ಕೆಯಾದ ನಮಗೆ ಪುನಶ್ಚೇತನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆದರೂ ಕೆಲವು ವಿಚಾರಗಳನ್ನು ಅರಿಯಲು ಯಾರೂ ತರಬೇತಿ ನೀಡುವುದಿಲ್ಲ, ಅದನ್ನು ನಾವು ಆಸಕ್ತಿಯಿಂದ ಕಲಿತುಕೊಳ್ಳಬೇಕು ಎಂದರು.

ಸಂಸತ್ತಿನ ಇತಿಹಾಸ ಅರಿತುಕೊಳ್ಳಲು ಬಯಸಿದ್ದೆ, ಇಂತಹ ಸಂದರ್ಭದಲ್ಲಿ ವಿಶ್ವನಾಥ್ ಬರೆದಿರುವ ಈ ಪುಸ್ತಕ ನನಗೆ ಪ್ರಸ್ತುತವಾಗಿದೆ. ಕಿರಿಯರಿಗೆ ಹಿರಿಯರ ಮಾರ್ಗದರ್ಶನ, ಸಲಹೆ ಅತ್ಯವಶ್ಯ ಎಂದು ಯದುವೀರ್ ಅಭಿಪ್ರಾಯಪಟ್ಟರು.

ಕ್ರಾಂತಿಕಾರಿ ಬಸವಣ್ಣನವರ ಅನುಭವ ಮಂಟಪದ ಪರಿಕಲ್ಪನೆಯನ್ನು ಮೈಸೂರು ಮಹಾರಾಜರು ಅನುಸರಿಸಿದರು. ಈ ಹಿನ್ನೆಲೆ ಮೊದಲ ಬಾರಿಗೆ ಪ್ರಜಾ ಪ್ರತಿನಿಧಿ ಸಭೆ ನಡೆಸಿದರು. ಭಾರತ ಸ್ವಾತಂತ್ರ್ಯಗೊಂಡ ನಂತರ ರಾಜ ಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ಅಸ್ಥಿತ್ವಕ್ಕೆ ಬರುವ ಸಂದರ್ಭದಲ್ಲಿ ಮೈಸೂರು ಮಹಾರಾಜರು ಸಮ್ಮತಿಸಿದರು. ಜೊತೆಗೆ ಒತ್ತಾಸೆಯಾಗಿ ನಿಂತರು ಎಂದು ತಿಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಹಿರಿಯ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ವಿಶ್ರಾಂತ ಪ್ರಾಧ್ಯಾಪಕ ರಾಜಪ್ಪ ದಳವಾಯಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ರಾಜಕಾರಣಿ ಪುಸ್ತಕ ಬರೆದರೆ ಸಾಹಿತಿಗಳು ಸಹಿಸುವುದಿಲ್ಲ

ರಾಜಕಾರಣಿಗಳು ಪುಸ್ತಕ ಬರೆದರೆ ಸಾಹಿತಿಗಳು ಸಹಿಸುವುದಿಲ್ಲ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕಾರಣಿ ಬಹಳ ಪ್ರಮುಖ ಪಾತ್ರ ವಹಿಸುತ್ತಾನೆ. ಗ್ರಾಮ ಪಂಚಾಯಿತಿಯಿಂದ ಹಿಡಿದು ಸಂಸತ್ತಿನ ತನಕ ಜನರ ಸಮಸ್ಯೆ ಪರಿಹಾರ ಮಾಡುವ ನಿಟ್ಟಿನಲ್ಲಿ ಜನಪ್ರತಿನಿಧಿ ಕೆಲಸ ನಿರ್ವಹಿಸುತ್ತಾನೆ. ಈ ಹಿನ್ನೆಲೆಯಲ್ಲಿ ತಮ್ಮ ಅನುಭವದ ಆಧಾರದ ಮೇಲೆ ರಾಜಕಾರಣಿ ಪುಸ್ತಕ ಬರೆದರೆ ಸಾಹಿತಿಗಳು ಸಹಿಸುವುದಿಲ್ಲ ಎಂದರು. ಸಾಹಿತಿಗಳ ಈ ವರ್ತನೆ ಬದಿಗಿಟ್ಟು ರಾಜಕಾರಣಿಗಳು ಪುಸ್ತಕ ಬರೆಯುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ರಾಜಕಾರಣಿ ಮಾತ್ರವಲ್ಲದೆ ಪ್ರತಿಯೊಬ್ಬರು ತಾವು ಕಾರ್ಯ ನಿರ್ವಹಿಸುವ ಕ್ಷೇತ್ರದ ಅನುಭವದ ಆಧಾರದ ಮೇಲೆ ಪುಸ್ತಕ ಬರೆಯಬೇಕು. ಭಾರತದ 145 ಕೋಟಿ ಜನರು 145 ಕೋಟಿ ಪುಸ್ತಕ ಬರೆಯಬೇಕು ಎಂದು ವಿಶ್ವನಾಥ್ ಸಲಹೆ ನೀಡಿದರು.

ಇತ್ತೀಚಿಗೆ ಶಾಸನ ಸಭೆ ಹಾಗೂ ಸಂಸತ್ತು ಜನರ ಆಶೋತ್ತರಕ್ಕೆ ತಕ್ಕಂತೆ ಕೆಲಸ ನಿರ್ವಹಿಸುತ್ತಿಲ್ಲ. ಜನಪರವಾದ ವಿಚಾರಗಳ ಬಗ್ಗೆ ಚರ್ಚೆಗಳು ನಡೆಯುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಸಂಸತ್ತು ಕಲ್ಲು ಮಣ್ಣಿನಿಂದ ಕಟ್ಟಿರುವ ಕಟ್ಟಡವಲ್ಲ, ಅದು ಜನರ ಬದುಕನ್ನು ಕಟ್ಟಿಕೊಡುವ ಅದ್ಭುತ ಶಕ್ತಿ ಕೇಂದ್ರ. ಸಂಸತ್ತು ನಮ್ಮ ದೇಗುಲ, ಸಂವಿಧಾನ ನಮ್ಮ ದೇವರು, ಸಂಸತ್ ಸದಸ್ಯ ಅದರ ಆರಾಧಕ ಎಂದರು. ನಾನು ಈ ತನಕ 9 ಪುಸ್ತಕಗಳನ್ನು ಬರೆದಿದ್ದೇನೆ. ನನ್ನ ತಂದೆ-ತಾಯಿ ಅಕ್ಷರ ಕಲಿತವರಲ್ಲ, ಆದರೆ ನಮಗೆ ವಿವೇಕ ಕಲಿಸಿದರು. ನಾನು ಜ್ಞಾನಾರ್ಜನೆ ಮಾಡಲು ಬುನಾದಿ ಹಾಕಿಕೊಟ್ಟರು. ಈಗ ನಾನು ಬರೆದಿರುವ ಪುಸ್ತಕದ ಬಗ್ಗೆ ಓದುಗರು ವಿಮರ್ಶೆ ಮಾಡಬೇಕು ಎಂದು ವಿಶ್ವನಾಥ್ ಮನವಿ ಮಾಡಿದರು.

ಆ.24ರಂದು ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಕಲ್ಯಾಣ ಮಹೋತ್ಸವ



ಮೈಸೂರು,ಆ.17-ಮೈಸೂರಿನ ಉದಯಗಿರಿಯ ಶ್ರೀ ವಿಘ್ನೇಶ್ವರ ಪ್ರಸನ್ನ ಭಕ್ತ ಮಂಡಲಿ ಮಾರ್ಪಾಡಿತ ಟ್ರಸ್ಟ್ ವತಿಯಿಂದ ಆ.24ರಂದು ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ ಕಲ್ಯಾಣ ಮಹೋತ್ಸವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಆ.23ರಂದು ಬೆಳಗ್ಗೆ 5.30ಕ್ಕೆ ಶ್ರೀ ಲಕ್ಷ್ಮೀವೆಂಕಟೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ ಅಲಂಕಾರ, ಆ.24ರಂದು ಬೆಳಗ್ಗೆ 8.30ರಿಂದ ಪುಣ್ಯಾಹ ಋತ್ವಿಕ ಕಲಸ ಸ್ಥಾಪನೆ, ಮಹಾಸಂಕಲ್ಪ ಪ್ರಾಕಾರೋತ್ಸವ, ಬೆಳಗ್ಗೆ 10.55ರಿಂದ ಶ್ರೀ ಶ್ರೀನಿವಾಸ ಸ್ವಾಮಿಗೆ ತಿರುಕಲ್ಯಾಣ ಧಾರಾ ಮಹೋತ್ಸವ, ರಾಜಾಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 5.30ಕ್ಕೆ ಶ್ರೀದೇವಿ ಭೂದೇವಿಯವರಿಂದ ಕೂಡಿದ ಶ್ರೀ ಶ್ರೀ ಲಕ್ಷ್ಮಿವೆಂಕಟರಮಣ ಸ್ವಾಮಿಗೆ ಓಲಗ ಸಮೇತ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು. ರಾತ್ರಿ 8.30ಕ್ಕೆ ಶಯನೋತ್ಸವ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

6 ಮಂದಿ ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಮೈಸೂರು, ಆ.17(ಎಸ್‌ಪಿಎನ್)- ಕರ್ನಾಟಕ ಲೋಕಾಯುಕ್ತ ಪ್ರಧಾನ ಕಚೇರಿ ಹಾಗೂ ವಿವಿಧ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 6 ಮಂದಿ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿದೆ ಎಂದು ಕರ್ನಾಟಕ ಲೋಕಾಯುಕ್ತ ನಿಬಂಧಕರು ಸುತ್ತೋಲೆ ಹೊರಡಿಸಿದ್ದಾರೆ. ಮೈಸೂರು ಲೋಕಾಯುಕ್ತ ಕಚೇರಿಗೆ ಟಿ.ಜೆ.ಉದೇಶ್ ಅವರನ್ನು ಪೊಲೀಸ್ ಅಧೀಕ್ಷಕರಾಗಿ ವರ್ಗಾವಣೆಗೊಳಿಸಿದ್ದು, ಇವರಿಗೆ ಮಂಡ್ಯ ಜಿಲ್ಲಾ ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ಅಧಿಕಾರ ವಹಿಸಿಕೊಡಬೇಕು. ಹಾಸನ ಎಸ್ಪಿ ಸಿ ಮಲ್ಲಿಕ್ ಅವರು, ಡಾ.ಬಿ.ಎನ್.ನಂದಿನಿ ಅವರಿಗೆ ವಹಿಸಿಕೊಡಬೇಕು ಎಂದು ಕರ್ನಾಟಕ ಲೋಕಾಯುಕ್ತ ನಿಬಂಧಕರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಸ್ವಾತಂತ್ರ್ಯ ಭಾರತ ವಿಶ್ವದಲ್ಲಿಯೇ ಬಲಿಷ್ಠ ರಾಷ್ಟ್ರವಾಗಿದೆ




ಮೈಸೂರು ತಾಲೂಕಿನ ಚಿಕ್ಕನಹಳ್ಳಿಯ ಸಿಎನ್‌ಎಂ ಪಬ್ಲಿಕ್ ಶಾಲೆಯಲ್ಲಿ 78ನೇ ಸ್ವಾತಂತ್ರ್ಯ ದಿನೋತ್ಸವ ಆಚರಿಸಲಾಯಿತು.

ಮೈಸೂರು, ಆ.17-ಸ್ವಾತಂತ್ರ್ಯ ಭಾರತ ವಿಶ್ವದಲ್ಲಿಯೇ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ ಎಂದು ಸಿಎನ್‌ಎಂ ಪಬ್ಲಿಕ್ ಶಾಲೆಯ ಕಾರ್ಯದರ್ಶಿ ಭರತ್ ಮಂಜೇಗೌಡ ತಿಳಿಸಿದರು.

ಮೈಸೂರು ತಾಲೂಕು ಜಯಪುರದ ಬಳಿ ಇರುವ ಚಿಕ್ಕನಹಳ್ಳಿಯ ಸಿಎನ್‌ಎಂ ಪಬ್ಲಿಕ್ ಶಾಲೆಯಲ್ಲಿ 78ನೇ ಸ್ವಾತಂತ್ರ್ಯ ದಿನೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, 200 ವರ್ಷ ನಮ್ಮನ್ನು ಆಳಿದ ಬ್ರಿಟಿಷರು ಭಾರತವನ್ನು ಕೊಳ್ಳೆ ಹೊಡೆದು ದೋಚಿಕೊಂಡು ಹೋಗಿದ್ದರು. ಬ್ರಿಟಿಷರನ್ನು ದೇಶದಿಂದ ಓಡಿಸಲು ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರಬೋಸ್, ಜವಹರ್‌ಲಾಲ್ ನೆಹರು ಅವರಂತಹ ಮಹಾನ್ ನಾಯಕರ ನೇತೃತ್ವದಲ್ಲಿ ಹೋರಾಟ ಚಳುವಳಿ ಸತ್ಯಾಗ್ರಹ ಮಾಡಿದ್ದಾರೆ. ಲಕ್ಷಾಂತರ ಜನರು ದೇಶಕ್ಕೆ ಬಲಿದಾನವಾಗಿದ್ದಾರೆ. ದೇಶಕ್ಕಾಗಿ ತ್ಯಾಗ ಬಲಿದಾನವಾದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ಅತ್ಯುತ್ತಮವಾದ ಸಂವಿಧಾನವನ್ನು ನೀಡಿದ್ದಾರೆ. ಮಹನೀಯರನ್ನು ನಾವು ಇಂದು ಸ್ಮರಿಸಿಕೊಳ್ಳಬೇಕು ಎಂದ ಅವರು, ಇಂದು ಭಾರತ ಎಲ್ಲಾ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಹೊಂದುತ್ತಿದ್ದು, ಸ್ವಾವಲಂಬಿ ರಾಷ್ಟ್ರವಾಗುತ್ತಿದೆ. ಅದರಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಭಾರತ ಉತ್ತಮ ಸಾಧನೆ ತೋರುತ್ತಿದ್ದು, ಭಾರತೀಯರು ಪ್ರಪಂಚದಾದ್ಯಂತ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಶಿಕ್ಷಣದಿಂದ ಮಾತ್ರ ದೇಶದಲ್ಲಿ ಬದಲಾವಣೆ ತರಲು ಸಾಧ್ಯವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯು ಚೆನ್ನಾಗಿ ಓದುವುದರ ಜೊತೆಗೆ ಸಮಯ ಬಂದಾಗ ದೇಶಕ್ಕಾಗಿ ಹೋರಾಡಲು ಮುಂದಾಗಬೇಕೆಂದು ಕರೆ ನೀಡಿದರು. ಈ ವೇಳೆ ಸಂಸ್ಥೆಯ ಖಜಾಂಚಿ ಭಾರ್ಗವಿ ಗೌಡ ಪ್ರಾಂಶುಪಾಲರಾದ ಸತ್ಯಶೀಲಾ, ನಿರ್ದೇಶಕರಾದ ನಂದರಾಜು, ಮಹಾದೇವಸ್ವಾಮಿ ಉಪಸ್ಥಿತರಿದ್ದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಮಕ್ಕಳು ರಾಷ್ಟ್ರನಾಯಕರ ವಿವಿಧ ವೇಷಭೂಷಣ ಧರಿಸಿದ್ದರು.

ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶ್‌ಚಂದ್ರ ಗುರು ನಿಧನ



ಪ್ರೊ.ಬಿ.ಪಿ.ಮಹೇಶ್‌ಚಂದ್ರ ಗುರು

ಮೈಸೂರು, ಆ.17- ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ, ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರೂ ಆದ ಪ್ರಗತಿಪರ ಚಿಂತಕ ಪ್ರೊ.ಬಿ.ಪಿ.ಮಹೇಶ್ ಚಂದ್ರಗುರು(67) ಶನಿವಾರ ರಾತ್ರಿ ನಿಧನರಾದರು.

ಮೃತರು ಪತ್ನಿ ಪ್ರೊ.ಸಿ.ಹೇಮಾವತಿ ಸೇರಿದಂತೆ ಅಪಾರ ಬಂಧು-ಬಳಗ ಹಾಗೂ ಶಿಷ್ಯ ವೃಂದವನ್ನು ಅಗಲಿದ್ದಾರೆ. ನಾಳೆ(ಆ.18) ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಅವರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು, ತದ ನಂತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂಲತಃ ಚಾಮರಾಜನಗರ ಜಿಲ್ಲೆಯವರಾದ ಪ್ರೊ.ಮಹೇಶ್‌ಚಂದ್ರ ಗುರು, ಗುಂಡ್ಲುಪೇಟೆಯ ದಿವಂಗತ ಪಿ.ಎಸ್.ಬಸವರಾಜು ಮತ್ತು ದಿವಂಗತ ಜಿ.ಬಿ.ಬನಶಂಕರಮ್ಮ ಅವರ ಪುತ್ರರಾಗಿ 1957ರ ಜ.31 ರಂದು ಜನಿಸಿದರು. 1980ರಲ್ಲಿ ಮೈಸೂರು ವಿವಿ ಸಮೂಹ ಸಂಪರ್ಕ ಮತ್ತು ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹಾಗೂ 1999ರಲ್ಲಿ ಮಂಗಳೂರು ವಿವಿಯಿಂದ ಅಭಿವೃದ್ಧಿ ಸಂವಹನ ವಿಷಯದಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದರು.

1980ರಿಂದಲೂ ಮೈಸೂರಿನ ಹೆಸರಾಂತ ಬಂಡಾಯ ಪತ್ರಿಕೆ 'ಪಂಚಮ'ದಲ್ಲಿ ವರದಿಗಾರ, ಉಪಸಂಪಾದಕರಾಗಿರುವ ಅವರು, ಹೈದರಾಬಾದಿನ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ ಸಂಶೋಧನಾಧಿಕಾರಿ, ಚಂಡಿಘಡದ ಭಾರತೀಯ ಮಾಪನ ಸಂಸ್ಥೆಯಲ್ಲಿ ಸಾರ್ವಜನಿಕ ಸಂಪರ್ಕ ಸಹಾಯ ನಿರ್ದೇಶಕರಾಗಿ, ಬೆಂಗಳೂರು ವಿವಿ ಸಂವಹನ ವಿಭಾಗದಲ್ಲಿ ಉಪನ್ಯಾಸಕರಾಗಿ, ಮಂಗಳೂರು ವಿವಿ ಸಂವಹನ ಸಂಪರ್ಕ ಮತ್ತು ಪತ್ರಿಕೋದ್ಯಮ ವಿಭಾಗದಲ್ಲಿ ಪ್ರವಾಚಕ ಮತ್ತು ಮೈಸೂರು ವಿಶ್ವವಿದ್ಯಾಲಯದ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದಲ್ಲಿ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ.

ಹಾಗೆಯೇ ಮೈಸೂರು ವಿವಿ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಸಂಯೋಜನಾಧಿಕಾರಿಯಾಗಿಯೂ ಕರ್ತವ್ಯ ನಿರ್ವಹಿಸಿರುವ ಇವರು, ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನೇಮಕ ಸಮಿತಿ ಸದಸ್ಯರಾಗಿ, ಕರ್ನಾಟಕ ಮತ್ತು ಕೇಂದ್ರ ಲೋಕಸೇವಾ ಆಯೋಗ ಹಾಗೂ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಪರೀಕ್ಷಕರಾಗಿ, ನ್ಯಾಕ್ ಸಮಿತಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ.

ದಲಿತ ಚಳುವಳಿ, ರೈತ ಚಳುವಳಿ, ಬಂಡಾಯ ಸಾಹಿತ್ಯ ಚಳುವಳಿ ಮೊದಲಾದ ಪ್ರಗತಿಪರ ಚಳುವಳಿಗಳಲ್ಲಿಯೂ ಸಕ್ರಿಯರಾಗಿದ್ದ ಪ್ರೊ.ಮಹೇಶ್‌ಚಂದ್ರ ಗುರು, ಸುಮಾರು 32 ಗ್ರಂಥಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ರಚಿಸಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಮಹಿಳಾ ಸಾಹಿತ್ಯ, ಬೌದ್ಧ ಸಾಹಿತ್ಯ, ಅಂಬೇಡ್ಕರ್ ಸಾಹಿತ್ಯ ಮೊದಲಾದ ಕ್ಷೇತ್ರಗಳಿಗೆ ತಮ್ಮದೇ ಕೊಡುಗೆ ನೀಡಿದ್ದಾರೆ. 120ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿರುವ ಇವರ 200ಕ್ಕೂ ಹೆಚ್ಚು ಲೇಖನಗಳು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರತಿಷ್ಠಿತ ನಿಯತಕಾಲಿಕೆ ಗಳಲ್ಲಿ ಪ್ರಕಟಗೊಂಡಿವೆ. ಅಲ್ಲದೆ ಸುಮಾರು 32 ಸಂಶೋಧನಾ ವಿದ್ಯಾರ್ಥಿಗಳು ಸಂವಹನ ಮತ್ತು ಪತ್ರಿಕೋದ್ಯಮ ವಿಷಯದಲ್ಲಿ ಪಿಎಚ್.ಡಿ ಪದವಿ ಪಡೆಯಲು ಮಾರ್ಗದರ್ಶನ ನೀಡಿದ್ದಾರೆ.

ಸಿಎಂ ಸಂತಾಪ...

ನನಗೆ ಆತ್ಮೀಯರಾಗಿದ್ದ ಮೈಸೂರಿನ ಪ್ರಗತಿಪರ ಚಿಂತಕ ಡಾ.ಮಹೇಶ್ ಚಂದ್ರಗುರು ಅವರ ಸಾವಿನಿಂದ ಆಘಾತಕ್ಕೀಡಾಗಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ತಮ್ಮ ಎಕ್ಸ್ ಖಾತೆಯಲ್ಲಿ ಸಂತಾಪ ಸೂಚಿಸಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಡಾ.ಮಹೇಶ್ ಚಂದ್ರಗುರು ಅವರು ತರಗತಿಗಳಿಂದ ಹೊರಗೂ ಕೂಡಾ ಸಮಾಜಕ್ಕೆ ಮಾರ್ಗದರ್ಶಕರಾಗಿದ್ದರು. ಬುದ್ಧ, ಬಸವ, ಅಂಬೇಡ್ಕರ್ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಡಾ.ಮಹೇಶ್ ಚಂದ್ರಗುರು ಎಂದೂ ಮೌನಕ್ಕೆ ಮೊರೆಹೋಗದೆ ಮತ್ತು ಪರಿಣಾಮವನ್ನೂ ಲೆಕ್ಕಿಸದೆ ನೇರವಾಗಿ ಮತ್ತು ನಿಷ್ಠುರವಾಗಿ ತಮ್ಮ ಅಭಿಪ್ರಾಯ ಮಂಡಿಸುತ್ತಿದ್ದರು. ಅವರ ನಿಧನದಿಂದ ಸಮಾಜ ಒಬ್ಬ ಚಿಂತನಶೀಲ ಮಾರ್ಗದರ್ಶಕನನ್ನು ಕಳೆದುಕೊಂಡಿದೆ. ಅವರ ಕುಟುಂಬ ಮತ್ತು ಅಭಿಮಾನಿಗಳ ದು:ಖದಲ್ಲಿ ನಾನೂ ಭಾಗಿಯಾಗಿದ್ದೇನೆ.

ದೇಶ - ವಿದೇಶ

ಪ್ರತಿಭಟನಾನಿರತರ ಹತ್ಯೆ: ಬಾಂಗ್ಲಾದೇಶಕ್ಕೆ ಭೇಟಿ ನೀಡಲಿರುವ ವಿಶ್ವಸಂಸ್ಥೆ ತಂಡ

ಡಾಕಾ: ವಿಶ್ವಸಂಸ್ಥೆಯ ತಂಡ ಬಾಂಗ್ಲಾದೇಶಕ್ಕೆ ಮುಂದಿನ ವಾರ ಭೇಟಿ ನೀಡಲಿದ್ದು, ಪ್ರತಿಭಟನಾ ನಿರತರ ಹತ್ಯೆಯ ಬಗ್ಗೆ ತನಿಖೆ ನಡೆಸಲಿದೆ.



ಕಳೆದ ವಾರ ಶೇಖ್ ಹಸೀನಾ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಬಳಿಕ ನಡೆದಿದ್ದ ಹಿಂಸಾಚಾರದಲ್ಲಿ ಪ್ರತಿಭಟನಾ ನಿರತರನ್ನು ಹತ್ಯೆ ಮಾಡಲಾಗಿತ್ತು. 1971ರಲ್ಲಿ ಬಾಂಗ್ಲಾಗೆ ಸ್ವಾತಂತ್ರ್ಯ ದೊರೆತ ಬಳಿಕ ಇದೇ ಮೊದಲ ಬಾರಿಗೆ ವಿಶ್ವಸಂಸ್ಥೆ ತಂಡ ಬಾಂಗ್ಲಾದೇಶಕ್ಕೆ ಭೇಟಿ ನೀಡಲಿದ್ದು, ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ತನಿಖೆ ನಡೆಸಲಿದೆ. ಯುಎನ್ ತಂಡ ಭೇಟಿ ನೀಡುವುದರ ಬಗ್ಗೆ ಬಾಂಗ್ಲಾ ಸರ್ಕಾರಿ ಸಲಹೆಗಾರರೊಬ್ಬರು ಮಾಹಿತಿ ನೀಡಿದ್ದಾರೆ. ಮುಹಮ್ಮದ್ ಯೂನಸ್ ಅವರು ಆ.8ರಂದು ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರರಾಗಿ ಪ್ರಮಾಣವಚನ ಸ್ವೀಕರಿಸಿದ್ದರು, ಸರ್ಕಾರ ಪತನಗೊಂಡ ಕೆಲವು ದಿನಗಳ ನಂತರ ಶೇಕ್ ಹಸೀನಾ ಅವರು ಆ.5ರಂದು ಸರ್ಕಾರಿ ಉದ್ಯೋಗಗಳಿಗೆ ಕೋಟಾ ಸುಧಾರಣೆಗಳ ಮೇಲೆ ಹಿಂಸಾತ್ಮಕ ಪ್ರತಿಭಟನೆಗಳ ನಡುವೆ ದೇಶ ತೊರೆದಿದ್ದರು.

ಪ್ಯಾರಿಸ್‌ನಿಂದ ಭಾರತಕ್ಕೆ ಬಂದಿಳಿದು ಕಣ್ಣೀರಿಟ್ಟ ವಿನೇಶ್ ಫೋಗಟ್

ನವದೆಹಲಿ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ದಿಟ್ಟ ಹೋರಾಟ ನಡೆಸಿದ್ದ ವಿನೇಶ್ ಕೊನೆಗೂ ಇಲ್ಲಿನ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಅವರು ತಾಯ್ನಾಡಿಗೆ ಬಂದಿಳಿಯುತ್ತಿದ್ದಂತೆಯೇ ಮೆರವಣಿಗೆ ಮೂಲಕ ಅವರನ್ನು ಕರೆದುಕೊಂಡು ಹೋಗಲಾಯಿತು. ಈ ಸಂದರ್ಭದಲ್ಲಿ ಭಾವುಕರಾದ ವಿನೇಶ್ ಫೋಗಟ್ ಕಣ್ಣೀರಿಟ್ಟರು. ಈ ವಿಡಿಯೋವೀಗ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿದೆ. ವಿನೇಶ್ ಫೋಗಟ್ ಭಾರತಕ್ಕೆ ಬಂದಿಳಿಯುತ್ತಿದ್ದಂತೆಯೇ ಸಹ ಕುಸ್ತಿಪಟುಗಳಾದ ಸಾಕ್ಷಿ ಮಲಿಕ್, ಬಜರಂಗ್ ಪೂನಿಯಾ ಸಾಥ್ ನೀಡಿದ್ದಾರೆ. ಈ ವೇಳೆ ವಿನೇಶ್ ಫೋಗಟ್ ಹಾಗೂ ಸಾಕ್ಷಿ ಒಬ್ಬರನ್ನೊಬ್ಬರು ಅಪ್ಪಿಕೊಂಡು ಕಣ್ಣೀರು ಹಾಕಿದರು. ಮೊದಲ ಸುತ್ತಿನಲ್ಲೇ ಅಂತಾರಾಷ್ಟ್ರೀಯ ಕುಸ್ತಿ ಸ್ಪರ್ಧೆಯಲ್ಲಿ ಸೋಲನ್ನೇ ಕಾಣದ ಜಪಾನಿನ ಯು ಸುಸಾಕಿಯನ್ನು ಮಣಿಸಿದ್ದರು. ಆ ಬಳಿಕ ಅದೇ ದಿನ ಇನ್ನಿಬ್ಬರು ಕುಸ್ತಿಪಟುಗಳನ್ನು ಫೈನಲ್ ಪ್ರವೇಶಿಸಿದ್ದರು. ಆದರೆ ಅವರು ನಿಗದಿತ ತೂಕಕ್ಕಿಂತ 100 ಗ್ರಾಂ ಜಾಸ್ತಿ ಇದ್ದಾರೆಂಬ ಅವರನ್ನು ಅನರ್ಹಗೊಳಿಸಲಾಗಿತ್ತು.



ಅಮೆರಿಕದಲ್ಲಿ ಅಂಗಡಿಗೆ ನುಗ್ಗಿ ದರೋಡೆ: ಭಾರತ ಮೂಲದ ಮಾಲೀಕನ ಹತ್ಯೆ

ವಾಷಿಂಗ್ಟನ್: ಅಮೆರಿಕದ ನಾರ್ತ್ ಕೆರೋಲಿನಾದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕನೊಬ್ಬ ರೀಟೇಲ್ ಅಂಗಡಿಗೆ ನುಗ್ಗಿ ದರೋಡೆ ಮಾಡಿದ್ದಲ್ಲದೆ, ಭಾರತ ಮೂಲದ ವ್ಯಕ್ತಿಯೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ. 2580 ಏರ್‌ಪೋರ್ಟ್ ರೋಡ್‌ನಲ್ಲಿ ಟೊಬ್ಯಾಕೋ ಹೌಸ್ ಎಂಬ ಅಂಗಡಿಯನ್ನು ನಡೆಸುತ್ತಿದ್ದ 36 ವರ್ಷದ ಮೈನಾಂಕ್ ಪಟೇಲ್ ಮೃತ ದುರ್ದೈವಿ. ದರೋಡೆ ಹಾಗೂ ಹತ್ಯೆ ನಡೆಸಿದ ಬಾಲಾ ರೋಪಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ರೋವನ್ ಕೌಂಟಿ ಪೊಲೀಸ್ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಹಂತಕ ಇನ್ನೂ ಅಪ್ರಾಪ್ತ ವಯಸ್ಕನಾಗಿರುವ ಕಾರಣ ಆತನ ಹೆಸರು ಹಾಗೂ ಇತರೆ ವಿವರಗಳನ್ನು ಬಹಿರಂಗಪಡಿಸುವುದು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.



ಪೊಲೀಸರು ಸ್ಥಳಕ್ಕೆ ಆಗಮಿಸಿ, ಗುಂಡೇಟಿನಿಂದ ಚಿಂತಾಜನಕ ಸ್ಥಿತಿಯಲ್ಲಿದ್ದ ಪಟೇಲ್ ಅವರನ್ನು ನೋವಾಂಟ್ ಹೆಲ್ತ್ ಮೆಡಿಕಲ್ ಸೆಂಟರ್‌ಗೆ ಸಾಗಿಸಲಾಗಿ ಚಿಕಿತ್ಸೆ ಫಲಕಾರಿಯಾಗದೇ ಅವರು ಸಾವನ್ನಪ್ಪಿದ್ದಾರೆ.


ಹಳಿ ತಪ್ಪಿದ ಸಬರಮತಿ ಎಕ್ಸ್‌ಪ್ರೆಸ್‌ನ 20 ಬೋಗಿಗಳು, ಪ್ರಯಾಣಿಕರ ಸ್ಥಳಾಂತರ

ಲಖನೌ: ಉತ್ತರ ಪ್ರದೇಶದ ಕಾನ್ಪುರದ ಗೋವಿಂದಪುರಿ ನಿಲ್ದಾಣದ ಬಳಿ ಇಂದು ನಸುಕಿನ ವೇಳೆಯಲ್ಲಿ ಸಬರಮತಿ ಎಕ್ಸ್‌ಪ್ರೆಸ್ ಪ್ಯಾಸೆಂಜರ್ ರೈಲಿನ 20 ಬೋಗಿಗಳು ಹಳಿತಪ್ಪಿವೆ ಎಂದು ರೈಲು ಅಧಿಕಾರಿಗಳು ತಿಳಿಸಿದ್ದಾರೆ. ಅಪಘಾತದಲ್ಲಿ ಯಾವುದೇ ಪ್ರಾಣಹಾನಿ ಅಥವಾ ಗಾಯದ ಬಗ್ಗೆ ವರದಿಯಾಗಿಲ್ಲ. ಅಪಘಾತ ಕುರಿತು ಮಾಹಿತಿ ನೀಡಿರುವ ನಾರ್ತ್ ಸೆಂಟ್ರಲ್ ರೈಲ್ವೆ ಹಿರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಶಶಿಕಾಂತ್ ತ್ರಿಪಾಠಿ,ಮುಂಜಾನೆ 2.30 ಕ್ಕೆ ಅಪಘಾತ ಸಂಭವಿಸಿದ್ದು, ಯಾವುದೇ ಪ್ರಾಣ ಹಾನಿ ಅಥವಾ ಆಸ್ತಿ ನಷ್ಟದ ಬಗ್ಗೆ ವರದಿಯಾಗಿಲ್ಲ ಎಂದರು. ವಾರಣಾಸಿಯಿಂದ ಅಹಮದಾಬಾದ್ ಕಡೆಗೆ ತೆರಳುತ್ತಿದ್ದ ರೈಲು ಕಾನ್ಪುರ ಮತ್ತು ಭೀಮಸೇನ್ ರೈಲು ನಿಲ್ದಾಣದ ನಡುವೆ ರೈಲು ಹಳಿತಪ್ಪಿದೆ. ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ನಡೆಯುತ್ತಿದೆ. ಕೆಲವು ಬಂಡೆಗಳು ಇಂಜಿನ್ ನ ಮುಂಭಾಗಕ್ಕೆ ಬಿದಿದ್ದು, ಸ್ವಲ್ಪ ಹಾನಿಯಾಗಿರುವುದಾಗಿ ಲೊಕೊ ಪೈಲಟ್ ಹೇಳಿದ್ದಾರೆ.



ಮುಂಬೈ ದಾಳಿ: ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲು ಅಮೆರಿಕದ ಕೋರ್ಟ್ ತೀರ್ಪು

ವಾಷಿಂಗ್ಟನ್: 2008ರಲ್ಲಿ ಮುಂಬೈ ಮೇಲೆ ನಡೆದಿದ್ದ ಉಗ್ರರ ದಾಳಿಗೆ ಸಂಬಂಧಿಸಿ ತನ್ನನ್ನು ಭಾರತಕ್ಕೆ ಹಸ್ತಾಂತರಿಸುವ ಆದೇಶವನ್ನು ಪ್ರಶ್ನಿಸಿ ಪಾಕಿಸ್ತಾನ ಮೂಲದ ಕೆನಡಾ ಉದ್ಯಮಿ ತಹಾವ್ವುರ್ ರಾಣಾ ಸಲ್ಲಿಸಿದ್ದ ಮೇಲ್ಮನವಿಯನ್ನು ಅಮೆರಿಕದ ಕೋರ್ಟ್ ವಜಾಗೊಳಿಸಿದೆ. ಭಾರತ-ಅಮೆರಿಕ ಹಸ್ತಾಂತರ ಒಪ್ಪಂದದ ಅಡಿಯಲ್ಲಿ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಬಹುದೆಂದು ಅಮೆರಿಕದ ಕೋರ್ಟ್ ತೀರ್ಪು ನೀಡಿದೆ. ಮ್ಯಾಜಿಸ್ಟ್ರೇಟ್ ನ್ಯಾಯಾಧೀಶರ ಆದೇಶವನ್ನು ಪ್ರಶ್ನಿಸಿ ರಾಣಾ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಕ್ಯಾಲಿಫೋರ್ನಿಯಾದ ಜಿಲ್ಲಾ ನ್ಯಾಯಾಲಯವು ವಜಾಗೊಳಿಸಿತ್ತು. ಇದನ್ನು ಪರಿಶೀಲಿಸಿದ ಮೂವರು ನ್ಯಾಯಾಧೀಶರ ಸಮಿತಿಯು, ರಾಣಾನನ್ನು ಭಾರತಕ್ಕೆ ಹಸ್ತಾಂತರಿಸುವುದಕ್ಕೆ ಅನುಮೋದನೆ ನೀಡಿ ಆದೇಶಿಸಿದೆ.



2008ರ ನವೆಂಬರ್ 26ರಂದು ಮುಂಬೈ ಮೇಲೆ ನಡೆದಿದ್ದ ಉಗ್ರರ ದಾಳಿಯಲ್ಲಿ 166 ಮಂದಿ ಮೃತಪಟ್ಟಿದ್ದರು.

ಬಿವಿಬಿಯಲ್ಲಿ ಮೇಜರ್ ಜನರಲ್(ನಿವೃತ್ತ) ಎಸ್‌ಜಿ ಒಂಬತ್ಕೆರೆ ಧ್ವಜಾರೋಹಣ



ಮೈಸೂರಿನ ಭಾರತೀಯ ವಿದ್ಯಾ ಭವನ(ಬಿವಿಬಿ) ಶಾಲೆಯಲ್ಲಿ 78ನೇ ಸ್ವಾತಂತ್ರೋತ್ಸವವನ್ನು ಗುರುವಾರ ಆಚರಿಸಲಾಯಿತು. ಈ ವೇಳೆ ಮೇಜರ್ ಜನರಲ್(ನಿವೃತ್ತ) ಎಸ್‌ಜಿ.ಒಂಬತ್ಕೆರೆ (ಎಡದಿಂದ 4ನೇಯವರು) ಅವರು ಧ್ವಜಾರೋಹಣ ನೆರವೇರಿಸಿದರು. ಚಿತ್ರದಲ್ಲಿ ಬಿವಿಬಿ ಗೌರವ ಖಜಾಂಚಿ ಡಾ.ಎ.ಟಿ.ಭಾಷ್ಯಂ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಅಧ್ಯಕ್ಷರಾದ ಡಾ.ಕೆ.ಬಿ.ಗಣಪತಿ ಹಾಗೂ ಪ್ರಾಂಶುಪಾಲೆ ಎಸ್.ಲೇಖಾ ನಾಯರ್ ಅವರನ್ನು ಕಾಣಬಹುದು.



ತಪೋವನದಲ್ಲಿ ಸ್ವಾತಂತ್ರ್ಯ ದಿನಾಚರಣೆ

ಮೈಸೂರಿನ ತಪೋವನ ಸಾಂತ್ವನ ಕೇಂದ್ರದಲ್ಲಿ ಆಚರಿಸಲಾದ ಸ್ವಾತಂತ್ರ್ಯೋತ್ಸವದಲ್ಲಿ ನಿವೃತ್ತ ಇಂಜಿನಿಯರ್ ಬಿ.ಎನ್. ಶೇಷಾದ್ರಿ ಅವರು ಇಲ್ಲಿನ ನಿವಾಸಿಯೂ ಆಗಿರುವ ಪತ್ನಿ ಪುಷ್ಪಾ ಅವರೊಂದಿಗೆ ಧ್ವಜಾರೋಹಣ ನೆರವೇರಿಸಿದರು.

ಕೆ.ಆರ್.ಆಸ್ಪತ್ರೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ



ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ ಅವರು ಧ್ವಜಾರೋಹಣ ನೆರವೇರಿಸಿದರು. ಕೆಆರ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ವಿ.ಶೋಭಾ, ಸ್ಥಾನಿಕ ವೈದ್ಯಾಧಿಕಾರಿ ಡಾ.ನಯಾಜ್ ಪಾಷಾ, ಸರ್ಜರಿ ವಿಭಾಗದ ಮುಖ್ಯಸ್ಥ ಡಾ.ದಿನೇಶ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ದಿ ಆಕ್ಮಿ ಸ್ಕೂಲ್‌ನಲ್ಲಿ 78ನೇ ಸ್ವಾತಂತ್ರ್ಯೋತ್ಸವ



ಮೈಸೂರಿನ ನಿವೇದಿತ ನಗರದಲ್ಲಿರುವ ದಿ ಆಕ್ಮಿ ಸ್ಕೂಲ್‌ನಲ್ಲಿ 78ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಈ ವೇಳೆ ಮುಖ್ಯ ಅತಿಥಿ ಬ್ರಿಗೇಡಿಯರ್ ವಿನೋದ್ ಅಡಪ್ಪ(ನಿವೃತ್ತ) ಧ್ವಜಾರೋಹಣ ನೆರವೇರಿಸಿದರು. ಪ್ರಾಂಶುಪಾಲರಾದ ಶ್ರೀಮತಿ ಶ್ವೇತಾ ಚವಾನ್, ಸೆಕ್ರೆಟರಿ ಆರ್.ಅರುಣ್ ಸಿಂಗ್, ಆರ್.ಸುಭಾಷಿಣಿ, ರೋಟರಿ ಸದಸ್ಯರು, ಕಮಲ ರಂಜಿತ್ ಎಜುಕೇಶನಲ್ ಸೊಸೈಟಿ ಸದಸ್ಯರು, ಪೋಷಕರು ಉಪಸ್ಥಿತರಿದ್ದರು.

ಒಕ್ಕಲಿಗರ ಕ್ಷೇಮಾಭಿವೃದ್ಧಿ ವೇದಿಕೆಯಿಂದ ಸ್ವಾತಂತ್ರ್ಯೋತ್ಸವ



ಮೈಸೂರಿನ ಒಕ್ಕಲಿಗರ ಕ್ಷೇಮಾಭಿವೃದ್ಧಿ ವೇದಿಕೆ ವತಿಯಿಂದ 78ನೇ ಸ್ವಾತಂತ್ರ್ಯ ದಿನವನ್ನು ನೂತನ ಕಚೇರಿ ಮುಂದೆ ಆಚರಿಸಲಾಯಿತು. ಮೈಮುಲ್‌ನ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ಇತಿಹಾಸ ತಜ್ಞ ನಂಜರಾಜ ಅರಸ್, ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಇನ್ನಿತರರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಕರಣ ದಾಖಲಿಸಲು ರಾಜ್ಯಪಾಲರ ಅನುಮತಿ ಖಂಡಿಸಿ

ಮೈಸೂರಲ್ಲಿ ಅಹಿಂದ, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಪ್ರತಿಭಟನೆ

ಮೈಸೂರು,ಆ.17(ಜಿಎ)–ಮುಖ್ಯಮಂತ್ರಿ ವಿರುದ್ಧ ಪ್ರಕರಣ ದಾಖಲಿಸಲು ಅನುಮತಿ ನೀಡಿರುವ ರಾಜ್ಯಪಾಲರ ನಡೆ ಖಂಡಿಸಿ ಅಹಿಂದ ಸಂಘಟನೆ ಹಾಗೂ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ನಗರದ ನ್ಯಾಯಾಲಯದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ನ್ಯಾಯಾಲಯದ ಮುಂಭಾಗ ಜಮಾಯಿಸಿ ಪ್ರತಿಭಟನಾಕಾರರು ಟಯರ್‌ಗೆ ಬೆಂಕಿ ಹಚ್ಚಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರ ಭಾವಚಿತ್ರ ಸುಟ್ಟು ಆಕ್ರೋಶ ವ್ಯಕ್ತಪಡಿಸಿ, ರಾಜ್ಯಪಾಲರು ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಜೊತೆಗೆ ಮಾನವ ಸರಪಳಿ ರಚಿಸಿ ರಸ್ತೆ ತಡೆ ನಡೆಸಿದರು.

ಈ ವೇಳೆ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ರಾಜಕೀಯ ಜೀವನದಲ್ಲಿ ಕಪ್ಪುಚುಕ್ಕೆ ಇಲ್ಲದಂತೆ ಜನ ಸೇವೆ ಮಾಡಿದ್ದಾರೆ. ಅಂತಹವರ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಷಡ್ಯಂತ್ರ ರೂಪಿಸಿದ್ದಾರೆ. ಅವರಿಗೆ ಸಂಬಂಧವೇ ಇಲ್ಲದ ವಿಷಯವನ್ನು ತಳಕುಹಾಕಿ ಅವರ ಘನತೆಗೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಮ್ಮ ಮೇಲಿನ ಆರೋಪಕ್ಕೆ ಸ್ವತಃ ತನಿಖಾ ಆಯೋಗ ರಚಿಸಿರುವ ಏಕೈಕ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂಬುದನ್ನು ವಿಪಕ್ಷಗಳು ಅರಿಯಬೇಕು. ಬಡವರು, ಕಾರ್ಮಿಕರು, ಮಹಿಳೆಯರು ಸೇರಿ ಶೋಷಿತ ವರ್ಗದ ಜನರು ಸರ್ಕಾರದ ಪರ ನಿಂತಿದ್ದಾರೆ. ಆದರೆ ಆ ಜನರ ದಾರಿ ತಪ್ಪಿಸುವ ಕೆಲಸವನ್ನು ವಿಪಕ್ಷಗಳು ಮಾಡುತ್ತಿವೆ. ರಾಜ್ಯಪಾಲರ ಭವನ ಪಕ್ಷಾತೀತವಾಗಿರಬೇಕು. ಆದರೆ ರಾಜ್ಯಪಾಲರು ಒಂದು ಪಕ್ಷದ ಕೈಗೊಂಬೆಯಂತೆ ನಡೆದುಕೊಳ್ಳುತ್ತಿರುವುದು ಕಾನೂನುಬಾಹಿರ. ರಾಜ್ಯಪಾಲರು ತಮ್ಮ ನಡೆ ಹಿಂಪಡೆಯಬೇಕು. ಇಲ್ಲವಾದಲ್ಲಿ ರಾಜೀನಾಮೆಗೆ ಒತ್ತಾಯಿಸಿ ರಾಜಭವನ ಚಲೋ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು. ಇದಲ್ಲದೆ ಸ್ಥಳೀಯವಾಗಿ ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳ ಮನೆಗೆ ಸಹ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಪ್ರಾದೇಶಿಕ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ, ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ ಎಚ್.ಎಸ್.ಪ್ರಕಾಶ್, ದಲಿತ ಮುಖಂಡ ರಾಜೇಶ್, ಮೈಸೂರು ಬಸವಣ್ಣ, ಮಡಿವಾಳ ಸಂಘದ ಅಧ್ಯಕ್ಷ ರವಿನಂದನ್, ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಯೋಗೇಶ್ ಉಪ್ಪಾರ, ವಿಶ್ವಕರ್ಮ ಸಂಘದ ಜಿಲ್ಲಾಧ್ಯಕ್ಷ ಮೊಗಣ್ಣಚಾರ್, ಮುಖಂಡರಾದ ಲೋಕೇಶ್, ಮಹೇಂದ್ರ, ಬಸಪ್ಪ ಬಸವರಾಜು, ಲಕ್ಷ್ಮೀ, ಹಿನಕಲ್ ಉದಯ್, ವಕೀಲರಾದ ಕಾಂತರಾಜು, ತಿಮ್ಮಯ್ಯ, ದಿನೇಶ್, ಕೇಶವ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರಿನ ನ್ಯಾಯಾಲಯದ ಮುಂಭಾಗ ಮುಖ್ಯಮಂತ್ರಿಗಳ ವಿರುದ್ಧ ರಾಜ್ಯಪಾಲರ ನಡೆ ಖಂಡಿಸಿ ಅಹಿಂದ ಸಂಘಟನೆ ಹಾಗೂ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಟಯರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ನೀಡಿರುವ

ರಾಜ್ಯಪಾಲರ ಅನುಮತಿ ಹಿಂದೆ ಪ್ರಭಾವಿಗಳ ಕೈವಾಡ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪ

ಮೈಸೂರು, ಆ.17(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರಿಂದ ಅನುಮತಿ ಕೊಡಿಸಲು ಪ್ರಭಾವಿಗಳೇ ಕೆಲಸ ಮಾಡಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕಾರ ಬೆನ್ನಲ್ಲೇ ಬಿಜೆಪಿ ನಾಯಕರು ಸಿಎಂ ಕೆಳಗಿಳಿಸಲಿಕ್ಕೆ ಬ್ಲೂ ಪ್ರಿಂಟ್ ರೆಡಿ ಮಾಡಿದರು. ಅದಕ್ಕಾಗಿ ರಾಜಭವನವನ್ನು ಬಿಜೆಪಿ, ಜೆಡಿಎಸ್ ಕಚೇರಿ ಮಾಡಿಕೊಂಡಿರುವುದು ದುರ್ದೈವ ಎಂದರು.

ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಲೋಕಾಯುಕ್ತದಲ್ಲಿ ಕೇಸ್ ದಾಖಲು ಮಾಡಲು ಅನುಮತಿ ಕೋರಿ ಎಂದು ರಾಜ್ಯಪಾಲರಿಗೆ ದೂರು ನೀಡಲಾಗಿತ್ತು. ಆದರೆ, ವರ್ಷವಾದರೂ ರಾಜ್ಯಪಾಲರು ಅನುಮತಿ ನೀಡಿಲ್ಲ. ಶಶಿಕಲಾ ಜೊಲ್ಲೆ, ಮುರುಗೇಶ್ ನಿರಾಣಿ ವಿರುದ್ಧವೂ ಆರೋಪ ಇದೆ. ಕಾನೂನು ಕ್ರಮ ಕೈಗೊಳ್ಳಲು ಅನುಮತಿ ಕೇಳಿದರೂ ರಾಜ್ಯಪಾಲರು ನೀಡಲು ಮುಂದಾಗಿಲ್ಲ ಎಂದು ಕಿಡಿಕಾರಿದರು.

ಟಿ.ಜೆ.ಅಬ್ರಹಾಂ ಮುಖ್ಯಮಂತ್ರಿ ವಿರುದ್ಧ ದೂರು ಕೊಟ್ಟ ಕೆಲವೇ ಕ್ಷಣಗಳಲ್ಲಿ ಸಿಎಂಗೆ ನೋಟಿಸ್ ನೀಡಲಾಗುತ್ತದೆ. ಇಂದು ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿದ್ದಾರೆ. ಸಿಎಂ ವಿರುದ್ಧ ದೂರು ಕೊಟ್ಟಿರೋದು ಯಾರು. ದಾರಿಯಲಿ ಹೋಗೋರು ಕೊಟ್ಟ ದೂರನ್ನ ಕಾಂಪಿಟೇಟಿವ್ ಅಥಾರಿಟಿ ಮಾಡಲಾಗಿದೆ. ರಾಜ್ಯಪಾಲರು ಬಿಜೆಪಿ, ಜೆಡಿಎಸ್ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ. ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಿಸಲು ಕುಮಾರಸ್ವಾಮಿ, ಪ್ರಹ್ಲಾದ್ ಜೋಶಿ, ವಿಜಯೇಂದ್ರ, ಅಶೋಕ್ ಪ್ರಭಾವ ಬಳಸಿದ್ದಾರೆ. ನೆಕ್ಸ್ಟ್ ಡಿಸಿಎಂ ಡಿಕೆ ಶಿವಕುಮಾರ್ ಅವರನ್ನು ಟಾರ್ಗೆಟ್ ಮಾಡಲಾಗಿದೆ. ಅಧಿಕಾರ ದಾಹದಿಂದ ಈ ರೀತಿ ಮಾಡಲಾಗುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ, ಜೆಡಿಎಸ್ ಪಕ್ಷದ ಹುನ್ನಾರವನ್ನು ಜನ ಅರಿತುಕೊಳ್ಳಬೇಕು. ಸಿಎಂ ಸಿದ್ದರಾಮಯ್ಯ ಹಾಗೂ ರಾಜ್ಯ ಸರ್ಕಾರ ಅಸ್ಥಿರಗೊಳಿಸಲಿಕ್ಕೆ ಮುಂದಾಗಿದೆ. ಬಿಜೆಪಿ, ಜೆಡಿಎಸ್ ಹುನ್ನಾರ ಫಲಿಸಲ್ಲ. ನಾವು ಇನ್ನು ಸ್ಟ್ರಾಂಗ್ ಆಗುತ್ತೇವೆ. ರಾಜ್ಯಾದ್ಯಂತ ನಮ್ಮ ಪ್ರತಿಭಟನೆಗಳು ಪ್ರಾರಂಭ ಆಗುತ್ತದೆ. ಕೆಲವರು ಕಾಂಗ್ರೆಸ್ ಹೆಸರಿನಲ್ಲಿ ಪ್ರತಿಭಟನೆ ನಡೆಸಿ ಗೊಂದಲ ಸೃಷ್ಟಿಸಲು ಮುಂದಾಗಿದ್ದಾರೆ. ಇಂತಹ ಪ್ರತಿಭಟನೆಗಳಿಗೆ ಕಾಂಗ್ರೆಸ್ ಹೊಣೆಯಲ್ಲ ಎಂದು ಕೆಪಿಸಿಸಿ ವಕ್ತಾರ ಲಕ್ಷ್ಮಣ್ ತಿಳಿಸಿದರು.

ಕಾಂಗ್ರೆಸ್ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಮಾತನಾಡಿ, ಬಹುಮತವಿರುವ ಸರ್ಕಾರವನ್ನು ಉರುಳಿಸಲು ಬಿಜೆಪಿ ಮತ್ತು ಜೆಡಿಎಸ್ ಹುನ್ನಾರ ನಡೆಸುತ್ತಿವೆ. ಮೈಸೂರಿನ ಮಣ್ಣಿನ ಮಗ ಸಿದ್ದರಾಮಯ್ಯ ಅವರ ಪರ ಇಡೀ ಪಕ್ಷವೇ ನಿಂತಿದೆ. ಕೆಪಿಸಿಸಿಯಿಂದ ಪ್ರತಿಭಟನೆ ನಡೆಸಲು ಯಾವುದೇ ಆದೇಶ ಬಂದಿಲ್ಲ. ಸಂಜೆ ವೇಳೆಗೆ 'ಗೋ ಬ್ಯಾಕ್ ಗವರ್ನರ್' ಚಳುವಳಿ ಆರಂಭಿಸುವ ಸಾಧ್ಯತೆ ಇದೆ. ಕೆಪಿಸಿಸಿ ಆದೇಶದಂತೆ ಮುಂದಿನ ಹೋರಾಟ ಮಾಡುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಎಂ.ಶಿವಣ್ಣ, ಓಬಿಸಿ ಘಟಕದ ಎನ್.ಆರ್. ನಾಗೇಶ್, ಕೆ.ವಿ.ಮಲ್ಲೇಶ್, ಮಹೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿದರು.

ಷೇರು ಮಾರುಕಟ್ಟೆಯಲ್ಲಿ ಹೆಚ್ಚಿನ ಲಾಭದ ಆಮಿಷವೊಡ್ಡಿ 59.99 ಲಕ್ಷ ವಂಚನೆ

ಮೈಸೂರು, ಆ.17(ಎಸ್‌ಪಿಎನ್)–ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ, ಹೆಚ್ಚಿನ ಲಾಭ ಬರುತ್ತದೆ ಎಂದು ನಂಬಿಸಿ ಮೈಸೂರಿನ ರಾಜೀವ್‌ನಗರ ನಿವಾಸಿಗೆ ಆನ್‌ಲೈನ್ ಮೂಲಕ 59.99 ಲಕ್ಷ ರೂ. ವಂಚಿಸಲಾಗಿದೆ. ವಂಚಕರು, ವೆಲ್ತ್ ಕ್ರಿಯೇಟರ್ ವಿಐಪಿ–18 ಗ್ರೂಪ್ ಮೂಲಕ ಷೇರು ಮಾರುಕಟ್ಟೆಯಲ್ಲಿ ಹಣ ತೊಡಿಸಿವಂತೆ ವಾಟ್ಸಾಪ್ ಮೂಲಕ ತಿಳಿಸಿದ್ದಾರೆ. ಅಲ್ಲದೆ, ಹೂಡಿಕೆ ಮಾಡಿದ ಹಣಕ್ಕೆ ಹೆಚ್ಚಿನ ಲಾಭ ಬರುತ್ತದೆ ಎಂದು ನಂಬಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜೀವ್‌ನಗರದ ವ್ಯಕ್ತಿ ವಿವಿಧ ಹಂತಗಳಲ್ಲಿ ಮತ್ತು 59,99 ಲಕ್ಷ ರೂ ಹಣ ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸನ್ಮಾನ...

ಮೈಸೂರಿನ ಕುರುಬಾರಹಳ್ಳಿಯಲ್ಲಿ ನಡೆದ ಸಂಗೊಳ್ಳಿ ರಾಯಣ್ಣ ಜಯಂತಿ ಆಚರಣೆ ವೇಳೆ ಕಾಂಗ್ರೆಸ್ ಮುಖಂಡ, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಜಯಕುಮಾರ್ ಅವರನ್ನು ಸಚಿವ ಡಾ.ಮಹದೇವಪ್ಪ ಸನ್ಮಾನಿಸಿದರು.

ಬಾಂಗ್ಲಾದ ಹಿಂದೂಗಳ ರಕ್ಷಣೆಗೆ ಕೇಂದ್ರ ಮಧ್ಯ ಪ್ರವೇಶಕ್ಕೆ ಆಗ್ರಹಿಸಿ ಕನ್ನಡ ವೇದಿಕೆ ಪ್ರತಿಭಟನೆ



ಮೈಸೂರಿನ ಹಳೇ ಡಿಸಿ ಕಚೇರಿ ಮುಂಭಾಗ ಬಾಂಗ್ಲಾ ಹಿಂದೂಗಳ ರಕ್ಷಿಸುವಂತೆ ಆಗ್ರಹಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.17(ಜಿಎ)–ಇತ್ತೀಚಿಗೆ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಮಾರಣಹೋಮ, ಆಸ್ತಿ–ಪಾಸ್ತಿಗಳ ಧ್ವಂಸ ನಿಲ್ಲಿಸಲು ಕೂಡಲೇ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಬೇಕೆಂದು ಆಗ್ರಹಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಮೈಸೂರಿನ ಹಳೇ ಡಿಸಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ತನ್ನ ಆತ್ಮ ರಕ್ಷಣೆಗಾಗಿ ಓಡಿ ಬಂದ ಶೇಖ್ ಹಸೀನಾ ಭಾರತದಲ್ಲಿ ಸೂಕ್ತ ಭದ್ರತೆಯಲ್ಲಿರುವಾಗ ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳು ಅಭದ್ರತೆಯ ನೆರಳಲ್ಲಿ ಬದುಕುತ್ತಿರುವುದು ದುರ್ದೈವದ ಸಂಗತಿ. ಈಗಾಗಲೇ ಬಾಂಗ್ಲಾದೇಶದಲ್ಲಿ ಕೇವಲ ಶೇ.8ರಷ್ಟಿರುವ ಹಿಂದೂಗಳ ಸಂಖ್ಯೆ ಇದೇ ಪರಿಸ್ಥಿತಿ ಮುಂದುವರೆದರೆ ಅದೂ ಕಣ್ಮರೆಯಾಗುವುದರಲ್ಲಿ ಅನುಮಾನವಿಲ್ಲ. ಆದ ಕಾರಣ ಭಾರತ ಸರ್ಕಾರ ಎಚ್ಚೆತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಇದರ ಬಗ್ಗೆ ಗಂಭೀರ ಪ್ರಸ್ತಾಪ ಮಾಡಿ ಬಾಂಗ್ಲಾದೇಶದಲ್ಲಿ ಶಾಂತಿ ನೆಲೆಸಿ ಅಲ್ಲಿನ ಹಿಂದೂಗಳು ನಿರ್ಭಯವಾಗಿ ಬದುಕುವಂತಹ ವಾತಾವರಣವನ್ನು ನಿರ್ಮಾಣ ಮಾಡುವ ಗುರುತರ ಜವಾಬ್ದಾರಿ ಕೇಂದ್ರ ಸರ್ಕಾರದ ಮೇಲಿದೆ. ಈಗಾಗಲೇ ಶಾಂತಿ ಸ್ಥಾಪನೆಯ ವಿಶ್ವ ಗುರು ಎಂದು ಹೆಸರು ಪಡೆಯುತ್ತಿರುವ ಭಾರತ ದೇಶ ಬಾಂಗ್ಲಾದೇಶದ ಆಂತರಿಕ ಪರಿಸ್ಥಿತಿಯ ಬಗ್ಗೆ ಗಂಭೀರ ಚಿಂತನೆ ಮಾಡಬೇಕಾಗಿದೆ ಎಂದು ವೇದಿಕೆ ಒತ್ತಾಯಿಸಿದೆ.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ನಾಲಾಬೀದಿರವಿ, ಬೋಗಾದಿಸಿದ್ದೇಗೌಡ, ಗುರುಬಸಪ್ಪ ಮಹದೇವಸ್ವಾಮಿ, ಪ್ಯಾಲೇಸ್ ಬಾಬು, ಗೋಪಿ, ಸುನೀಲ್, ಎಲ್.ಐ.ಸಿ. ಸಿದ್ದಪ್ಪ, ಗೋವಿಂದರಾಜು, ಬೀಡಾ ಬಾಬು, ಸ್ವಾಮಿಗೈಡ್, ಮಾದಪ್ಪ ಕಾವೇರಮ್ಮ, ಪುಷ್ಪ, ಮಾಲಿನಿ, ಹರೀಶ್, ಕಿಶೋರ್, ಶ್ರೀನಿವಾಸ್, ಮದನ್, ಸ್ವಾಮಿ, ಎಲ್.ಐ.ಸಿ, ಬಸವರಾಜು ಪಾಲ್ಗೊಂಡಿದ್ದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಪ್ರತಿಭಟನೆ



ರಾಮಸ್ವಾಮಿ ವೃತ್ತದಲ್ಲಿ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಪ್ರತಿಭಟಿಸಲಾಯಿತು.

ಮೈಸೂರು, ಆ.17(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿರುವುದನ್ನು ಖಂಡಿಸಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ಟಯರ್‌ಗೆ ಬೆಂಕಿ ಹಚ್ಚಿ, ವಾಹನಗಳನ್ನೂ ತಡೆದು ಆಕ್ರೋಶ ವ್ಯಕ್ತಪಡಿಸಿದರು. 'ಬಿಜೆಪಿ ಚೇಲ ರಾಜ್ಯಪಾಲರಿಗೆ ಧಿಕ್ಕಾರ', 'ಬಿಜೆಪಿ ಕೈಗೊಂಬೆಯಾಗಿ ವರ್ತಿಸಿದ ರಾಜ್ಯಪಾಲರಿಗೆ ಧಿಕ್ಕಾರ', 'ಮೋದಿ, ಅಮಿತ್ ಶಾ ಸೇವಕ ಗೆಹ್ಲೋಟ್‌ಗೆ ಧಿಕ್ಕಾರ', 'ಬಿಜೆಪಿಯ ಕಳ್ಳರಿಗಾಗಿ ಕೆಲಸ ಮಾಡುತ್ತಿರುವ ರಾಜ್ಯಪಾಲರಿಗೆ ಧಿಕ್ಕಾರ' ಎಂಬ ಪ್ಲೇ ಕಾರ್ಡ್ ಪ್ರದರ್ಶಿಸಿದರು.

ಕೆಲ ಕಾರ್ಯಕರ್ತರು ರಸ್ತೆ ಬದಿಯಲ್ಲಿ ಮಲಗಿ ಆಕ್ರೋಶ ವ್ಯಕ್ತಪಡಿಸಿ, 'ಗೋ ಬ್ಯಾಕ್ ರಾಜ್ಯಪಾಲ' ಘೋಷಣೆ ಕೂಗಿದರು. ಸರ್ಕಾರಿ ಬಸ್‌ಗಳನ್ನು ಕೆಲಕಾಲ ತಡೆ ಹಿಡಿದರು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಯಶಸ್ಸನ್ನು ಸಹಿಸದೆ ವಿಪಕ್ಷಗಳು ಪಿತೂರಿ ನಡೆಸುತ್ತಿವೆ. ರಾಜ್ಯಪಾಲರನ್ನು ಮುಂದಿಟ್ಟುಕೊಂಡು ಬಿಜೆಪಿ ರಾಜಕೀಯ ಮಾಡಲು ಹೊರಟಿರುವುದು ವಿಷಾದನೀಯ. ರಾಜ್ಯಪಾಲರು ಆದೇಶ ಹಿಂಪಡೆಯದಿದ್ದರೆ ಹೋರಾಟ ತೀವ್ರಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕ್ರೀಡೆ ವಿಚಾರದಲ್ಲಿ ಸರ್ಕಾರದ ಧೋರಣೆ ಸರಿಯಿಲ್ಲ

ರಾಜ್ಯ ಮಟ್ಟದ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಚಾಲನೆ

ಮೈಸೂರು,ಆ.17–ಕ್ರೀಡಾ ಕ್ಷೇತ್ರ ಹಾಗೂ ಕ್ರೀಡಾಪಟುಗಳ ಬಗ್ಗೆ ಸರ್ಕಾರದ ಧೋರಣೆ ಸರಿಯಿಲ್ಲ ಎಂದು ಕಾಮನ್ ವೆಲ್ತ್ ಚಿನ್ನದ ಪದಕ ವಿಜೇತರಾದ ಮಾಜಿ ವೇಟ್ ಲಿಫ್ಟರ್ ಪುಷ್ಪರಾಜ್ ಹೆಗ್ಡೆ ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಹಾಗೂ ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆ, ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಡಾ.ಎಪಿಜೆ ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಿರುವ ರಾಜ್ಯ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆಗೆ ಮತ್ತು ಕ್ರೀಡಾಪಟುಗಳಿಗೆ ಸವಲತ್ತು ಕೊಡುವುದು ಬರೀ ಶೂನ್ಯ ಮಾತ್ರ. ಕ್ರೀಡೆ ಬಗ್ಗೆ ಧೋರಣೆ ಸರಿಯಿಲ್ಲ. ಮೂಲಸೌಲಭ್ಯ ಕೊಡುವಲ್ಲಿ ನಾವು ಎಡವಿದ್ದೇವೆ. ಇನ್ನಾದರೂ ಕ್ರೀಡಾ ಕ್ಷೇತ್ರವನ್ನು ದೇಶ ಆದ್ಯತೆ ಮೇರೆಗೆ ತೆಗೆದುಕೊಂಡು ಹೋಗಬೇಕು. ಕ್ರೀಡೆಗೆ ಉತ್ತೇಜನ ಸಿಕ್ಕಿದರೆ ಆರೋಗ್ಯಕ್ಕೆ ಉತ್ತೇಜನ ಸಿಕ್ಕಿದಂತೆ ಎಂದರು.

ಭಾರ ಎತ್ತುವ ಸ್ಪರ್ಧೆ ತುಂಬಾ ಕಠಿಣವಾದ ಕ್ರೀಡೆ. ಅದನ್ನು ಕಷ್ಟಪಟ್ಟು ಪೋಷಿಸಬೇಕು. ಮೈಸೂರು ಸಂಸ್ಥೆಯು ಹೊಸ ಪ್ರತಿಭೆಗಳಿಗೆ ಅವಕಾಶ ನೀಡುವ ಸಲುವಾಗಿ ಇದೇ ಮೊದಲ ಬಾರಿಗೆ ರಾಜ್ಯ ಮಟ್ಟದ ಸ್ಪರ್ಧೆಯನ್ನು ಅತ್ಯಂತ ಶಿಸ್ತುಬದ್ಧವಾಗಿ ಆಯೋಜಿಸುವ ಮೂಲಕ ಉತ್ತಮ ಕೆಲಸ ಮಾಡಿದೆ ಎಂದು ಅವರು ಶ್ಲಾಘಿಸಿದರು.

ಪ್ರತಿಯೊಬ್ಬರೂ ಕೂಡ ಓದಿನ ಜೊತೆಗೆ ಒಂದು ಗಂಟೆ ವ್ಯಾಯಾಮಕ್ಕೆ ಮೀಸಲಿಡಬೇಕು. ಇದರಿಂದ ಆರೋಗ್ಯಕರ ಜೀವನ ಸಾಗಿಸಬಹುದು ಎಂದ ಅವರು, ಭಾರ ಎತ್ತುವ ಸ್ಪರ್ಧೆಗೆ ತರಬೇತುದಾರರ ಕೊರತೆ ಇದೆ. ಬೆಳಗಾವಿ, ಬೆಂಗಳೂರು ಹಾಗೂ ಮಂಗಳೂರಿನಲ್ಲಿ ಮಾತ್ರ ತಲಾ ಒಬ್ಬರು ತರಬೇತುದಾರರಿದ್ದಾರೆ. ಈ ಸಂಖ್ಯೆ ಹೆಚ್ಚಾಗಬೇಕು. ಸಂಬಂಧಪಟ್ಟ ಇಲಾಖೆಯ ಗಮನ ಸೆಳೆಯಬೇಕು ಎಂದು ಹೇಳಿದರು.

ಭಾರತೀಯ ವೇಟ್ ಲಿಫ್ಟಿಂಗ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಶಾಖೆ ಗೌರವ ಕಾರ್ಯದರ್ಶಿ ಎಸ್.ಎಚ್.ಆನಂದೇಗೌಡ ಮಾತನಾಡಿ, ಇಡೀ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಇತಿಹಾಸದಲ್ಲಿ ಉಳಿಯುವ ರೀತಿಯಲ್ಲಿ ಭಾರ ಎತ್ತುವ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಈ ಕ್ರೀಡೆಯನ್ನು ಬೆಳೆಸಬೇಕು. ಕ್ರೀಡೆಯಲ್ಲಿ ಸೋಲು–ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯ ಎಂದರು.

ಜಿಲ್ಲಾ ವೇಟ್ ಲಿಫ್ಟರ್ಸ್ ಸಂಸ್ಥೆಯ ಗೌರವಾಧ್ಯಕ್ಷೆ ಪ್ರೊ.ಕೆ. ಸೌಮ್ಯಾ ಈರಪ್ಪ ಮಾತನಾಡಿ, ಕ್ರೀಡೆಯಲ್ಲಿ ಶಿಸ್ತು ಮತ್ತು ತಾಳ್ಮೆ ಮುಖ್ಯ ಎಂದರು.

ಮಹಾಜನ ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ.ಸಿ. ಕೃಷ್ಣ, ರಾಜ್ಯ ವೇಟ್ ಲಿಫ್ಟರ್ಸ್ ಸಂಸ್ಥೆ ಕಾರ್ಯಾಧ್ಯಕ್ಷೆ ಶ್ಯಾಮಲಾ ಶೆಟ್ಟಿ, ಮಹಾಜ ಶಿಕ್ಷಣ ಸಂಸ್ಥೆಯ ಸಿಇಒ ಡಾ.ಎಸ್.ಆರ್. ರಮೇಶ್, ಎಂಪವರ್ ಟಾಕ್ ಸ್ಥಾಪಕ ಕಿಶೋರ್ ರಾಚಯ್ಯ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವೇಟ್ ಲಿಫ್ಟಿಂಗ್ ತರಬೇತುದಾರ ಸುಬ್ರಹ್ಮಣ್ಯ ಕುಂಬಾಶಿ ಮುಖ್ಯ ಅತಿಥಿಗಳಾಗಿದ್ದರು.



ಮೈಸೂರಿನ ಮಹಾಜನ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಒಳಾಂಗಣ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಕಾಮನ್‌ವೆಲ್ತ್ ಚಿನ್ನದ ಪದಕ ವಿಜೇತರಾದ ಮಾಜಿ ವೇಟ್ ಲಿಫ್ಟರ್ ಪುಷ್ಪರಾಜ್ ಹೆಗ್ಡೆ ಚಾಲನೆ ನೀಡಿದರು. ಎಸ್.ಎಚ್.ಆನಂದೇಗೌಡ, ಡಾ.ಸಿ.ಕೃಷ್ಣ, ಶ್ಯಾಮಲಾಶೆಟ್ಟಿ, ಅಂಶಿ ಪ್ರಸನ್ನಕುಮಾರ್, ಪ್ರೊ.ಕೆ.ಸೌಮ್ಯಾ ಈರಪ್ಪ, ಡಾ.ಜಯಕುಮಾರಿ, ಡಾ.ಎಸ್.ಆರ್.ರಮೇಶ್, ಡಾ.ಸದಾಶಿವ ಭಟ್, ಪ್ರೊ.ಗುರುಮೂರ್ತಿ ಭಟ್, ಸುಭಾಷಿಣಿ ಹರೀಶ್ ಇದ್ದಾರೆ.

ಕಾಡಾನೆ ಹಾವಳಿ ತಡೆಗೆ ವೈಜ್ಞಾನಿಕ ಕಾರ್ಯಯೋಜನೆ

● ಮೂರು ರಾಜ್ಯಗಳ ವಿಚಾರಸಂಕಿರಣದಲ್ಲಿ ನಿರ್ಧಾರ ● ರಾಜ್ಯ ವನ್ಯಜೀವಿ ಮಂಡಳಿ ಸಮಿತಿ ಸದಸ್ಯ ಸಂಕೇತ್ ಪೂವಯ್ಯ ಮಾಹಿತಿ



ಪಾಲಂಗಾಲ ಗ್ರಾಮದಲ್ಲಿ ತೀವ್ರವಾಗಿ ಹೆಚ್ಚುತ್ತಿರುವ ಆನೆ ಹಾವಳಿಯನ್ನು ತಡೆಗಟ್ಟಲು ಸ್ಥಳೀಯ ರೈತರು, ಗ್ರಾಮಸ್ಥರು ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಸಂಕೇತ್ ಪೂವಯ್ಯ ಮಾತನಾಡಿದರು.

ವಿರಾಜಪೇಟೆ, ಆ.17– ಬಹುತೇಕ ಕಾಡಾನೆಗಳು ಅರಣ್ಯದಿಂದ ಹೊರಗೆ ಇರುವುದರಿಂದ ಅದರ ಪರಿಹಾರಕ್ಕೆ ಸುದೀರ್ಘವಾದ ವೈಜ್ಞಾನಿಕ ಕಾರ್ಯಯೋಜನೆ ಕೈಗೊಳ್ಳುವ ನಿಟ್ಟಿನಲ್ಲಿ ಆ.12 ರಂದು ನೆರೆಯ ಮೂರು ರಾಜ್ಯ, ಕೇಂದ್ರ ಸರಕಾರ ಒಡಗೂಡಿ ವಿಚಾರ ಸಂಕಿರಣ ನಡೆಸಿ ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದ್ದಾರೆ ಎಂದು ರಾಜ್ಯ ವನ್ಯಜೀವಿ ಮಂಡಳಿಯ ಸಮಿತಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಹೇಳಿದರು.

ವಿರಾಜಪೇಟೆ ಸಮೀಪದ ಪಾಲಂಗಾಲ ಗ್ರಾಮದಲ್ಲಿ ತೀವ್ರವಾಗಿ ಹೆಚ್ಚುತ್ತಿರುವ ಆನೆ ಹಾವಳಿಯನ್ನು ತಡೆಗಟ್ಟಲು ಸ್ಥಳೀಯ ರೈತರು, ಗ್ರಾಮಸ್ಥರು ಅಲ್ಲಿನ ಶಾಲಾ ಸಭಾಂಗಣದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಆನೆ, ಮಾನವ ಸಂಘರ್ಷ ಹಾಗೂ ಇತರ ವನ್ಯಜೀವಿಗಳ ಸಂಘರ್ಷ ತಪ್ಪಿಸಲು ಆಗತ್ಯವಾಗಿ ಮೂರು ರಾಜ್ಯಗಳ ಸಹಕಾರ ಬೇಕು. ಆನೆ ಕಂದಕ, ಸೋಲಾರ ಬೇಲಿ, ರೈಲ್ವೆ ಹಳಿ ಬೇಲಿಯನ್ನು ಒಟ್ಟಾಗಿ ಮಾಡಿದರೆ ವನ್ಯಜೀವಿಗಳು ಮಾನವನ ವಸತಿ ಕಡೆಗೆ ಬರುವುದನ್ನು ಹಾಗೂ ಪ್ರಾಣ ಹಾನಿ, ಬೆಳೆ ಹಾನಿ ತಡೆಯಲು ಸಹಕಾರಿಯಾಗಬಲ್ಲದು ಎಂದರು.

ಸಭೆಯಲ್ಲಿ ಭಾಗವಹಿಸಿದ್ದ ವಿರಾಜಪೇಟೆ ಅರಣ್ಯ ಉಪ ಸಂರಕ್ಷಣಾಧಿಕಾರಿ (ಡಿಎಫ್ಒ) ಜಗನ್ನಾಥ ಅವರು ಮಾತನಾಡಿ, ತಾಲೂಕಿನಲ್ಲಿ ಅಂದಾಜು 210 ಆನೆಗಳಿದ್ದು ಬಹುತೇಕ ಅರಣ್ಯದಿಂದ ಹೊರಗಿದ್ದು, ನನ್ನ ವ್ಯಾಪ್ತಿಯಲ್ಲಿ 109 ಆನೆಗಳಲ್ಲಿ 104 ಆನೆಗಳು ಅರಣ್ಯದಿಂದ ಹೊರಗಿರುವುದರಿಂದ ಜೀವ ಹಾನಿ, ಬೆಳೆ ಹಾನಿ ಹೆಚ್ಚಿದೆ. ಕಳೆದ ಸಾಲಿನಲ್ಲಿ ಮೂರು ಕೋಟಿ ರೂ. ಪರಿಹಾರ ನೀಡಲಾಗಿದೆ. ದೇಶದಲ್ಲಿಯೇ ಇದು ಹೆಚ್ಚಿನ ಪರಿಹಾರ ಮೊತ್ತವಾಗಿದೆ. ಆನೆ ಹಾವಳಿ ಹೆಚ್ಚಿರುವ ಕಡೆಗಳಲ್ಲಿ ಕೂರ್ಗ್ ಫೌಂಡೇಶನ್ ವತಿಯಿಂದ ಶಾಲಾ ಮಕ್ಕಳಿಗೆ ವಾಹನ ವ್ಯವಸ್ಥೆ ಮಾಡಲಾಗುತ್ತಿದೆ. ಮತ್ತು ಆನೆ ಹಾವಳಿ ಇದ್ದಕಡೆ ಸಿಬ್ಬಂದಿಗಳನ್ನು ಹೆಚ್ಚಿಸುವುದರೊಂದಿಗೆ ರೈಲು ಕಂಬಿಯ ಬೇಲಿ, ಎರಡು ತಂತಿಗಳಿರುವ ಗಟ್ಟಿಸೋಲಾರ್ ಅಳವಡಿಕೆಗೆ ಚಿಂತಿಸಲಾಗಿದೆ. ಇದಕ್ಕೆ ಸ್ಥಳೀಯ ಗ್ರಾಮ ಪಂಚಾಯಿತಿ ಮತ್ತು ರೈತರು ಮುಂದೆ ಬಂದರೆ ಪಾಲಂಗಾಲ ಗ್ರಾಮದ ಭಾಗದಲ್ಲಿ ಮೂರು ಕಿಮೀ ಪ್ರಾಯೋಗಿಕ ಸೋಲಾರ್ ಅಳವಡಿಕೆ ಮಾಡಲು ಇಲಾಖೆ ವತಿಯಿಂದ ಅನುದಾನ ನೀಡಲು ಸಿದ್ಧವಿದೆ. ಬಂಡಿಪುರದಲ್ಲಿ ನಡೆದ ನೆರೆಯ ಮೂರು ರಾಜ್ಯದ ಅರಣ್ಯ ಇಲಾಖೆ ಸಭೆಯಲ್ಲಿ ಹಲವಾರು ನಿರ್ಧಾರ ಕೈಗೊಂಡು ಸಂಘಟಿತವಾಗಿ ಕೆಲಸ ಮಾಡಲು ಜನರಿಗೆ ಸೂಕ್ತ ರಕ್ಷಣೆ ನೀಡಲು ಆನೆಗಳನ್ನು ಓಡಿಸುವ ಕೆಲಸ ಸೇರಿದಂತೆ ರೈತರಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಇಲಾಖೆ ಸ್ಪಂದಿಸಿ ಕೆಲಸ ಮಾಡುತ್ತಿದೆ ಎಂದರು.

ಗ್ರಾಮಸ್ಥರ ಪರವಾಗಿ ಗ್ರಾಪಂ ಸದಸ್ಯರಾದ ಮಾಳೇಟಿರ ಪ್ರಶಾಂತ್ ಪ್ರಾಸ್ತಾವಿಕವಾಗಿ ಮಾತನಾಡಿ, ಇಂದು ಕಾಡಾನೆಗಳ ಹಾವಳಿ ಮಿತಿ ಮೀರಿದೆ. ಕಾರ್ಯಾಚರಣೆ ನಡೆಸಿದರೆ ಅಲ್ಲಿಂದ ಇಲ್ಲಿಗೆ ಓಡಾಡುತ್ತವೆ ಅಷ್ಟೆ, 2 ಜೀವ ಹಾನಿಯಾಗಿದೆ. ಇಲ್ಲಿ ಕೆಲವರು ಅಂಗವೈಕಲ್ಯಕ್ಕೆ ಒಳಗಾಗಿದ್ದಾರೆ. ಜನರು ಮನೆಯಿಂದ ಹೊರ ಬಂದು ತೋಟ ಗದ್ದೆಗಳಿಗೆ ಕೆಲಸಕ್ಕೆ ಹೋಗಲು ಭಯಪಡುತ್ತಾರೆ. ಕಾರ್ಮಿಕರು ಕೆಲಸಕ್ಕೆ ಬರಲು ಹಿಂದೇಟು ಹಾಕುತ್ತಾರೆ. ಆದ್ದರಿಂದ ರಾಜ್ಯ ವನ್ಯಜೀವಿ ಮಂಡಳಿಯ ಸದಸ್ಯ ಸಂಕೇತ್ ಪೂವಯ್ಯ ಅವರು ಕೊಡಗಿನಲ್ಲಿ ಆನೆ ಮಾನವ ಸಂಘರ್ಷದ ಬಗ್ಗೆ ಸ್ಪಷ್ಟ ಅರಿವು ಹೊಂದಿದ್ದು ಜನರಿಗೆ ಸ್ಪಂದಿಸುವ ಕೆಲಸ ಮಾಡಿ ಪರಿಹಾರ ಕ್ರಮ ಅನುಷ್ಠಾನಕ್ಕೆ ತರಬೇಕಾಗಿದೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ಹಿರಿಯರಾದ ಕರಿನೆರವಂಡ ಜಾಲು ಚಂಗಪ್ಪ ವಹಿಸಿದ್ದರು, ಸಭೆಯಲ್ಲಿ ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಶಿವರಾಮ್, ಮುಖಂಡರಾದ ಕರಿನೆರವಂಡ ರಮೇಶ್, ಗ್ರಾಪಂ ಸದಸ್ಯ ಪರಮೇಶ್ವರ, ನೆಡಿಕೆರಿಯಂಡ ಮಹೇಶ್ ಮಾತನಾಡಿ, ಕಾಡಾನೆ ಹಾವಳಿ ಸೇರಿದಂತೆ ಇತ್ತೀಚೆಗೆ ಹುಲಿ ಕಾಣಿಸಿಕೊಂಡು ಜನರಲ್ಲಿ ಅತಂಕ ಮೂಡಿಸಿರುವ ಬಗ್ಗೆ ಪ್ರಸ್ತಾಪಿಸಿದರು. ಸಂವಾದ ಕಾರ್ಯಕ್ರಮದಲ್ಲಿ ಕರಿನೆರವಂಡ ಜಿತನ್ ಉತ್ತಪ್ಪ, ಡ್ಯಾನಿ ಕುಶಾಲಪ್ಪ, ಅಯ್ಯಪ್ಪ, ಭೀಮಯ್ಯ, ಗ್ರಾಪಂ ಸದಸ್ಯೆ ಶೀಲಾ ಹಾಗೂ ಸ್ಥಳೀಯ ಗ್ರಾಮಸ್ಥರು ಭಾಗವಹಿಸಿದ್ದರು.

ಮಡಿಕೇರಿಯಲ್ಲಿ ವೈದ್ಯರ ಪ್ರತಿಭಟನೆ



ಟ್ರೈನಿ ವೈದ್ಯೆಯ ಮೇಲಿನ ಅತ್ಯಾಚಾರ, ಹತ್ಯೆಯನ್ನು ಖಂಡಿಸಿ ಮಡಿಕೇರಿಯಲ್ಲಿ ಭಾರತೀಯ ವೈದ್ಯಕೀಯ ಸಂಘ ಪ್ರತಿಭಟನೆ ನಡೆಸಿತು.

ಮಡಿಕೇರಿ,ಆ.17– ಪಶ್ಚಿಮ ಬಂಗಾಳದ ಕೋಲ್ಕತ್ತಾದಲ್ಲಿರುವ ಆರ್‌ಜಿಕರ್ ವೈದ್ಯಕೀಯ ಆಸ್ಪತ್ರೆಯಲ್ಲಿ ಟ್ರೈನಿ ವೈದ್ಯೆಯ ಮೇಲೆ ನಡೆದ ಅತ್ಯಾಚಾರ, ಹತ್ಯೆ ಹಾಗೂ ಆಸ್ಪತ್ರೆ ಮೇಲೆ ದುಷ್ಕರ್ಮಿಗಳ ದಾಳಿಯನ್ನು ಖಂಡಿಸಿ ಶನಿವಾರ ವೈದ್ಯಕೀಯ ಸೇವೆಗಳನ್ನು ಬಂದ್ ಮಾಡಿ ಮಡಿಕೇರಿಯಲ್ಲಿ ಭಾರತೀಯ ವೈದ್ಯಕೀಯ ಸಂಘ ಪ್ರತಿಭಟನೆ ನಡೆಸಿತು.

ಜಿಲ್ಲಾಸ್ಪತ್ರೆಯ ಮುಂಭಾಗದಲ್ಲಿ ಟ್ರೈನಿ ವೈದ್ಯೆಯ ಮೇಲಿನ ಅತ್ಯಾಚಾರ ಮತ್ತು ಭೀಕರ ಕೊಲೆಯನ್ನು ತೀವ್ರವಾಗಿ ಖಂಡಿಸಿದ ವೈದ್ಯರು, ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸುವುದರೊಂದಿಗೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಮೃತ ವೈದ್ಯೆಯ ಸಾವಿಗೆ ನ್ಯಾಯ ಕೊಡಿಸುವಂತೆ ಒತ್ತಾಯಿಸಲಾಯಿತು. ಮನವಿಯನ್ನು ಜಿಲ್ಲಾಡಳಿತದ ಮೂಲಕ ರಾಜ್ಯ ಮತ್ತು ಕೇಂದ್ರ ಸರಕಾರಕ್ಕೆ ಸಲ್ಲಿಸಲಾಯಿತು.

ಜಿಲ್ಲಾಸ್ಪತ್ರೆ ವೈದ್ಯರಾದ ಡಾ.ಕುಶ್ವಂತ್ ಕೋಳಿಬೈಲು, ಡಾ.ಮೋಹನ್ ಅಪ್ಪಾಜಿ, ಡಾ.ಸುಭಾಷ್ ನಾಣಯ್ಯ, ಆಯುಷ್ ಆಸ್ಪತ್ರೆ ವೈದ್ಯರು, ಪಿ.ಜಿ. ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಶ್ರೀ ಕೋಟೆ ಮಾರಿಯಮ್ಮ ದೇವಾಲಯದಲ್ಲಿ ಕಳವು

ಮಡಿಕೇರಿ,ಆ.17– ನಗರದ ಶಕ್ತಿ ದೇವತೆಗಳಲ್ಲಿ ಒಂದಾಗಿರುವ ಶ್ರೀ ಕೋಟೆ ಮಾರಿಯಮ್ಮ ದೇವಾಲಯದ ಬೀಗ ಕತ್ತರಿಸಿ ಒಳ ನುಗ್ಗಿದ ಕಳ್ಳರು ಹುಂಡಿ ಹಣ ಮತ್ತು ದೇವಿಯ ಮೂರ್ತಿಗೆ ಅಲಂಕಾರ ಮಾಡಲಾಗಿದ್ದ ಚಿನ್ನಾಭರಣಗಳನ್ನು ಕಳವು ಮಾಡಿರುವ ಘಟನೆ ನಡೆದಿದೆ.



ಶ್ರೀ ಕೋಟೆ ಮಾರಿಯಮ್ಮ ದೇವಾಲಯ.

ಶನಿವಾರ ದೇವಾಲಯದ ಅರ್ಚಕರು ಎಂದಿನಂತೆ ಪೂಜೆಗಾಗಿ ದೇವಾಲಯಕ್ಕೆ ಆಗಮಿಸಿದ ಸಂದರ್ಭ ಬಾಗಿಲಿಗೆ ಹಾಕಿದ್ದ ಬೀಗವನ್ನು ಕತ್ತರಿಸಿರುವುದು ಬೆಳಕಿಗೆ ಬಂದಿದೆ. ಗರ್ಭಗುಡಿಗೆ ತೆರಳಿ ದೇವಿಯ ಮೂರ್ತಿಯನ್ನು ಪರಿಶೀಲಿಸಿದ ಸಂದರ್ಭ ದೇವಿಯ ಕಿರೀಟ ಸಹಿತ ಇತರ ಚಿನ್ನಾಭರಣ, ಹುಂಡಿಯನ್ನು ಕೂಡ ಒಡೆದು ಹಣ ಕಳವು ಮಾಡಿರುವುದು ಕಂಡು ಬಂದಿದೆ.

ಈ ಕುರಿತು ನಗರ ಪೊಲೀಸರಿಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದರು. ಕಳ್ಳತನ ಮಾಡುವ ಮುನ್ನ ದೇವಾಲಯದ ಮುಂಭಾಗ ಅಳವಡಿಸಿದ್ದ ಸಿ.ಸಿ.ಕ್ಯಾಮರಾವನ್ನು ಕೂಡ ತಗ್ಗಿಸಿರುವುದು ಇದೇ ಸಂದರ್ಭ ಕಂಡು ಬಂದಿದೆ. ಸ್ಥಳಕ್ಕೆ ಬೆರಳಚ್ಚು ತಜ್ಞರು, ಜಿಲ್ಲಾ ಅಪರಾಧ ಗುಪ್ತದಳ, ನಗರ ಕ್ರೈಂ ವಿಭಾಗ ಸಿಬ್ಬಂದಿ ಹಾಗೂ ವಿಧಿ ವಿಜ್ಞಾನ ತಜ್ಞರು ಆಗಮಿಸಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ಮಡಿಕೇರಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಖಂಡಿಸಿ

ಮಂಡ್ಯ, ಕೆ.ಆರ್.ಪೇಟೆಯಲ್ಲಿ 'ಕೈ' ಕಾರ್ಯಕರ್ತರ ಪ್ರತಿಭಟನೆ





ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಖಂಡಿಸಿ ಮಂಡ್ಯ, ಕೆ.ಆರ್.ಪೇಟೆಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಮಂಡ್ಯ/ಕೆ.ಆರ್.ಪೇಟೆ, ಆ.17– ರಾಜ್ಯಪಾಲರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಷಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಖಂಡಿಸಿ ಮಂಡ್ಯ ಹಾಗೂ ಕೆ.ಆರ್.ಪೇಟೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಸಿದ್ದರಾಮಯ್ಯ ಅಭಿಮಾನಿಗಳ ಬಳಗ ಹಾಗೂ ಕುರುಬರ ಸಂಘದಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮಂಡ್ಯ: ನಗರದ ಸರ್.ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಟೈರ್‌ಗಳಿಗೆ ಬೆಂಕಿ ಹಚ್ಚಿ, ಮಾನವ ಸರಪಳಿ ನಿರ್ಮಿಸಿ ರಾಜ್ಯಪಾಲರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನ್ಯಾಯಾಲಯದಿಂದಲೇ ಛೀಮಾರಿ ಹಾಕಿಸಿಕೊಂಡ ವ್ಯಕ್ತಿಯೊಬ್ಬ ನೀಡಿರುವ ದೂರನ್ನು ಆಧರಿಸಿ, ಸಿಎಂ ಸಿದ್ದರಾಮಯ್ಯ ಅವರಿಗೆ ರಾತ್ರೋರಾತ್ರಿ ನೋಟಿಸ್ ಜಾರಿಗೊಳಿಸಿ ಈಗ ತನಿಖೆಗೆ ಅನುಮತಿ ನೀಡಿರುವ ರಾಜ್ಯಪಾಲರು, ತಾರತಮ್ಯದಿಂದ ಮತ್ತು ಪೂರ್ವಾಗ್ರಹ ಪೀಡಿತರಾಗಿ ಬಿಜೆಪಿ ಏಜೆಂಟರಂತೆ ವರ್ತಿಸುತ್ತಿದ್ದಾರೆ. ರಾಜ್ಯಪಾಲರಾಗಿ ಒಂದು ಕ್ಷಣವೂ ಮುಂದುವರೆಯುವ ನೈತಿಕತೆ ಅವರಿಗಿಲ್ಲ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ, ರಾಜಕೀಯ ಪಕ್ಷಗಳ ಹಿತಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಅವರನ್ನು ರಾಷ್ಟ್ರಪತಿಗಳು ಕೂಡಲೇ ವಜಾಗೊಳಿಸಬೇಕು ಎಂದು ಕಾಂಗ್ರೆಸ್ ಕಾರ್ಯಕರ್ತರು ಒತ್ತಾಯಿಸಿದರು.

ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ ಎಂದ ಅವರು, ಕಾಂಗ್ರೆಸ್‌ನ 136 ಮಂದಿ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಇದ್ದೇವೆ ಎಂದರು.

ಬಿಜೆಪಿ ಹಾಗೂ ಜೆಡಿಎಸ್‌ನವರು ರಾಜ್ಯಪಾಲರ ಕಚೇರಿ ದುರುಪಯೋಗಪಡಿಸಿಕೊಂಡು ಕಾಂಗ್ರೆಸ್ ಸರ್ಕಾರ ಉರುಳಿಸುವ ತಂತ್ರ ಫಲಿಸದು ಎಂದರು. ಆ.19ರಂದು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ರಾಜ್ಯಪಾಲರ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ ಎಂದರು. ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ಜಿಲ್ಲಾ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಹೆಚ್.ನಾಗರಾಜು, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಅಪ್ಪಾಜಿ, ನಗರಸಭಾ ಸದಸ್ಯ ಎಂ.ಎನ್.ಶ್ರೀಧರ್,ರುದ್ರಪ್ಪ, ಸಿ.ಎಂ.ದ್ಯಾವಪ್ಪ, ಮಂಜುನಾಥ್, ಎಲ್.ಸಂದೇಶ್, ವೆಂಕಟೇಶ್, ಸೋಮಶೇಖರ್, ಶಿವಲಿಂಗೇಗೌಡ, ಎನ್.ದೊಡ್ಡಯ್ಯ, ಎಂ.ಕೃಷ್ಣ ಸೇರಿದಂತೆ ಇತರರಿದ್ದರು.

ಕೆ.ಆರ್.ಪೇಟೆ: ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಜಮಾಯಿಸಿದ ತಾಲೂಕು ಕಾಂಗ್ರೆಸ್ ಘಟಕ, ಸಿದ್ದರಾಮಯ್ಯ ಅಭಿಮಾನಿಗಳ ಬಳಗ ಹಾಗೂ ತಾಲೂಕು ಕುರುಬರ ಸಂಘದ ನೂರಾರು ಕಾರ್ಯಕರ್ತರು ಮಾನವ ಸರಪಳಿ ನಿರ್ಮಿಸಿ ರಸ್ತೆತಡೆ ಚಳವಳಿ ನಡೆಸಿ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪ್ರತಿಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಕೆಬಿ.ಚಂದ್ರಶೇಖರ್ ಮಾತನಾಡಿ, ಯಾವುದೇ ಕಪ್ಪುಚುಕ್ಕೆ ಇಲ್ಲದೆ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಸಂಚು ರೂಪಿಸಲಾಗುತ್ತಿದೆ ಎಂದು ಆರೋಪಿಸಿದರು.

ತಾಲೂಕು ಸಿದ್ದರಾಮಯ್ಯ ಅಭಿಮಾನಿ ಬಳಗದ ಸಂಚಾಲಕ ದೇವರಾಜು ಮಾತನಾಡಿದರು. ಪ್ರತಿಭಟನೆಯಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಕೆಪಿಸಿಸಿ ಸದಸ್ಯ ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಪುರುಷೋತ್ತಮ್, ಯುವ ಘಟಕದ ಅಧ್ಯಕ್ಷ ಅಶೋಕ್ ಕುಮಾರ್, ಜಿಪಂ ಮಾಜಿ ಸದಸ್ಯ ಎಲ್.ಕೆ.ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ದಿವಾಕರ್, ಮುಖಂಡರಾದ ರವೀಂದ್ರ ಬಾಬು, ರಂಗಪ್ಪ, ರಾಜಯ್ಯ, ಸಣ್ಣನಿಂಗೇಗೌಡ, ಶ್ಯಾಮಣ್ಣ, ನಂಜಪ್ಪ, ಚಂದ್ರೇಗೌಡ, ಪುರಸಭಾ ಮಾಜಿ ಅಧ್ಯಕ್ಷ ಚಂದ್ರೇಗೌಡ, ಕಾಂತರಾಜ್, ರಮೇಶ್, ಡಿ.ಪ್ರೇಮಕುಮಾರ್ ಇತರರಿದ್ದರು.

ಕಸಾಪ ಸಮ್ಮೇಳನಕ್ಕೆ ಕಾರ್ಯ ಯೋಜನೆ ಸಿದ್ಧಪಡಿಸಿ: ಡಿಸಿ

ಮಂಡ್ಯ, ಆ.17– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆ, ಆಹಾರ ಹಾಗೂ ವಸತಿ ಸಮಿತಿಗಳ ಕೆಲಸ ಪ್ರಮುಖವಾಗಿದ್ದು, ಸಮಿತಿ ಅಧಿಕಾರಿಗಳು ಕಾರ್ಯಯೋಜನೆ ಸಿದ್ಧಪಡಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಶನಿವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ–2024 ಕುರಿತು ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಮುಖ್ಯ ವೇದಿಕೆ, ಸಮಾನಾಂತರ ವೇದಿಕೆ, ಆಸನದ ವ್ಯವಸ್ಥೆ ಸೇರಿದಂತೆ ಹಲವಾರು ನಿರ್ಮಾಣ ಕೆಲಸಗಳಿರುತ್ತದೆ. ಇದರೊಂದಿಗೆ ಟೆಂಡರ್‌ಗಳನ್ನು ಸಹ ಕರೆಯಬೇಕಿದೆ. ಈಗಿನಿಂದಲೇ ಕೆಲಸ ಚುರುಕುಗೊಳಿಸಿ ಎಂದರು.

ಆಹಾರ ಸಮಿತಿಯವರು ಅಂದಾಜು 3 ರಿಂದ 5 ಲಕ್ಷ ಜನರಿಗೆ ಊಟ, ಉಪಾಹಾರದ ವ್ಯವಸ್ಥೆ ಮಾಡಬೇಕು. ಅಂದಾಜು 50 ಕೌಂಟರ್‌ಗಳನ್ನು ತೆರೆಯಬೇಕಿದೆ. 3 ರೀತಿಯ ಊಟದ ಮೆನೂ ಸಿದ್ಧಪಡಿಸಿಕೊಳ್ಳಿ. ಸಚಿವರು ಹಾಗೂ ಶಾಸಕರೊಂದಿಗೆ ಚರ್ಚಿಸಿ 3 ದಿನಗಳ ಕಾಲ ಯಾವ ಮೆನ್ಯೂ ನೀಡಬಹುದು ಎಂದು ಅಂತಿಮವಾಗಿ ತೀರ್ಮಾನಿಸಲಾಗುವುದು ಎಂದರು.

ವಸತಿಗಾಗಿ ಮಂಡ್ಯ ಮದ್ದೂರು, ಶ್ರೀರಂಗಪಟ್ಟಣ ಹಾಗೂ ಮೈಸೂರಿನಲ್ಲಿರುವ ಹೋಟೆಲ್, ವಸತಿಶಾಲೆ, ಸಮುದಾಯ ಭವನ, ಚೌಲ್ಟ್ರಿ, ಶಾಲೆಗಳನ್ನು ಪಟ್ಟಿ ಮಾಡಿಕೊಂಡು ಚರ್ಚಿಸಿ ಈಗಲೇ ಅವುಗಳನ್ನು ಡಿಸೆಂಬರ್ ಮಾಹೆಯಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕಾಯ್ದಿರಿಸುವಂತೆ ಪತ್ರ ಬರೆಯಬೇಕು ಎಂದರು.

ಸಭೆಯಲ್ಲಿ ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಷಿ, ಎಡಿಸಿ ಡಾ.ಹೆಚ್.ಎಲ್.ನಾಗರಾಜು, ಎಸಿ ಶಿವಮೂರ್ತಿ, ಡಿಎಚ್‌ಓ ಡಾ.ಮೋಹನ್, ಕನ್ನಡ ಸಾಹಿತ್ಯ ಸಮ್ಮೇಳನದ ಸಮನ್ವಯ ಸಮಿತಿ ಅಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಕೃಷ್ಣಕುಮಾರ್ ಸೇರಿದಂತೆ ಇನ್ನಿತರರಿದ್ದರು.



87ನೇ ಅಖಿಲ ಭಾರತ ಸಮ್ಮೇಳನ ಆಯೋಜನೆ ಸಂಬಂಧ ಸ್ಯಾಂಜೋ ಆಸ್ಪತ್ರೆ ಬಳಿ ಸ್ಥಳ ಪರಿಶೀಲಿಸಲಾಯಿತು.

ಇಂದು 7ನೇ ಕನ್ನಡ ಅಕ್ಷರ ಜಾತ್ರೆ

ಮಂಡ್ಯ: ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ ಸಂಯುಕ್ತಾಶ್ರಯದಲ್ಲಿ 78ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ 7ನೇ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಆ.18ರಂದು ನಗರದ ಗಾಂಧಿ ಭವನದಲ್ಲಿ ಬೆಳಗ್ಗೆ 10.30ಕ್ಕೆ ನಡೆಯಲಿದೆ.

ಸಮ್ಮೇಳನಾಧ್ಯಕ್ಷರಾಗಿ ಸಾಹಿತಿ ಈ.ಗಂಗೇಗೌಡ ಆಯ್ಕೆಯಾಗಿದ್ದು, ಅಕ್ಷರ ಜಾತ್ರೆಯನ್ನು ಖ್ಯಾತ ವೈದ್ಯ ಡಾ.ಕೆ.ಚಂದ್ರಶೇಖರ್ ಉದ್ಘಾಟಿಸಲಿದ್ದು, ರಾಜ್ಯ ಆರ್‌ಟಿಓ ನೌಕರರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದು, ಸೇವಾರತ್ನ ಪ್ರಶಸ್ತಿಯನ್ನು ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಬನ್ನೂರಾಡಿ ಸಿದ್ದಲಿಂಗಯ್ಯ ಪ್ರದಾನ ಮಾಡಲಿದ್ದು, ಎಎಸ್ಪಿ ಗಂಗಾಧರಸ್ವಾಮಿ ಕನ್ನಡರತ್ನ ಪ್ರಶಸ್ತಿ ವಿತರಿಸಲಿದ್ದಾರೆ.

ಕಸಾಪ ಮಾಜಿ ಜಿಲ್ಲಾಧ್ಯಕ್ಷ ಡಾ.ಹೆಚ್.ಎಸ್.ಮುದ್ದೇಗೌಡ ಸಮ್ಮೇಳನಾಧ್ಯಕ್ಷರಿಗೆ ಗೌರವ ಸಲ್ಲಿಸಲಿದ್ದು, ಉದ್ಯಮಿ ಡಾ.ಶ್ರೀಕಾಂತ್, ಇಂಡಿಯನ್ ಫಿಲ್ಮ್ ಮೇಕರ್ ಅಸೋಸಿಯೇಷನ್ ಅಧ್ಯಕ್ಷ ದಿಲೀಪ್‌ಕುಮಾರ್ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ. ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರಿಗೆ ವಿವಿಧ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ವೇದಿಕೆ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

12 ಜೂಜುಕೋರರ ಬಂಧನ


92 ಸಾವಿರ ನಗದು, ಬೈಕ್, ಮೊಬೈಲ್ ವಶ

ಚಾಮರಾಜನಗರ: ಸಾರ್ವಜನಿಕ ಸ್ಥಳದಲ್ಲಿ ಜೂಜಾಡುತ್ತಿದ್ದ 12 ಜೂಜುಕೋರರನ್ನು ಬಂಧಿಸಿರುವ ಪೊಲೀಸರು 92,600 ರೂ.ನಗದು, ಬೈಕ್, ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.


ನಗರದ ಡಿಎಆರ್ ಕೇಂದ್ರಸ್ಥಾನದ ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಬಿ. ರಂಗಸ್ವಾಮಿ ಅವರು ತಮ್ಮ ಸಿಬ್ಬಂದಿಗಳೊಡನೆ ಆಗಸ್ಟ್ 16ರಂದು ಸಂಜೆ 5.40 ಗಂಟೆ ಸಮಯದಲ್ಲಿ ಬಿಸಲವಾಡಿ ಗ್ರಾಮದ ಭಾಸ್ಕರ್ ಎಂಬುವರ ಕ್ರಷರ್ ಕಡೆಗೆ ಹಾದು ಹೋಗಿರುವ ಮಣ್ಣಿನ ರಸ್ತೆ ಬದಿಯ ಪಾಳುಬಿದ್ದಿರುವ ಸಾರ್ವಜನಿಕ ಸ್ಥಳದಲ್ಲಿ ಜೂಜಾಟ ಆಡುತ್ತಿದ್ದ ಆರೋಪಿಗಳನ್ನು ಬಂಧಿಸಿ, 92,600 ನಗದು ಹಾಗೂ ವಿವಿಧ ಕಂಪನಿಯ 13 ಬೈಕ್‌ಗಳು ಮತ್ತು 13 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚಾ.ನಗರ ತಾಲೂಕಿನ ಮೂಡಲ ಹೊಸಹಳ್ಳಿ ಗ್ರಾಮದ ಮಹದೇವಪ್ಪ, ಮಂಜುನಾಥ, ಬಿಸಲವಾಡಿ ಗ್ರಾಮದ ಕರಿನಾಯಕ, ಪ್ರಕಾಶ್, ಕೋಳಿಪಾಳ್ಯ ಗ್ರಾಮದ ಸಂಪತ್‌ಕುಮಾರ್, ತಮಿಳುನಾಡಿನ ಈರೋಡ್ ಜಿಲ್ಲೆಯ ತಾಳವಾಡಿ ತಾಲೂಕು ಗುಮಟಾಪುರ ಗ್ರಾಮದ ಶಿವಮಲ್ಲು, ತಾಳವಾಡಿ ಹೊಸೂರು ಗ್ರಾಮದ ಆರುಮ್ಗಂ, ಮಹಾರಾಜಪುರ ಗ್ರಾಮದ ಶಿವಣ್ಣ, ದೊಡ್ಡಗಾಜನೂರು ಗ್ರಾಮದ ಚನ್ನಂಜ, ಚಿಕ್ಕಗಾಜನೂರು ಗ್ರಾಮದ ನಂದೀಶ, ಮಲ್ಲನಗುಳಿ ಗ್ರಾಮದ ಮಾದಪ್ಪ, ಪ್ರಭುಸ್ವಾಮಿ ಎಂಬ ಆರೋಪಿಗಳನ್ನು ಬಂಧಿಸಲಾಗಿದ್ದು, ಈ ಪೈಕಿ ಬಿಸಲವಾಡಿ ಗ್ರಾಮದ ಪ್ರಕಾಶ ತಲೆಮರೆಸಿಕೊಂಡಿದ್ದಾನೆ. ಉಳಿದ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.


ಯಳಂದೂರು ಪಪಂಗೆ ನಾಮನಿರ್ದೇಶಿತ ಸದಸ್ಯರ ನೇಮಕ



ಶ್ರೀಕಂಠಸ್ವಾಮಿ



ಲಿಂಗರಾಜಮೂರ್ತಿ



ಮುನಾವರ್‌ಬೇಗ್


ಯಳಂದೂರು, ಆ.17– ಯಳಂದೂರು ಪಟ್ಟಣ ಪಂಚಾಯಿತಿಗೆ ಮೂವರು ನಾಮನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲಾಗಿದೆ. ಪಟ್ಟಣದ ಬಳೇಪೇಟೆ ನಿವಾಸಿ, ಯಳಂದೂರು ತಾಲೂಕು ಸವಿತಾ ಸಮಾಜದ ಅಧ್ಯಕ್ಷ ಪಿ.ಸಿ. ಶ್ರೀಕಂಠಸ್ವಾಮಿ, 9ನೇ ವಾರ್ಡ್ ನಿವಾಸಿ ಲಿಂಗರಾಜಮೂರ್ತಿ ಹಾಗೂ 2ನೇ ವಾರ್ಡ್‌ನ ಕುಂಬಾರಗುಂಡಿ ಬೀದಿಯ ನಿವಾಸಿ ಮುನಾವರ್‌ಬೇಗ್ ಅವರನ್ನು ಯಳಂದೂರು ಪಟ್ಟಣ ಪಂಚಾಯಿತಿ ನಾಮನಿರ್ದೇಶಿತ ಸದಸ್ಯರಾಗಿ ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಟಿ. ಮಂಜುನಾಥ್ ಅವರು ನೇಮಕ ಮಾಡಿ ಆದೇಶಿಸಿದ್ದಾರೆ.

ಈ ವೇಳೆ ಪಪಂ ನಿರ್ದೇಶಿತ ಸದಸ್ಯರಾಗಿ ನೇಮಕಗೊಂಡಿರುವ ಪಿ.ಸಿ. ಶ್ರೀಕಂಠಸ್ವಾಮಿ ಮಾತನಾಡಿ, ಸಮಾಜದಲ್ಲಿ ತೀರ ಹಿಂದುಳಿದ ಸಮುದಾಯಗಳ ಬಗ್ಗೆ ಹೆಚ್ಚು ಕಾಳಜಿ ಹೊಂದಿರುವ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರ ಸಹಕಾರದಿಂದ ಚಿಕ್ಕ ಸಮುದಾಯದವರಾದ ನಾವುಗಳು ಪಪಂ ಸದಸ್ಯರಾಗಲು ಸಾಧ್ಯವಾಯಿತು. ಮುಂದಿನ ದಿನಗಳಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ವಿ.ಚಂದ್ರು ಅವರ ಮಾರ್ಗದರ್ಶನದಲ್ಲಿ ಪಟ್ಟಣದ ಅಭಿವೃದ್ಧಿ ಕೆಲಸವನ್ನು ಮಾಡುತ್ತೇನೆ ಎಂದು ತಿಳಿಸಿದರು.

ಕೋಲ್ಕತ್ತಾದಲ್ಲಿ ಕಿರಿಯ ವೈದ್ಯೆ ಮೇಲೆ ಅತ್ಯಾಚಾರ, ಕೊಲೆ ಖಂಡಿಸಿ

ಚಾ.ನಗರ ಜಿಲ್ಲೆಯಾದ್ಯಂತ ವೈದ್ಯರ ಮುಷ್ಕರ





ಕಿರಿಯ ವೈದ್ಯೆ ಮೇಲೆ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ಚಾಮರಾಜನಗರ ಜಿಲ್ಲಾಸ್ಪತ್ರೆ ಓಪಿಡಿ ಬಂದ್ ಮಾಡಿ ಗಡಿ ಜಿಲ್ಲೆಯಾದ್ಯಂತ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಆ.17– ಕೋಲ್ಕತ್ತಾದಲ್ಲಿ ಕಿರಿಯ ವೈದ್ಯೆ ಮೇಲೆ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ದೇಶಾದ್ಯಂತ ನಡೆಯುತ್ತಿರುವ ವೈದ್ಯರ ಮುಷ್ಕರಕ್ಕೆ ಗಡಿ ಜಿಲ್ಲೆ ಚಾಮರಾಜನಗರದಲ್ಲೂ ಉತ್ತಮ ಬೆಂಬಲ ವ್ಯಕ್ತವಾಯಿತು.

ಚಾಮರಾಜನಗರ ಜಿಲ್ಲಾಸ್ಪತ್ರೆ ಸೇರಿದಂತೆ ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ, ಹನೂರು ವ್ಯಾಪ್ತಿಯ ತಾಲೂಕು ಆಸ್ಪತ್ರೆಗಳು, ಖಾಸಗಿ ಕ್ಲಿನಿಕ್‌ಗಳು ಹಾಗೂ ಗ್ರಾಮೀಣ ಮಟ್ಟದಲ್ಲಿನ ಸಮುದಾಯ ಆರೋಗ್ಯ ಕೇಂದ್ರಗಳು ಸಂಪೂರ್ಣ ಬಂದ್ ಆಗಿತ್ತು. ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಜಿಲ್ಲೆಯ ವೈದ್ಯರು ಆಕ್ರೋಶ ಹೊರಹಾಕಿದರು. ನಗರದ ಜಿಲ್ಲಾಸ್ಪತ್ರೆಯ ಮುಂಭಾಗ ಸಮಾವೇಶಗೊಂಡ ವೈದ್ಯರು ಕೈಗೆ ಕಪ್ಪುಪಟ್ಟಿ ಧರಿಸಿಕೊಂಡು ಪ್ರತಿಭಟನೆ ನಡೆಸಿ, ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿದರು.

ವೈದ್ಯರಿಗೆ ರಕ್ಷಣೆ ಸಿಗುತ್ತಿಲ್ಲ, ಕನಿಷ್ಠ ಗೌರವ ಸಿಗುತ್ತಿಲ್ಲ. ಅತ್ಯಾಚಾರ ಪ್ರಕರಣದಲ್ಲಿ ಪುರಾವೆಗಳನ್ನು ನಾಶಪಡಿಸಲಾಗಿದೆ. ಜೀವವನ್ನು ಉಳಿಸುವ ಕೆಲಸ ಮಾಡುವ ವೈದ್ಯರಿಗೆ ಜೀವ, ಮಾನವನ್ನೇ ಕಳೆಯುವ ಕೆಲಸ ಮಾಡಲಾಗುತ್ತಿದೆ. ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ತನಕ ನಮ್ಮ ಹೋರಾಟ ನಿಲ್ಲಲ್ಲ, ನ್ಯಾಯ ಸಿಗುವ ತನಕ ನಮ್ಮ ಹೋರಾಟ ಮುಂದುವರೆಯುತ್ತದೆ ಎಂದು ವೈದ್ಯರ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ನಂದಕಿಶೋರ್ ಮತ್ತು ಜಿಲ್ಲಾಸ್ಪತ್ರೆ ವೈದ್ಯೆ ಡಾ. ಗೌತಮಿ ಹಾಗೂ ಪ್ರತಿಭಟನಾನಿರತ ವೈದ್ಯರು ತಿಳಿಸಿದರು.

ರೋಗಿಗಳ ಪರದಾಟ: ಬೆಳಗ್ಗೆಯಿಂದಲೇ ವೈದ್ಯರು ಆಸ್ಪತ್ರೆಯ ಕರ್ತವ್ಯಕ್ಕೆ ಹಾಜರಾಗದ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಹೊರರೋಗಿಗಳ ವಿಭಾಗಗಳು ಕಾರ್ಯನಿರ್ವಹಿಸಲಿಲ್ಲ. ಆದರೆ, ತುರ್ತು ಸೇವೆಗಳು ಮಾತ್ರ ಲಭ್ಯವಿದ್ದವು. ವೈದ್ಯರ ಮುಷ್ಕರದ ಮಾಹಿತಿ ಇಲ್ಲದೇ ಜಿಲ್ಲಾಸ್ಪತ್ರೆ ಸೇರಿದಂತೆ ತಾಲೂಕು ಆಸ್ಪತ್ರೆಗಳಿಗೆ ಚಿಕಿತ್ಸೆ ಪಡೆಯಲು ದೂರದ ಊರುಗಳಿಂದ ಬಂದಿದ್ದ ರೋಗಿಗಳು ಚಿಕಿತ್ಸೆ ಪಡೆಯಲು ಪರದಾಡುವಂತಾಯಿತು. ಗಂಟೆಗಟ್ಟಲೆ ಆಸ್ಪತ್ರೆಗಳಲ್ಲಿ ಕಾದರು ಕೂಡ ವೈದ್ಯರ ಲಭ್ಯತೆ ಇಲ್ಲದೇ ರೋಗಿಗಳು ವಾಪಸ್ ಮನೆಗೆ ಹೋದರು.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳ ರೆಸಿಡೆಂಟ್ ಡಾಕ್ಟರ್ ಅಸೋಸಿಯೇಷನ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು. ಜಿಲ್ಲಾಸ್ಪತ್ರೆ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಹತ್ಯೆ ಮಾಡಿದವರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ತೋಳಿಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಡಾ.ನಂದಕಿಶೋರ್ ಮಾತನಾಡಿ, ಕೋಲ್ಕತ್ತಾದ ಆರ್.ಜಿ.ಕರ್ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಕರ್ತವ್ಯನಿರತ ಯುವ ವೈದ್ಯೆ ಮೇಲೆ ನಡೆದ ಅತ್ಯಾಚಾರ ಹಾಗೂ ಕೊಲೆ ಖಂಡನೀಯ. ಈ ಪ್ರಕರಣವನ್ನು ಸಿಬಿಐಗೆ ವಹಿಸಿದ ಬಳಿಕ 1ರಿಂದ 3 ಸಾವಿರ ಜನರ ಗುಂಪು ಆಸ್ಪತ್ರೆಗೆ ದಾಳಿ ಮಾಡಿ ಪುರಾವೆಗಳನ್ನು ನಾಶಪಡಿಸಿದೆ. ಕೂಡಲೇ ನ್ಯಾಯಾಲಯವು ಹತ್ಯೆಯಾಗಿರುವ ಹೆಣ್ಣುಮಗಳಿಗೆ ಸೂಕ್ತ ನ್ಯಾಯ ಕೊಡಿಸಬೇಕು. ಅತ್ಯಾಚಾರ ಹಾಗೂ ಹತ್ಯೆ ಮಾಡಿದವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಿಮ್ಸ್ ಬೋಧನಾ ಆಸ್ಪತ್ರೆಯ ಡೀನ್ ಡಾ.ಮಂಜುನಾಥ್ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಡಾ.ಮಾರುತಿ, ಡಾ.ಶಿವಸ್ವಾಮಿ, ಅಸೋಸಿಯೇಷನ್‌ನ ಅಧ್ಯಕ್ಷ ಡಾ.ಪವನ್, ಉಪಾಧ್ಯಕ್ಷೆ ಡಾ.ಸ್ನೇಹ, ಪ್ರಧಾನ ಕಾರ್ಯದರ್ಶಿ ಡಾ.ತರುಣ್, ಖಜಾಂಚಿ ಡಾ.ದಿವ್ಯ, ಡಾ.ಸಂಜು, ಡಾ.ಅಭಿಷೇಕ್‌ಕುಮಾರ್, ಡಾ.ಅರ್ಚನಾ, ಡಾ.ಸೈಯದ್ ಜಾಸ್ಮೀನ್, ಡಾ.ಸಮೃದ್ಧಿ, ಡಾ.ಅತುಲ್, ಡಾ.ತೇಜಸ್, ಡಾ.ಕೀರ್ತಿ, ಡಾ.ವಿನುತಾ, ಡಾ.ತನ್ಮಯ್ ಇತರರು ಭಾಗವಹಿಸಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ,ಆ.17– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಚಂದಕವಾಡಿ ಉಪ–ಕೇಂದ್ರದಿಂದ ನಿರ್ಮಿಸುವ ಸಂಬಂಧ ಆ.18ರಂದು ಸಂತೇಮರಳ್ಳಿ ಉಪ–ವಿಭಾಗದ ಕಾಗಲವಾಡಿ ಶಾಖಾ ವ್ಯಾಪ್ತಿಯಲ್ಲಿ ಅಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಚಂದಕವಾಡಿ, ದಡದಹಳ್ಳಿ, ಅರಳೀಪುರ, ಹೆಬ್ಬಸೂರು, ನಾಗವಳ್ಳಿ, ನಲ್ಲೂರು, ಹೊಂಡರಬಾಳು ಹಾಗೂ ಕುಂಟಗುಡಿ ಕಾಲೋನಿ, ಅಯ್ಯನಪುರ, ಮಲ್ಲದೇವನಹಳ್ಳಿ, ಕೊಕ್ಕನಹಳ್ಳಿ, ಸರಗೂರು, ಸರಗೂರುಮೋಳೆ, ಮಲ್ಲುಪುರ, ಕಾಗಲವಾಡಿ, ಕರಿಯನಕಟ್ಟೆ, ಕೋಟಂಬಳ್ಳಿ ಹಾಗೂ ಲಿಂಗರಾಜಪುರ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್‌ನ ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಸದಾ ಅಕ್ಷರ-ಅನ್ನದಾಸೋಹ ಮಂತ್ರ ಜಪಿಸಿದ

ಡಾ.ರಾಜೇಂದ್ರ ಶ್ರೀಗಳು

'ರಾಜಗುರುತಿಲಕ' ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 109ನೇ ಜಯಂತಿ ಮಹೋತ್ಸವದ (25.8.2024) ಅಂಗವಾಗಿ ಈ ವಿಶೇಷ ಲೇಖನ



"ಸಂಸ್ಥೆ ನಿಮ್ಮದು, ನಮ್ಮದಲ್ಲ. ನೀವೆಲ್ಲ ಕಷ್ಟಪಟ್ಟು ಕೆಲಸ ಮಾಡಿದರೆ ಮಾತ್ರ ಸಂಸ್ಥೆಗೆ ಒಳ್ಳೆಯ ಹೆಸರು ಬರುತ್ತದೆ. ಆಗ ನಾವು ನೆಮ್ಮದಿಯಿಂದ ಇರಬಹುದು ಎಂದು ಹಿತಾಮೃತ ನುಡಿಯುತ್ತಿದ್ದರು. ಶ್ರೀಗಳ ಆ ಒಂದು ಮಾತು ಇಂದಿಗೂ ಶಿಷ್ಯರ ಕಿವಿಯಲ್ಲಿ ಸದಾ ಮೊಳಗುತ್ತಿರುತ್ತದೆ.



ಎಸ್.ಎಂ.ಜಂಬುಕೇಶ್ವರ್
ಖ್ಯಾತ ಛಾಯಾಗ್ರಾಹಕರು
ಮೊ.9886623490



ಜಯಚಾಮರಾಜೇಂದ್ರ ಒಡೆಯರ್ ಅವರೊಂದಿಗೆ ಡಾ.ರಾಜೇಂದ್ರ ಶ್ರೀಗಳು.

1916 ಆಗಸ್ಟ್ 29ರಂದು ಶ್ರೀ ಮಲ್ಲಿಕಾರ್ಜುನಸ್ವಾಮಿ ಮತ್ತು ಶ್ರೀಮತಿ ಮರಮ್ಮಣ್ಣಿಯವರ ಮಗನಾಗಿ ಸುತ್ತೂರಲ್ಲಿ ರಾಜೇಂದ್ರನ ಜನನ. ಅಲ್ಲಿಯೇ, ಆತನ ಬಾಲ್ಯ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಣ. ಅವನಿಗೆ ಶ್ರೀಮಠದ ಹಿರಿಯ ಗುರುಗಳಾದ ಪಟ್ಟದ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳ ಮಾರ್ಗದರ್ಶನ. ದಿನಕಳೆದಂತೆ ರಾಜೇಂದ್ರನನ್ನು ಶ್ರೀಗಳ ಆಶಯದಂತೆ ಶ್ರೀಮಠದ ಪೂಜ್ಯರಿಗೆ ಒಪ್ಪಿಸಲು ತಂದೆ-ತಾಯಿ ತೀರ್ಮಾನಿಸಿದರು. ಹಿರಿಯ ಶ್ರೀಗಳೂ ಅತ್ಯಂತ ಸಂತೋಷದಿಂದ ರಾಜೇಂದ್ರನನ್ನು ಸ್ವೀಕರಿಸಿದರು. ಗುರುಗಳ ಕೃಪೆಗೆ ಪಾತ್ರನಾದ ರಾಜೇಂದ್ರನಿಗೆ ಶ್ರೀಗಳೇ ತಂದೆ-ತಾಯಿ ಮತ್ತು ಗುರುವಾದರು.

ರಾಜೇಂದ್ರನಿಗಿದ್ದ ಹೊಸ ಹೊಸ ವಿಚಾರಗಳ ಗ್ರಹಿಕೆ, ಆಲೋಚನಾಶಕ್ತಿ ಇತರರಿಗೆ ಅದ್ಭುತವೆನಿಸಿತು. ಹೆಚ್ಚಿನ ವಿದ್ಯಾಭ್ಯಾಸಕ್ಕೆ ರಾಜೇಂದ್ರನ ಮೈಸೂರಿಗೆ ಕಳಿಸಿದರೆ ಅಲ್ಲಿ ಸಂಸ್ಕೃತ, ವೇದ, ಆಗಮ ಮುಂತಾದ ಧಾರ್ಮಿಕ ವಿದ್ವತ್, ಸಾಹಿತ್ಯ ಓದಲು ಅವಕಾಶವಾಗುತ್ತದೆ. ರಾಜೇಂದ್ರನ ಜ್ಞಾನವೂ ಹೆಚ್ಚಾಗುತ್ತದೆ ಎಂದು ನಿರ್ಧರಿಸಿ, ಮೈಸೂರಿಗೆ ಹೋಗುವುದಕ್ಕೂ ಮೊದಲು ರಾಜೇಂದ್ರನಿಗೆ ಸನ್ಯಾಸ ದೀಕ್ಷೆ ಕೊಟ್ಟು ಮುಂದಿನ ಪೀಠಾಧಿಪತಿಗಳೆಂದು ನಿಯೋಜಿಸಿದರೆ ಒಳ್ಳೆಯದು ಎಂದು ತೀರ್ಮಾನಿಸಿದರು. ಹಿರಿಯ ಶ್ರೀಗಳ ಚಿಂತನೆಯಂತೆ 1928ರಲ್ಲಿ ರಾಜೇಂದ್ರರಿಗೆ ಶ್ರೀಮಠದ ಪಟ್ಟಾಧಿಕಾರ ಮಹೋತ್ಸವ ತಂದೆ-ತಾಯಿ, ವಿವಿಧ ಮಠಾಧಿಪತಿಗಳ ಸಮ್ಮುಖದಲ್ಲಿ ನಡೆದೇ ಹೋಯಿತು. ಆಗಿನ್ನೂ ರಾಜೇಂದ್ರಗೆ ಹುಡುಗಾಟದ ವಯಸ್ಸು. ಆದರೂ ಸುತ್ತೂರು ಮಠದ 23ನೇ ಜಗದ್ಗುರುಗಳಾಗಿ ಶ್ರೀ ಶಿವರಾತ್ರಿ ರಾಜೇಂದ್ರರು 12ನೇ ವಯಸ್ಸಿಗೆ ನಿಯೋಜಿತಗೊಂಡರು. ನಂತರ ಅವರನ್ನು ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಕಳುಹಿಸಲಾಯಿತು. ಅವರಿಗೆ ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳು ಜೊತೆಯಾದರು. ಅಂದು ಜೊತೆಯಾದ ಶ್ರೀ ಶಿವಪ್ರಭುಸ್ವಾಮಿಗಳು ಜೀವನ ಪರ್ಯಂತ ಶ್ರೀಗಳ ಒಡನಾಡಿಗಳಾಗಿ, ಸಂಸ್ಥೆಯ ಬೆಳವಣಿಗೆಗೆ ಪರಿಶ್ರಮಿಸಿದರು. ಇಲ್ಲಿ ರಾಜೇಂದ್ರ ಶ್ರೀಗಳಿಗೆ ಸಂಸ್ಕೃತ, ಜೊತೆಗೆ ಕನ್ನಡ ಮತ್ತು ಇಂಗ್ಲಿಷ್ ಕಲಿಯುವ ವ್ಯವಸ್ಥೆಯನ್ನು ಹಿರಿಯ ಗುರುಗಳೇ ಮುಂದೆ ನಿಂತು ಮಾಡಿ ವಾಸಕ್ಕೆಂದು ಮನೆಯನ್ನು ಮಾಡಿಕೊಟ್ಟರು. ಅವರ ಉನ್ನತ ವಿದ್ಯಾಭ್ಯಾಸ ಮುಗಿಸಿ ಮರಳಿ ಸುತ್ತೂರಿಗೆ ಬರಬೇಕೆಂಬುದು ಹಿರಿಯ ಶ್ರೀಗಳ ಆಶಯವಾಗಿತ್ತು. ಆದರೆ ಮೈಸೂರಿನಲ್ಲಿ ವಿದ್ಯಾಭ್ಯಾಸದ ಸಂದರ್ಭದಲ್ಲಿ ಕಂಡ ಕೆಲವು ದೃಶ್ಯಗಳು ಅವರ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮ ಬೀರಿದವು. ಸಿದ್ಧಾರ್ಥ ಬುದ್ಧನಾದಂತೆ ರಾಜೇಂದ್ರರು, ಕೆಲವು ದೃಶ್ಯಗಳಿಂದ ಪ್ರಭಾವಿತರಾಗಿ ಅನ್ನ-ಅಕ್ಷರ ದಾಸೋಹ ದೀಕ್ಷೆ ಪಡೆದು, ಕೊನೆಗೆ ದೇಶ-ವಿದೇಶಗಳಲ್ಲಿ ಜೆಎಸ್ಎಸ್ ಸಂಸ್ಥೆಗಳು ಬೆಳೆಯಲು ಕಾರಣೀಭೂತರಾದರು.

ತಾವು ಮಾತ್ರ ವಿದ್ಯಾವಂತರಾದರೆ ಅದು ಸ್ವಾರ್ಥವಾಗುತ್ತದೆ. ಮಠಾಧಿಪತಿಗಳಾಗಿ ಸಕಲರ ಉದ್ಧಾರಕ್ಕಾಗಿ ಶ್ರಮಿಸುವವರೇ ನಿಜವಾದ ಗುರುಗಳು ಎಂದು ಅಚಲ ವಿಶ್ವಾಸದಿಂದ ಗ್ರಾಮೀಣ ಪ್ರದೇಶದ ಜನರು ಶೈಕ್ಷಣಿಕವಾಗಿ ಮುಂದುವರಿಯದ ಹೊರತು ದೇಶ ಉದ್ಧಾರವಾಗದು ಎಂದು ಯೋಚಿಸಿದ ರಾಜೇಂದ್ರ ಶ್ರೀಗಳು ಗ್ರಾಮೀಣ ಪ್ರದೇಶದ ಬಡವರು, ದೀನದಲಿತರನ್ನು ವಿದ್ಯಾವಂತರನ್ನಾಗಿ ಮಾಡಲು ಪಣತೊಟ್ಟರು.

ರಾಜೇಂದ್ರ ಶ್ರೀಗಳ ವಿದ್ಯಾಭ್ಯಾಸ ಹಾಗೂ ಊಟೋಪಚಾರಕ್ಕೆ ಹಿರಿಯ ಶ್ರೀಗಳು ಪ್ರತಿ ತಿಂಗಳು ದವಸ-ಧಾನ್ಯ ಕಳುಹಿಸುತ್ತಾ ನೆರವಾದರು. ರಾಜೇಂದ್ರ ಶ್ರೀಗಳು ಸಂಸ್ಕೃತ ಉನ್ನತ ವ್ಯಾಸಂಗಕ್ಕಾಗಿ ಹಿರಿಯ ಶ್ರೀಗಳಿಗೆ ಹೇಳದೆ ಕಾಶಿಗೆ ಹೋದರು. ಅಲ್ಲಿ ಸಂಸ್ಕೃತ ಪಂಡಿತರಾಗಿದ್ದ ಶ್ರೀ ಗೌರಿಶಂಕರ ಸ್ವಾಮಿಗಳ ಬಳಿ ವಿಷಯ ಪ್ರಸ್ತಾಪಿಸುತ್ತಿದ್ದ ಹಾಗೆ, ನೀವು ಅಲ್ಲಿಯೇ ಇದ್ದು ಮಾಡುವ ಕೆಲಸ ಬಹಳಷ್ಟಿದೆ. ತಕ್ಷಣ ಇಲ್ಲಿಂದ ಹೊರಟುಬಿಡಿ ಎಂದು ತಿಳಿಸಿದಾಗ ಒಲ್ಲದ ಮನಸ್ಸಿನಿಂದಲೇ ಮರಳಿ ಮೈಸೂರಿಗೆ ಬಂದರು.

ಇಲ್ಲಿಗೆ ಬಂದ ಮೇಲೆ ಗ್ರಾಮೀಣ ಪ್ರದೇಶದಿಂದ ಬಂದು ವಿದ್ಯಾಭ್ಯಾಸಕ್ಕಾಗಿ ಕಷ್ಟಪಡುತ್ತಿದ್ದ ಸಹಸ್ರಾರು ವಿದ್ಯಾರ್ಥಿಗಳ ಕಡೆ ಅವರ ಗಮನ ಹರಿಯುತ್ತದೆ. ತಮಗೆ ಪ್ರತಿ ತಿಂಗಳೂ ಕಳುಹಿಸುತ್ತಿದ್ದ ದವಸ-ಧಾನ್ಯಗಳಲ್ಲೇ ಸ್ವಲ್ಪ ಭಾಗ ಉಳಿಸಿ ನಾಲ್ಕಾರು ಬಡ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮಾಡಿಕೊಟ್ಟರು. ಅಂದು ಬರೀ ನಾಲ್ಕಾರು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಪ್ರಸಾದ ವ್ಯವಸ್ಥೆ ಮೈಸೂರಲ್ಲಿ ವಿದ್ಯಾರ್ಥಿನಿಲಯವಾಗಿ ಮಾರ್ಪಾಡಾಯಿತು. ಈ ವಿಷಯ ಹಿರಿಯ ಶ್ರೀಗಳಿಗೆ ಗೊತ್ತಾಯಿತು. ಅವರೂ ಇವರ ಕಾರ್ಯ ಮೆಚ್ಚಿ ಪ್ರೋತ್ಸಾಹಿಸಿದರು. ವರ್ಷಗಳು ಕಳೆದಂತೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ಮೈಸೂರು ಜಿಲ್ಲೆಯಲ್ಲಿ ಹತ್ತಾರು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದರು. ಇಂತಹ ವಿದ್ಯಾರ್ಥಿನಿಲಯಗಳಲ್ಲೇ ಆರ್ಥಿಕ ತಜ್ಞ ಡಾ.ಡಿ.ಎಂ. ನಂಜುಂಡಪ್ಪ, ಡಾ. ಯು.ಆರ್. ಅನಂತಮೂರ್ತಿ, 'ರಾಷ್ಟ್ರಕವಿ' ಡಾ.ಜಿ.ಎಸ್.ಶಿವರುದ್ರಪ್ಪ, ಡಿ.ಎಂ. ಸಿದ್ದಯ್ಯ, ಡಾ.ಚಿದಾನಂದ ಮೂರ್ತಿ, ಎಸ್.ಎಂ. ಜಂಬುಕೇಶ್ವರ ಮೊದಲ್ಗೊಂಡು ಸಾವಿರಾರು ಜನ ಅಕ್ಷರ- ಅನ್ನ ಫಲಾನುಭವಿಗಳಾದರು.

ಸೇವಾಮನೋಭಾವ ಹೆಮ್ಮರವಾಗುತ್ತಾ ಹೋದಂತೆ ಮುಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಶಾಲಾ-ಕಾಲೇಜುಗಳನ್ನು ಪ್ರಾರಂಭಿಸಿದರು. ಆ ನಿಟ್ಟಿನಲ್ಲಿ ಸಾಗುತ್ತಿದ್ದಂತೆ 1954ರಲ್ಲಿ ಅಧಿಕೃತವಾಗಿ 'ಜೆಎಸ್ಎಸ್ ಮಹಾವಿದ್ಯಾಪೀಠ'ದ ಹೆಸರಿನಲ್ಲಿ ಕೇಂದ್ರ ಕಚೇರಿಯನ್ನು ಮೈಸೂರಿನಲ್ಲಿ ಪ್ರಾರಂಭಿಸುವರು. ಈ ವಿದ್ಯಾಪೀಠದ ಆಶ್ರಯದಲ್ಲಿ ಅಂದು 150ಕ್ಕೂ ಹೆಚ್ಚು ಶಾಲಾ-ಕಾಲೇಜುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡತೊಡಗಿದರು. ಜೊತೆಗೆ ಸಾವಿರಾರು ಜನರಿಗೆ ಉದ್ಯೋಗ ಒದಗಿಸಿಕೊಟ್ಟರು. 1960ರಲ್ಲಿ ಇಂಜಿನಿಯರಿಂಗ್ ಕಾಲೇಜು, 1970ರಲ್ಲಿ ಸಂಸ್ಥೆಯ ನೌಕರರಿಗಾಗಿ ಆರಂಭವಾದ ಹೆಲ್ತ್ ಸೆಂಟರ್ ಬೃಹದಾಕಾರವಾಗಿ ಬೆಳೆದು ಇಂದು ದೊಡ್ಡ ಆಸ್ಪತ್ರೆಯಾಗಿದೆ. ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಸಂಸ್ಥೆಯ ನೌಕರರಿಗಾಗಿ ಶಿಕ್ಷಕರ ತರಬೇತಿ ಕೇಂದ್ರಗಳು, ಐಟಿಐ, ಪಾಲಿಟೆಕ್ನಿಕ್‌ಗಳು ಹೆಚ್ಚಾಗಿ ಗ್ರಾಮೀಣ ಪ್ರದೇಶದ ಜನರಿಗೆ ಸೇವೆ ಸಲ್ಲಿಸುತ್ತಿವೆ. ಫಾರ್ಮಸಿ ಕಾಲೇಜು, ವೈದ್ಯಕೀಯ ಕಾಲೇಜುಗಳು, ಅಲ್ಲದೆ ಶರಣ ಸಾಹಿತ್ಯ ಪರಿಷತ್ತು, ಸಂಗೀತಸಭಾ ಕಲಾಮಂಟಪ ಮೊದಲ್ಗೊಂಡು ನೂರಾರು ಅಂಗ ಸಂಸ್ಥೆಗಳು ಪೂಜ್ಯರಿಂದ ಸ್ಥಾಪನೆಯಾಗಿವೆ. ಗ್ರಾಮಾಂತರ ಪ್ರದೇಶದ ಭಕ್ತರು ಮಗ ಚೆನ್ನಾಗಿ ಓದುತ್ತಾನೆ ಬುದ್ಧಿ, ಕಾಲೇಜಿಗೆ ಸೇರಿಸುವಾಸೆ. ಆದರೆ ಫೀಜ್ ಕಟ್ಟಲು ಹಣವಿಲ್ಲ ಎಂದವರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಪ್ರಸಾದದ ವ್ಯವಸ್ಥೆ ಮಾಡಿದ್ದರು. ಕೆಲವರಿಗೆ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಸೀಟುಗಳನ್ನು ಸಹ ಉಚಿತವಾಗಿ ಕೊಟ್ಟಿರುವ ಉದಾಹರಣೆಗಳಿವೆ.

ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ರವರು ಶ್ರೀಗಳವರ ಸೇವಾ ಕಾರ್ಯವನ್ನು ಕಂಡು 'ರಾಜಗುರುತಿಲಕ' ಬಿರುದು ನೀಡಿ ಗೌರವಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯವು ಪೂಜ್ಯರಿಗೆ 'ಗೌರವ ಡಾಕ್ಟರೇಟ್' ನೀಡಿತ್ತು.

ವಾರಭವಿಷ್ಯ



18.08.2024 ರಿಂದ 24.8.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಸಿಂಹ, ಚಂದ್ರ-ಮಕರ, ಕುಂಭ, ಮೀನ, ಮೇಷ, ಕುಜ-ವೃಷಭ, ಬುಧ-ಸಿಂಹ, ಗುರು-ವೃಷಭ, ಶುಕ್ರ-ಸಿಂಹ, ಶನಿ-ಕುಂಭ, ರಾಹು-ಮೀನ, ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಈ ವಾರ ಶ್ರೀಮತಿಯೊಂದಿಗೆ ಹೆಚ್ಚು ಶಾಪಿಂಗ್ ಮಾಡುವ ಸಾಧ್ಯತೆ ಇದೆ. ಸಾಮಾಜಿಕ ವಿಚಾರಗಳಲ್ಲಿ ಸಕಾರಾತ್ಮಕವಾಗಿ ನಡೆದು ಆರ್ಥಿಕ ಲಾಭವನ್ನು ಹೊಂದುವಿರಿ. ಗ್ರಹಗಳು ಶುಭ ಸ್ಥಾನದಲ್ಲಿ ಇರುವುದರಿಂದ ಅದೃಷ್ಟ ಖುಲಾಯಿಸಲಿದೆ. ಮನೆಯಲ್ಲಿ ಪೂಜೆ, ಪುನಸ್ಕಾರಗಳು ನಡೆಯುವುದು. ವಾರದ ಕಡೆಗೆ ನೀವು ಸಾಲ ನೀಡಿದರೆ ಮರಳಿ ಪಡೆಯುವ ಸಾಧ್ಯತೆ ಕಡಿಮೆ ಇರುತ್ತದೆ.

ಶ್ರೀ ಸುಬ್ರಮಣ್ಯೇಶ್ವರಸ್ವಾಮಿ ದರ್ಶನ. ಶುಭ ಸಂಖ್ಯೆ-5

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಉಂಟಾಗುವ ಹಣಕಾಸಿನ ಬಿಕ್ಕಟ್ಟು ಹಿತೈಷಿಗಳ ಸಹಾಯಹಸ್ತ ದೊರೆತು ನಿವಾರಣೆ ಆಗುವುದು. ಪ್ರೀತಿ-ಪ್ರೇಮ ವಿಷಯಗಳು ಮಾನಸಿಕ ಉದ್ವೇಗಕ್ಕೆ ಕಾರಣವಾಗುವುದು. ಕಪಟಿಗಳ ಜಾಲಕ್ಕೆ ಬೀಳುವ ಸಾಧ್ಯತೆ ಇರುವ ಕಾರಣ ನಿಮ್ಮ ವೈಯಕ್ತಿಕ ರಹಸ್ಯಗಳನ್ನು ಹಂಚಿಕೊಳ್ಳುವಿರಿ. ವಾರದ ಕಡೆಗೆ ನಿಮ್ಮ ಪರಿಶ್ರಮದ ಸಾಧನೆಗೆ ಸೂಕ್ತ ಪ್ರತಿಫಲ ದೊರೆತು ಹರ್ಷವೆನಿಸುವುದು. ಸದ್ಗುರುಗಳ ಆಶೀರ್ವಾದ ದೊರಕುವುದು.

ಶ್ರೀ ದೇವೀಸ್ತುತಿ. ಶುಭ ಸಂಖ್ಯೆ-4

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದ ಆದಿಗೆ ಖರ್ಚುಗಳು ಕೈ ಮೀರಿದರೂ ಹಣದ ಕೊರತೆ ಕಾಡದು. ಹಳೆಯ ಗುರುಗಳ ಭೇಟಿಯಿಂದ ಧನ್ಯತಾ ಭಾವ. ಕುಟುಂಬ ಸಮಸ್ಯೆಗಳು ಬಂದಾಗ 'ಮೌನ ಬಂಗಾರ ಮಾತು ಬೆಳ್ಳಿ' ಎಂಬ ತತ್ವ ಅನುಸರಿಸಿ. ನಿಮ್ಮ ಯೋಜಿತ ಕಾರ್ಯ ಕಲಾಪಗಳು ಸಾಕಾರವಾಗಲು ಇನ್ನಷ್ಟು ಪರಿಶ್ರಮದ ಅಗತ್ಯವಿದೆ. ಸರ್ಕಾರಿ ಕಚೇರಿ ಕೆಲಸಗಳು ತ್ವರಿತವಾಗಿ ನಡೆಯುವುದು. ವಿನಾಕಾರಣ ಓಡಾಟಗಳನ್ನು ನಿಲ್ಲಿಸಿ.

ಸಂಕಷ್ಟಕರ ಗಣಪತಿ ಪೂಜೆ. ಶುಭ ಸಂಖ್ಯೆ-1

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ಗುರುಬಲದ ಪ್ರಭಾವದಿಂದ ಸದ್ಯದ ಆರ್ಥಿಕ ಒತ್ತಡಗಳಿಂದ ಹೊರ ಬರುವಿರಿ. ಆತ್ಮೀಯರೊಬ್ಬರ ಭೇಟಿಯಿಂದ ಮನಸ್ಸು ಪ್ರಫುಲ್ಲವಾಗಿರುವುದು. ಅಷ್ಟಮ ಸ್ಥಾನದಲ್ಲಿ ಶನಿದೇವನಿದ್ದು 'ಕಷ್ಟ ಪಟ್ಟರೆ ಫಲವುಂಟು' ಸಹೋದರರಲ್ಲಿ ಒಮ್ಮತ ಮೂಡಿ ಆಸ್ತಿ ವಿಚಾರಗಳು ಶುಭಾಂತ್ಯವನ್ನು ಹೊಂದುವುದು. ವೃಥಾ ತಿರುಗಾಟಗಳನ್ನು ಅವಾಯ್ಡ್ ಮಾಡಿ. ಪ್ರಯಾಣ ಮಧ್ಯೆ ಆಗುವ ತೊಂದರೆಗಳಿಂದ ಪಾರಾಗಿ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-7

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವ್ಯಾಪಾರ ವ್ಯವಹಾರಗಳಲ್ಲಿ ಮುನ್ನಡೆ ಹಾಗೂ ಉತ್ತಮ ಧನಲಾಭವಾಗಲಿದೆ. ಸರಾಫ್, ಜ್ಯೂಯಲರಿ ವ್ಯಾಪಾರಿಗಳಿಗೆ ವ್ಯಾಪಾರ ದ್ವಿಗುಣವಾಗಲಿದೆ. ಮನೆಯಲ್ಲಿ ಶುಭ ಸಮಾರಂಭಗಳು ಉಂಟಾಗುವುದರ ಜೊತೆಗೆ ನೀವು ಶುಭ ಸಮಾರಂಭಗಳಿಗೆ ಪ್ರಯಾಣ ಮಾಡುವಿರಿ. ಪ್ರೀತಿ-ಪ್ರಣಯ ವಿಷಯಗಳು ವಿವಾಹದತ್ತ ಮುಖ ಮಾಡಬಹುದು. ಮುಖ್ಯ ವಿಷಯಗಳನ್ನೂ ಶ್ರೀಮತಿಯೊಂದಿಗೆ ಚರ್ಚಿಸಿ ನಿರ್ಧರಿಸಿ.

ಶ್ರೀ ಗುರುರಾಯರ ಉಪಾಸನೆ. ಶುಭ ಸಂಖ್ಯೆ-9

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದ ಆದಿಗೆ ಹಣಕಾಸಿನ ವಿಚಾರದಲ್ಲಿ ಕೊಂಚ ಚೇತರಿಕೆ ಕಂಡು ಬರುವುದು. ಮಾನಸಿಕ ಅಸ್ಥಿರತೆ, ದೇಹಾಯಾಸಗಳು ಕಡಿಮೆ ಆಗುವುದು. ಯಾರೊಡನೆಯೂ ಅನವಶ್ಯಕ ವಾಗ್ವಾದಗಳು, ದಾಯಾದಿ ಕಲಹಗಳು ಉಂಟಾದೀತು. ಗುರು ಹಿರಿಯರ ಮಧ್ಯಸ್ಥಿಕೆಯಿಂದ ಶಮನವಾಗುವುದು. ಕೃಷಿಕರಿಗೆ, ಕೃಷಿ ಉಪಕರಣ ಮಾರಾಟಗಾರರಿಗೆ ಇದು ಸಂತಸ ತರುವ ವಾರವಾಗಿದೆ.

ಶ್ರೀ ವಿಷ್ಣುವಿಗೆ ತುಳಸಿ ಸಮರ್ಪಣೆ. ಶುಭ ಸಂಖ್ಯೆ-2

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸಪ್ತಾಹದ ಆದಿಗೆ ಆರ್ಥಿಕ ಒತ್ತಡಗಳು ಹೆಚ್ಚಾಗುವ ಸಾಧ್ಯತೆ ಇದೆ. ಹಾಸಿಗೆ ಇದ್ದಷ್ಟು ಕಾಲು ಚಾಚಿ. ಸಾಲ ಮಾಡುವ ಅಗತ್ಯ ಉಂಟಾಗಬಹುದು. ಇದರ ನಡುವೆಯೇ ಮನೆಗೆ ನೆಂಟರಿಷ್ಟರ ಆಗಮನದಿಂದ ಸಂತಸವೂ ಖರ್ಚು-ವೆಚ್ಚಗಳು ಉಂಟಾಗುವುದು. ಅಷ್ಟಮ ಗುರು ಕಾರಣ ನಿಮ್ಮ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮಗಳು ಉಂಟಾಗಬಹುದು.

ಶ್ರೀ ಚಾಮುಂಡೇಶ್ವರಿ ಅರ್ಚನೆ. ಶುಭ ಸಂಖ್ಯೆ-8

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದಾರಂಭ ಲವಲವಿಕೆಯಿಂದ ಕೂಡಿರುತ್ತದೆ. ಬಂಧು-ಬಾಂಧವರೊಡನೆ ಸ್ನೇಹಕೂಟಗಳಲ್ಲಿ ಭಾಗವಹಿಸುವಿರಿ. ನಿಮ್ಮ ಕಾರ್ಯಕ್ಷಮತೆಯಲ್ಲಿ ವೃದ್ಧಿಯಾಗುವುದು. ಹಳೆಯ ಸಾಲಗಳು ವಸೂಲಾಗಬಹುದು. ಚತುರ್ಥ ಶನಿಯ ಕಾರಣ ಎಲ್ಲರಲ್ಲೂ ವಿರೋಧವನ್ನು ಎದುರಿಸಬೇಕಾದೀತು. ಕಾನೂನು ವಿಚಾರಗಳಲ್ಲಿ ಹಿನ್ನಡೆ ಉಂಟಾದೀತು. ವೇಗದ ವಾಹನ ಚಾಲನೆ ಖಂಡಿತ ಬೇಡಿ.

ಶ್ರೀ ಲಕ್ಷ್ಮೀನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-3.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ನಿಮಗಿದು ಮಿಶ್ರ ಫಲದಾಯಕ ವಾರ. ವಾರದ ಆದಿಗೆ ವಸ್ತ್ರಾಭರಣ ಪ್ರಾಪ್ತಿ. ಉತ್ತಮ ಭೋಜನ, ಸ್ತ್ರೀ ಸ್ನೇಹ ಕೇಟರಿಂಗ್ ಉದ್ಯಮದವರಿಗೆ ಗುಡ್ ಲಕ್. ವಾರ ಸಾಗಿದಂತೆ ಉದ್ಯೋಗ ಸ್ಥಳದಲ್ಲಿ ಹೆಚ್ಚಿದ ಒತ್ತಡ. ಸ್ವಪ್ರತಿಷ್ಠೆಯ ಕಾರಣ ಕುಟುಂಬ ಸದಸ್ಯರೊಂದಿಗೆ ಭಿನ್ನಾಭಿಪ್ರಾಯಗಳು. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿಲ್ಲ. ಆರೋಗ್ಯವೂ ಅಷ್ಟಕ್ಕಷ್ಟೆ, ವೈದ್ಯರ ದರ್ಶನ.

ಶ್ರೀ ದತ್ತರಾಜ ಆರಾಧನೆ. ಶುಭ ಸಂಖ್ಯೆ-4

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಪೂರ್ವ ಪುಣ್ಯ ಸ್ಥಾನದಲ್ಲಿರುವ ಬೃಹಸ್ಪತಿಯು ನಿಮ್ಮ ಆಶೋತ್ತರಗಳಿಗೆ ಪೂರಕ ಬಲವನ್ನು ನೀಡುತ್ತಲಿದ್ದಾರೆ. ಇದರ ಫಲವಾಗಿ ಧನ, ಧಾನ್ಯ ಸಮೃದ್ಧಿ ಹಾಗೂ ಲಾಭ. ವಿದ್ವಜ್ಜನರ ಸಮಾಗಮ ಒದಗುವುದು. ಜ್ಯೋತಿಷಿಗಳ ಭೇಟಿ ಮಾರ್ಗದರ್ಶಕವಾಗಲಿದೆ. ನೆರೆ ಹೊರೆಯಲ್ಲಿ ಜಗಳಗಳು ಆಗದಂತೆ ನಿಮ್ಮ ವರ್ತನೆ ಇರಲಿ. ಮಾತೃಶ್ರೀಯವರ ಆಶೀರ್ವಾದದಿಂದ ನಿಮ್ಮ ಭಾಗ್ಯೋದಯವಾಗಲಿದೆ.

ಶ್ರೀ ಲಿಂಗಾಷ್ಟಕ ಪಠಿಸಿ. ಶುಭ ಸಂಖ್ಯೆ-7

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಆದಿಗೆ ನೂತನ ವಸ್ತ್ರ, ಭೋಜನ, ಶಯನಾದಿ ಸುಖ. ಹಣ ಸಂಚಯವಾದಾಗ ಋಣಮುಕ್ತರಾಗಲು ಪ್ರಯತ್ನಿಸಿ. ಮಕ್ಕಳು ಮನಸ್ಸಿಗೆ ಬೇಸರ ತರುವರು. ಕೋಪ ತೊರೆದರೆ ಮನೆಯಲ್ಲಿ ಶಾಂತಿಗೆ ಭೂಮಿಕೆ. ರಾಜಕೀಯ ರಂಗದವರೇ ಅಪವಾದ, ಕಾನೂನು ಸಂಕಟಗಳು ಜೊತೆಗೆ ಪ್ರಯತ್ನಗಳಲ್ಲಿ ವಿಘ್ನಗಳು ಉಂಟಾಗಿ ಮನಸ್ಸಿಗೆ ಬೇಸರ. ಆರೋಗ್ಯದ ಬಗ್ಗೆ ಅಲಕ್ಷ್ಯ ಮಾಡಬೇಡಿ.

ಶ್ರೀ ಮೃತ್ಯುಂಜಯ ಮಂತ್ರ ಜಪಿಸಿ. ಶುಭ ಸಂಖ್ಯೆ-3

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಪೂರ್ವಾರ್ಧಕ್ಕೆ ಸುಖ, ಸಂತೋಷ, ಕೈಗೊಂಡ ಯೋಜನೆಗಳಲ್ಲಿ ಜಯಶೀಲರಾಗುವಿರಿ. ಜವಳಿ, ರೆಡಿಮೇಡ್ ಬಟ್ಟೆ ವ್ಯಾಪಾರಿಗಳಿಗೆ ಅನೇಕ ವಿಧದಲ್ಲಿ ಧನಾಗಮವಾಗುವುದು. ನಿಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಖ್ಯಾತಿಯನ್ನು ಹೊಂದುವಿರಿ. ಸೃಜನಶೀಲ ಲೇಖಕರಿಗೆ ಪ್ರಶಸ್ತಿಯ ಗರಿಮೆ ಉಂಟು. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ಸಿಹಿ ಸುದ್ದಿ ಬರುವುದು. ಆಸ್ತಿ ವಿಭಾಗ ವಿವಾದಗಳು ಬಗೆಹರಿಯದು.

ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-2

ಮಕ್ಕಳ ಚಿತ್ರಕಥೆ

'ನನ್ನ ಪ್ರಶ್ನೆಗಳಿಗೆ ಉತ್ತರಿಸದಿದ್ದರೆ, ಬೆತ್ತದ ರುಚಿ ತೋರಿಸುವೆ...!'

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಅದೊಂದು ಶಾಲೆ, ಅಧ್ಯಾಪಕರು ಪಾಠ ಮಾಡುತ್ತಿದ್ದರು. ಅವರು ಮಕ್ಕಳಿಗೆ ಪಾಠದ ಸಾರಾಂಶ ಬರೆಸುತ್ತಿದ್ದರು. ಆಗ ಹೊರಗಡೆ ಬೇರೆ ಮಕ್ಕಳ ಗಲಾಟೆ ನಡೆಯುತ್ತಿತ್ತು. ಹೀಗಾಗಿ ಮಕ್ಕಳಿಗೆ ಬರೆದುಕೊಳ್ಳಲು ಕಷ್ಟವಾಗುತ್ತಿತ್ತು.




ಅಧ್ಯಾಪಕರು ಒಮ್ಮೆ ವಿದ್ಯಾರ್ಥಿಗಳ ಮೇಲೆ ವಕ್ರದೃಷ್ಟಿ ಹರಿಸಿದರು. ಒಬ್ಬ ವಿದ್ಯಾರ್ಥಿ ಮಾತ್ರ ಏನೂ ಬರೆದುಕೊಳ್ಳುತ್ತಿರಲಿಲ್ಲ. ಅವನು ತನ್ನ ನೋಟ್ ಪುಸ್ತಕವನ್ನೇ ತೆರೆದಿರಲಿಲ್ಲ. ಅಧ್ಯಾಪಕರಿಗೆ ರೇಗಿತು. "ನೀನೇಕೆ ಬರೆದುಕೊಳ್ಳುತ್ತಿಲ್ಲಾ...?" ಎಂದು ಗದರಿಸಿದರು.



"ಗುರುಗಳೆ, ನೀವು ಕಲಿಸಿದ್ದು ನನಗೆ ನೆನಪಿದೆ... ನಾನೇಕೆ ಬರೆದುಕೊಳ್ಳಲಿ...?" ಎಂದ ಆ ವಿದ್ಯಾರ್ಥಿ. ಅಧ್ಯಾಪಕರು ಮತ್ತೊಮ್ಮೆ "ಸರಿ ಹೇಳು, ನನ್ನ ಪ್ರಶ್ನೆಗಳಿಗೆ ಉತ್ತರಿಸದಿದ್ದರೆ ಬೆತ್ತದ ರುಚಿ ತೋರಿಸುವೆ...! ಎಂದು ಎಚ್ಚರಿಸಿದರು. ಆಗ ವಿದ್ಯಾರ್ಥಿ ಎದ್ದುನಿಂತು ಇಡೀ ಪಾಠವನ್ನೇ ಒಪ್ಪಿಸಿಬಿಟ್ಟ



ಮತ್ತೊಂದು ದಿನ ಅದೇ ಅಧ್ಯಾಪಕರು ಪಾಠ ಬೋಧಿಸುವಾಗ ಅವರ ದೃಷ್ಟಿ ನೆಲದ ಮೇಲೆ ಬಿತ್ತು. ಅಲ್ಲಿ ಕಡಲೇಕಾಯಿ ಸಿಪ್ಪೆಗಳು ಬಿದ್ದಿದ್ದವು. ಅಧ್ಯಾಪಕರಿಗೆ ರೇಗಿತು. ಅವರು ಎಲ್ಲಾ ವಿದ್ಯಾರ್ಥಿಗಳಿಗೂ ಒಂದು ಕಡೆಯಿಂದ ಬೆತ್ತದಿಂದ ಹೊಡೆಯುತ್ತಾ ಬಂದರು.



ಗುರುಗಳು ಆ ವಿದ್ಯಾರ್ಥಿಯ ಬಳಿ ಬಂದಾಗ ಅವನು ಹೇಳಿದ, "ಗುರುಗಳೆ, ನನಗೆ ಹೊಡೆಯಬೇಡಿ..ನಾನು ತಪ್ಪೇ ಮಾಡದಿರುವಾಗ....ನಾನೇಕೆ ಶಿಕ್ಷೆ ಅನುಭವಿಸಲಿ" ಎಂದ. ಆತ ಆ ಕೆಲಸ ಮಾಡಿಲ್ಲವೆಂದು ಅವನ ಸ್ಪಷ್ಟ ಮಾತಿನಿಂದಲೇ ಗುರುಗಳಿಗೆ ತಿಳಿಯಿತು.



ಇದು ಲೋಕಮಾನ್ಯ ತಿಲಕರ ಬಾಲ್ಯ ಜೀವನಕ್ಕೆ ಸಂಬಂಧಿಸಿದ ಘಟನೆಯಾಗಿದೆ. ಅವರು ಬಾಲ್ಯದಿಂದಲೇ ನಿರ್ಭೀತರಾಗಿದ್ದರು. ಅವರು ಮುಂದೆ "ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು...!" ಎಂಬ ಘೋಷಣೆಯನ್ನು ದೇಶಕ್ಕೆ ನೀಡಿದರು. ಇದರೊಂದಿಗೆ ದೇಶ ಸೇವೆಯಲ್ಲಿ ತಮ್ಮನ್ನೂ ತೊಡಗಿಸಿಕೊಂಡರು.

ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ವಿರೋಧಿಸಿ

ನಾಳೆ ತಿ.ನರಸೀಪುರ ಬಂದ್‌ಗೆ ಕರೆ

● ರಾಜ್ಯಪಾಲರ ವಿರುದ್ಧ ದಿಢೀರ್ ಪ್ರತಿಭಟನೆ ನಡೆಸಿದ 'ಕೈ' ಮುಖಂಡರು ● ಮಾನವ ಸರಪಳಿ ನಿರ್ಮಿಸಿ, ಆಕ್ರೋಶ



ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ, ಆ.17– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ಕ್ರಮ ವಿರೋಧಿಸಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಆ.19ರಂದು ತಿ.ನರಸೀಪುರ ಬಂದ್‌ಗೆ ಕರೆ ನೀಡಿದ್ದಾರೆ.

ಮುಖ್ಯಮಂತ್ರಿಗಳ ವಿರುದ್ಧ ರಾಜ್ಯಪಾಲರು ಪ್ರಾಸಿ ಕ್ಯೂಷನ್‌ಗೆ ಅನುಮತಿ ನೀಡಿರುವ ಆದೇಶ ತಿಳಿಯುತ್ತಿದ್ದಂತೆ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸಭೆ ನಡೆಸಿದ ಕಾರ್ಯಕರ್ತರು ಹಾಗೂ ಮುಖಂಡರು ಆ.19ರಂದು ತಿ.ನರಸೀಪುರ ಬಂದ್‌ಗೆ ನಿರ್ಧಾರ ಕೈಗೊಂಡು ಬಳಿಕ ವಿದ್ಯೋದಯ ಕಾಲೇಜು ವೃತ್ತಕ್ಕೆ ತೆರಳಿ ರಾಜ್ಯಪಾಲರ ವಿರುದ್ಧ ಧಿಕ್ಕಾರ ಕೂಗಿ ಪ್ರತಿಭಟನಾ ಮೆರವಣಿಗೆ ಪ್ರಾರಂಭಿಸಿದರು. ನಂತರ ಪಟ್ಟಣದ ಖಾಸಗಿ ಬಸ್ ನಿಲ್ದಾಣ ವೃತ್ತದಲ್ಲಿ ಜಮಾಯಿಸಿ ಮಾನವ ಸರಪಳಿ ನಿರ್ಮಿಸಿ, ಪ್ರತಿಭಟನೆ ನಡೆಸಿ ರಾಜ್ಯಪಾಲರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು ಮಾತನಾಡಿ, ಹನುಮ ಜಯಂತಿ ಕ್ಷುಲ್ಲಕ ಜಗಳ, ಯುವಕರಿಬ್ಬರ ಕಿತ್ತಾಟ ಹಾಗೂ ಅಲ್ಪಸಂಖ್ಯಾತರ ಉದ್ಯೋಗಕ್ಕೆ ಧರ್ಮ ರಾಜಕಾರಣ ಬೆರೆಸುವ ಬಿಜೆಪಿಗೆ ಅಧಿಕಾರದ ದಾಹ ಹೆಚ್ಚಾಗಿದ್ದು, ರಾಜ್ಯದ ಆಡಳಿತ ರೂಢ ಸರ್ಕಾರ ಕೆಡವಲು, ಸಿಎಂ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಪದಚ್ಯುತಿಗೊಳಿಸಲು ವಾಮ ಮಾರ್ಗವನ್ನು ಜೆಡಿಎಸ್ ಜೊತೆಗೂಡಿ ಅನುಸರಿಸುತ್ತಿದೆ. 6 ಕೋಟಿ ಜನರಿಂದ ಆಯ್ಕೆಯಾಗಿರುವ ಸಿಎಂ ವಿರುದ್ಧ ಕಾನೂನು ನಿಯಮಗಳನ್ನು ಉಲ್ಲಂಘಿಸಿ ಪ್ರಾಸಿಕ್ಯೂಷನ್‌ಗೆ ಅನುಮತಿಸಿರುವ ರಾಜ್ಯಪಾಲರ ವಿರುದ್ಧ ಹೋರಾಟವನ್ನು ಎಲ್ಲರೂ ಮಾಡಬೇಕಿದೆ. ಸೋಮವಾರದ ನರಸೀಪುರ ಬಂದ್‌ಗೆ ಎಲ್ಲಾ ವರ್ಗದ ಜನರು, ವ್ಯಾಪಾರಸ್ಥರು ಹಾಗೂ ಸಂಘಟನೆಗಳ ಬೆಂಬಲ ಪಡೆಯೋಣ. ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆ ಅನುಮತಿ ಪಡೆದು ಇಂದಿನಿಂದಲೇ ರೂಪರೇಷೆ ಆರಂಭಿಸೋಣ ಎಂದರು.


ಕುರುಬರ ಸಂಘದ ಮಾಜಿ ಅಧ್ಯಕ್ಷ ಟಿ.ಎಸ್.ಪ್ರಶಾಂತ ಬಾಬು ಮಾತನಾಡಿ, ಎಲ್ಲಾ ವರ್ಗದ ಬಡವರು ಮತ್ತು ಹಿಂದುಳಿದ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಕಾಳಜಿ ಹೊಂದಿರುವ ಸಿಎಂ ಸಿದ್ದರಾಮಯ್ಯ ಅವರ ಮೇಲಿನ ಪ್ರಾಸಿಕ್ಯೂಷನ್ ಅನುಮತಿ ಖಂಡನಾರ್ಹ. ಸಾಮಾಜಿಕ ಕಳಕಳಿಯುಳ್ಳ ನಾಯಕರ ಮೇಲಿನ ದೌರ್ಜನವನ್ನು ಎಲ್ಲರೂ ಒಗ್ಗೂಡಿ ವಿರೋಧಿಸಬೇಕು. ರಾಜ್ಯಪಾಲರ ನಡೆ ವಿರೋಧಿಸಿ ಕರೆ ನೀಡಿರುವ ನರಸೀಪುರ ಬಂದ್‌ಗೆ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

> ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಪಾತ್ರವಿಲ್ಲದಿದ್ದರೂ, ರಾಜಕೀಯವಾಗಿ ಹಣಿಯಲು ಕೇಂದ್ರ ಬಿಜೆಪಿ ಸರ್ಕಾರ ಅಧಿಕಾರ ದುರ್ಬಳಕೆ ಮಾಡಿಕೊಂಡು ರಾಜ್ಯಪಾಲರನ್ನು ಕೈಗೊಂಬೆಯಂತೆ ಆಡಿಸುತ್ತಿದೆ. ಸಂವಿಧಾನ ಮತ್ತು ರಾಜ್ಯಾಂಗದ ಕಾವಲುಗಾರರಾಗಬೇಕಿದ್ದ ರಾಜ್ಯಪಾಲರು ವಿಪಕ್ಷಗಳ ಮಾತಿಗೆ ಮಣಿದು ಆಡಳಿತರೂಢ ಸರ್ಕಾರದ ವಿರುದ್ಧ ಕಾನೂನು ನಿಯಮಗಳ ಅರಿವಿಲ್ಲದೆ ಪ್ರಾಸಿಕ್ಯೂಷನ್ ಅನುಮತಿ ಕೊಟ್ಟಿದ್ದಾರೆ.
> -ಕೆ.ಮಹದೇವ, ಜಿಪಂ ಮಾಜಿ ಸದಸ್ಯ

ಎಪಿಎಂಸಿ ಮಾಜಿ ಸದಸ್ಯ ಉಕ್ಕಲಗೆರೆ ಬಸವಣ್ಣ ಸೇರಿದಂತೆ ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾಜಿ ಸದಸ್ಯರಾದ ಎಂ.ರಮೇಶ್ ಹಾಗೂ ಕುಕ್ಕೂರು ಗಣೇಶ್ ಮಾತನಾಡಿದರು.

ತಾಪಂ ಮಾಜಿ ಅಧ್ಯಕ್ಷ ಹ್ಯಾಕನೂರು ಎನ್.ಉಮೇಶ್, ತುಂಬಲ ಅಂದಾನಿ, ಎಸ್‌ಸಿ/ಎಸ್‌ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಹೊಸಪುರ ಕೆ.ಮಲ್ಲು, ಕುರುಬರ ಸಂಘದ ಅಧ್ಯಕ್ಷ ಮನ್ನಹುಂಡಿ ಮಹೇಶ್, ಕಾರ್ಯದರ್ಶಿ ಬಸವರಾಜು, ವರುಣ ಬ್ಲಾಕ್ ಅಧ್ಯಕ್ಷ ಕೆ.ಮುದ್ದೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷರಾದ ಎನ್.ಅನಿಲ್ ಕುಮಾರ್, ಎನ್.ಮಹೇಶ್, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕಿ ಲತಾ ಜಗದೀಶ್, ಪುರಸಭೆ ಮಾಜಿ ಅಧ್ಯಕ್ಷರಾದ ಎನ್. ಸೋಮಣ್ಣ, ಟಿ.ಎಂ. ನಂಜುಂಡಸ್ವಾಮಿ, ಸದಸ್ಯರಾದ ಸಿ.ಪ್ರಕಾಶ್, ಬಾದಾಮಿ ಮಂಜು, ಎಲ್.ಮಂಜುನಾಥ್, ಮಾಜಿ ಸದಸ್ಯ ಎಂ.ರಾಘವೇಂದ್ರ, ಪುಳ್ಳಾರಿ ಮಾದೇಶ್, ಟೌನ್ ಅಧ್ಯಕ್ಷ ಅಂದಾನಿ ಗೌಡ, ವರುಣಾ ಕ್ಷೇತ್ರದ ಮಹಿಳಾ ಅಧ್ಯಕ್ಷ ಕುಪ್ಯ ಭಾಗ್ಯಮ್ಮ, ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಜೆ.ಅನುಪ್‌ಗೌಡ, ಮುಖಂಡರಾದ ಗುರುಮಲ್ಲಪ್ಪ, ತೇಜಸ್, ಕೆ.ಗಣೇಶ್ ಎಂ.ಮಿಥುನ್, ಅಮಾಸೆಗೌಡ, ಕೇತಹಳ್ಳಿ ಸಿದ್ದಶೆಟ್ಟಿ ಸೇರಿದಂತೆ ಇನ್ನಿತರರಿದ್ದರು.

ನಾಳೆಯಿಂದ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ



ಹುಣಸೂರು, ಆ.17– ನಗರದ ಕಲ್ಕುಣಿಕೆ ರಾಘವೇಂದ್ರಸ್ವಾಮಿ ಮಠದಲ್ಲಿ ಶ್ರೀರಾಘವೇಂದ್ರಸ್ವಾಮಿಗಳ 353ನೇ ಆರಾಧನಾ ಮಹೋತ್ಸವ ಆ.19ರಿಂದ 22ರವರೆಗೆ ನಡೆಯಲಿದೆ ಎಂದು ಮಠದ ಅಧ್ಯಕ್ಷ ಕೆ.ಪಿ.ಕೃಷ್ಣಚಾರಿ ತಿಳಿಸಿದ್ದಾರೆ.

ಆ.19ರಂದು ಬೆಳಗ್ಗೆ 9 ಗಂಟೆಗೆ ಸಾಮೂಹಿಕ ಶ್ರೀಸತ್ಯನಾರಾಯಣ ಪೂಜಾ ಮಹೋತ್ಸವ, ಸಂಜೆ ಧ್ವಜಾರೋಹಣ, ಗೋಪೂಜೆ, ಧನ್ಯವಾದ ಪೂಜೆ ಹಾಗೂ ಶಾಖೋತ್ಸವ ಮತ್ತು ಪ್ರಸಾದ ವಿನಿಯೋಗ ನಡೆಯಲಿದೆ. ಆ.20ರಂದು ಶ್ರೀಗುರು ಸಾರ್ವಭೌಮ ರಾಘವೇಂದ್ರ ಸ್ವಾಮಿಗಳ ಪೂರ್ವರಾಧನೆ, ಸಂಜೆ ಹುಣಸೂರು ಶ್ರೀರಾಮ ಭಜನಾ ಮಂಡಳಿ ವತಿಯಿಂದ ಭಕ್ತಿಗೀತೆ ಕಾರ್ಯಕ್ರಮ.

ಆ.21ರಂದು ಮಧ್ಯಾರಾಧನೆ ಪ್ರಯುಕ್ತ ಮಧ್ಯಾಹ್ನ 12 ಗಂಟೆಗೆ ಅನ್ನ ದಾಸೋಹ ವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಮತ್ತು ಶ್ರೀ ಲಕ್ಷ್ಮಿ ವಿವಿದ್ದೋದ್ದೇಶ ಸಹಕಾರ ಸಂಘದ ಅಧ್ಯಕ್ಷೆ ಲಲಿತಾ ಜಿ.ಟಿ.ದೇವೇಗೌಡ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್, ಎಂಎಲ್‌ಸಿ ಹೆಚ್. ವಿಶ್ವನಾಥ್, ಡಾ.ತಿಮ್ಮಯ್ಯ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಮುಖಂಡರಾದ ಡಾ.ಪುಷ್ಪ, ನಿವೃತ್ತ ಭೂ ಸ್ವಾಧೀನಾಧಿಕಾರಿ ಮಲ್ಲೇಶಯ್ಯ, ಎಸಿ ವೆಂಕಟ ರಾಜು, ತಹಸೀಲ್ದಾರ್ ಡಾ.ಮಂಜುನಾಥ್, ಡಿವೈಎಸ್‌ಪಿ ಗೋಪಾಲ ಕೃಷ್ಣ, ನಗರಸಭಾ ಆಯುಕ್ತೆ ಮಾನಸ, ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ಡಾ.ವೃಷಭೇಂದ್ರ ಡಾ.ಲೋಹಿತ್, ಡಾ.ಭರತ್ ಕುಮಾರ್ ಭಾಗವಹಿಸಲಿದ್ದಾರೆ.

ಆ.22ರಂದು ಉತ್ತರಾಧನೆ ಪ್ರಯುಕ್ತ ಬೆಳಗ್ಗೆ 9 ಗಂಟೆಗೆ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿದೆ. ಸಂಜೆ 5 ಗಂಟೆಗೆ ಶ್ರೀಸಾಯಿ ಭಜನಾ ಮಂಡಳಿಯಿಂದ ಭಕ್ತಿ ಗೀತೆಗಳ ಕಾರ್ಯಕ್ರಮ, ಸಂಜೆ 7 ರಿಂದ 8ರವರೆಗೆ ವೇಷಭೂಷಣ ಸ್ಪರ್ಧೆ ನಡೆಯಲಿದ್ದು, ಸಂಜೆ 8.30ಕ್ಕೆ ಬಹುಮಾನ ವಿತರಣೆ ಕಾರ್ಯಕ್ರಮ ಬಳಿಕ ನಂತರ ಪ್ರಸಾದ ವಿನಿಯೋಗ ನಡೆಯಲಿದೆ ಎಂದರು.

ಇಂದು ವಿದ್ಯುತ್ ವ್ಯತ್ಯಯ

ನಂಜನಗೂಡು, ಆ.17– ತಾಲೂಕಿನ ಹುಲ್ಲಹಳ್ಳಿ, ಹುರಾ ಮತ್ತು ಚಂದ್ರವಾಡಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ 2ನೇ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಆ.18ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಹುಲ್ಲಹಳ್ಳಿ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಯ ಹುಲ್ಲಹಳ್ಳಿ, ಶಿರಮಳ್ಳಿ, ಹಗಿನವಾಳು, ರಾಂಪುರ, ಹೆಗ್ಗಡಹಳ್ಳಿ, ಹುಸ್ಕೂರು, ಕುರಿಹುಂಡಿ, ಯಾಲಹಳ್ಳಿ, ವಳಗೆರೆ, ಹರತಲೆ, ಮೊಬ್ಬಳ್ಳಿ, ಗಾಂಧಿಗ್ರಾಮ, ಬ್ಯಾಳಾರು, ಮಾದಾಪುರ, ಕಾರ್ಯ, ಹುರಾ ವಿತರಣಾ ಕೇಂದ್ರ ವ್ಯಾಪ್ತಿಯ ಹುರಾ, ಹಾಡ್ಯ, ಹಲ್ಲರೆ, ದೇವರಾಯಶೆಟ್ಟಿಪುರ, ಹೆಡಿಯಾಲ ಗ್ರಾಪಂ ವ್ಯಾಪ್ತಿಯ ಗ್ರಾಮಗಳು ಹಾಗೂ ಚಂದ್ರವಾಡಿ ವಿತರಣಾ ಕೇಂದ್ರ ವ್ಯಾಪ್ತಿಯ ನೆಲ್ಲಿತಾಳಪುರ, ಕುರಿಹುಂಡಿ, ಹರದನಹಳ್ಳಿ, ದುಗ್ಗಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕೋಟ್ಯಾಂತರ ರೂ. ವೆಚ್ಚದಲ್ಲಿ ಹದಗೆಟ್ಟ ರಸ್ತೆಗಳ ಅಭಿವೃದ್ಧಿ

ಕಾಮಗಾರಿಗೆ ಚಾಲನೆ ನೀಡಿದ ಶಾಸಕ ಅನಿಲ್



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಭೂಮಿ ಪೂಜೆ ನೆರವೇರಿಸಿದರು.

ಹೆಚ್.ಡಿ.ಕೋಟೆ, ಆ.17– ತಾಲೂಕಿನ ಹದಗೆಟ್ಟ ರಸ್ತೆಗಳನ್ನು ಕೋಟ್ಯಾಂತರ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ಆಲತ್ತಾಳಹುಂಡಿ ಗ್ರಾಮದಲ್ಲಿ ನಾಗನಹಳ್ಳಿ ಮುಖ್ಯ ರಸ್ತೆಯಿಂದ ಮೊತ್ತ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ 2 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ತಾಲೂಕಿನಲ್ಲಿ ಈ ಬಾರಿ ಹೆಚ್ಚು ಮಳೆ ಬಿದ್ದ ಪರಿಣಾಮ ಅನೇಕ ರಸ್ತೆಗಳು ಹಾಳಾಗಿವೆ. ರಸ್ತೆಗಳನ್ನು ದುರಸ್ತಿಗೊಳಿಸುವ ಸಂಬಂಧ ಈಗಾಗಲೇ ಸರ್ಕಾರಕ್ಕೆ ಮತ್ತು ಸಚಿವರಿಗೆ ಕ್ರಿಯಾ ಯೋಜನೆ ರೂಪಿಸಿ ವರದಿ ಸಲ್ಲಿಸಲಾಗಿದ್ದು, ಶೀಘ್ರ ಎಲ್ಲಾ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಲೋಕೋಪಯೋಗಿ ಇಲಾಖೆ ವತಿಯಿಂದ ಕಣಿಯನಹುಂಡಿಯಿಂದ ಬೆಟ್ಟದಬೀಡಿಗೆ ಹೋಗುವ ರಸ್ತೆ, ನಾಗನಹಳ್ಳಿ ಮುಖ್ಯ ರಸ್ತೆಯಿಂದ ಮೊತ್ತ ಗ್ರಾಮಕ್ಕೆ ಹೋಗುವ ರಸ್ತೆಗಳನ್ನು 3 ಕೋಟಿ ವೆಚ್ಚದಲ್ಲಿ ಡಾಂಬರೀಕರಣ ಮಾಡಲಾಗುತ್ತಿದೆ. ನಿರ್ಮಿತಿ ಕೇಂದ್ರ ಇಲಾಖೆಯಿಂದ ಕಳಸೂರು ಸಿಸಿ ರಸ್ತೆ ಮತ್ತು ಚರಂಡಿಗೆ 30 ಲಕ್ಷ, ಕನಕನಹಳ್ಳಿ ತಿಟ್ಟು ಸಿಸಿ ರಸ್ತೆ ಮತ್ತು ಚರಂಡಿಗೆ 20 ಲಕ್ಷ, ಬೋರೆದೇವರಮುಂಟಿ ಗ್ರಾಮದ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ 50 ಲಕ್ಷ ರೂ. ಒಟ್ಟು 4 ಕೋಟಿ ವೆಚ್ಚದಲ್ಲಿ ಕಾಮಗಾರಿಗೆ ಇಂದು ಭೂಮಿ ಪೂಜೆ ನೆರವೇರಿಸಿದ್ದೇನೆ. ಗುತ್ತಿಗೆದಾರರು ಮತ್ತು ಅಧಿಕಾರಿಗಳು ನಿಗದಿತ ಸಮಯದಲ್ಲಿ ಕಾಮಗಾರಿಗಳನ್ನು ಗುಣಮಟ್ಟದಲ್ಲಿ ಪೂರ್ಣಗೊಳಿಸಬೇಕು ಎಂದರು.

ಗ್ರಾಮದ ಮುಖಂಡ ಜೀವಿಕಾ ಬಸವರಾಜು ಮಾತನಾಡಿ, ಮೊತ್ತ ಗ್ರಾಮದಲ್ಲಿ ಗ್ರಾಮದ ಅಂಕದಿಂದ ಅಂಬೇಡ್ಕರ್ ಬೀದಿ ರಸ್ತೆ ಕಾಮಗಾರಿ ನಡೆಸಬೇಕು. ತಾರಕ ನಾಲೆ ಹೂಳು ತೆಗೆಯಬೇಕು, ನಾಲೆ ಅಭಿವೃದ್ಧಿ ಮಾಡಬೇಕು, ಕಾಲುವೆ ನೀರು ಬಂದರೆ ಕೆಲ ಮನೆಗಳಿಗೆ ನೀರು ತುಂಬಿಕೊಳ್ಳುತ್ತವೆ. ಅದನ್ನು ಸರಿಪಡಿಸಬೇಕು, ಗ್ರಾಮದ ದೇವಾಲಯದ ಮುಂಭಾಗದಲ್ಲಿ ಉದ್ಯಾನವನ ನಿರ್ಮಿಸಿ ಕೊಡಬೇಕು, ಆಲತ್ತಾಳಹುಂಡಿ ಕಟ್ಟೇಮನುಗನಹಳ್ಳಿ ಸಂಪರ್ಕಿಸುವ ಸ್ಥಳದಲ್ಲಿ ವೃತ್ತ ನಿರ್ಮಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಅಧಿಕಾರಿಗಳಾದ ಬೋರಯ್ಯ, ಸುಬ್ರಮಣ್ಯ, ಸುಪ್ರೀತ್, ತಹಸೀಲ್ದಾರ್ ಶ್ರೀನಿವಾಸ್, ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಗುತ್ತಿಗೆದಾರರಾದ ಯೋಗಾನಂದ, ಗಣೇಶ್ ಆಚಾರ್, ಜೈಪ್ರಕಾಶ್, ಚಂದ್ರು, ಮುಖಂಡರಾದ ಸತೀಶ್ ಗೌಡ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ, ಮೈಮುಲ್ ನಿರ್ದೇಶಕ ಈರೇಗೌಡ, ಚಿಕ್ಕವೀರನಾಯಕ, ಸುರೇಶ್, ನಾಗನಹಳ್ಳಿ ಗ್ರಾಪಂ ಅಧ್ಯಕ್ಷೆ ಮಹದೇವಮ್ಮ, ಉಪಾಧ್ಯಕ್ಷ ಅಂಕಶೆಟ್ಟಿ, ಪಿಡಿಓ ನಾಗಾರ್ಜುನ, ಶಿವರಾಜು, ಗ್ರಾಪಂ ಸದಸ್ಯ ಅಪ್ಪಣ್ಣ ಸೋಮೇಶ್, ಕೆಂಡಗಣ್ಣಸ್ವಾಮಿ, ರವಿ, ಸೌಮ್ಯ, ಶಿವಮಲ್ಲಪ್ಪ, ಶಿವಯ್ಯ, ಗೀತಾ, ದಯಾನಂದ, ತಮ್ಮಣ್ಣ ರಾಜೀವ್ ಪ್ರಸಾದ್, ಶಂಭು, ವನಸಿರಿ ಶಂಕರ್, ಉಮೇಶ್, ಸ್ವಾಮಿ, ಕರಿಯಯ್ಯ, ಸುರೇಶ್, ಸಿದ್ದಪ್ಪ, ಚಿನ್ನಯ್ಯ, ವೀರಭದ್ರಯ್ಯ, ಮರಿಯಯ್ಯ, ಪ್ರಕಾಶ್, ಮಹದೇವು, ಚಲುವರಾಜು, ರವಿ, ಉಮೇಶ್, ಗುರುನಾಯಕ್, ಜೇಮ್ಸ್ ಶಾಸಕರ ಆಪ್ತ ಕಾರ್ಯದರ್ಶಿಗಳಾದ ಸುದರ್ಶನ್, ಮಂಜುನಾಥ್ ಶೆಟ್ಟಿ, ರಾಜು, ಚಿಕ್ಕ ಲೋಕೇಶ್, ಗ್ರಾಪಂ ಅಧ್ಯಕ್ಷ ಶೈಲೇಂದ್ರ, ಮುಖಂಡ ಸ್ವಾಮಿ, ಮೂರ್ ಬಾಂಡ್, ವೇಣುಗೋಪಾಲು, ಮಂಜುನಾಥ್, ನಾಗರಾಜು, ಬಸವರಾಜು, ಇಮ್ರಾನ್, ಕುಮಾರ್, ಚಲ್ಲಾ, ಕಾಳಸ್ವಾಮಿ, ಕಲಾವತಿ, ಬೀರೇಗೌಡ ಇನ್ನಿತರರಿದ್ದರು.

ನಿಲಸೋಗೆಯಲ್ಲಿ ಎಸ್‌ವಿಎಸ್ ಸಭಾಭವನ ಲೋಕಾರ್ಪಣೆ



ಸಭಾಭವನ ಲೋಕಾರ್ಪಣೆ ಸಮಾರಂಭವನ್ನು ಶ್ರೀಶಿವಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ತಿ.ನರಸೀಪುರ, ಆ.17– ಭಗವಂತ ಮತ್ತು ಭಕ್ತರ ನಡುವೆ ನೇರ ಸಂಬಂಧವಿರಬೇಕೆಂಬ ಉದ್ದೇಶದಿಂದ ಧಾರ್ಮಿಕ ಆಚರಣೆಯಲ್ಲಿ ಶಿವಲಿಂಗ ಪರಿಕಲ್ಪನೆ ಹುಟ್ಟಿಕೊಂಡಿತು ಎಂದು ಸುತ್ತೂರು ಮಠದ ಶಿವಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ನಿಲಸೋಗೆಯಲ್ಲಿ ಶನಿವಾರ ಶ್ರೀಗುರು ಮಲ್ಲೇಶ್ವರ ಭಿಕ್ಷದ ದಾಸೋಹ ಮಠದ ಶ್ರೀವೀರತ್ತ ಸೇವಾ ಪ್ರತಿಷ್ಠಾನ ಟ್ರಸ್ಟ್‌ನ ಎಸ್‌ವಿಎಸ್ ಸಭಾಭವನ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಮಧ್ಯವರ್ತಿಗಳ ಮೂಲಕ ಆಗುವ ಧರ್ಮಾಚರಣೆ, ಸಲ್ಲಿಸುವ ಪೂಜೆ ಸರಿಯಲ್ಲ. ಭಗವಂತನನ್ನು ಅವರೇ ಪೂಜಿಸಿ, ಆರಾಧಿಸಿದಾಗಲೇ ದೇವರ ಕೃಪೆ ಸಿದ್ಧಿಸಲಿದೆ ಎಂದರು.

12ನೇ ಶತಮಾನದಲ್ಲಿ ಬಸವಣ್ಣನವರು ಸಾಮಾಜಿಕ ಬದಲಾವಣೆಗೆ ವಿಶೇಷ ಪ್ರಯತ್ನಪಟ್ಟರು. ಅಸಮಾನತೆ ಹೋಗಲಾಡಿಸಲು ಲೌಕಿಕ ಮತ್ತು ಭೌತಿಕ ದೃಷ್ಟಿಯಿಂದ ಹೋರಾಟ ಮಾಡಿದ್ದಲ್ಲ ಎಂದ ಅವರು ಸಮಾನತೆ, ಸುಧಾರಣೆಗಳು ಜಗತ್ತಿನಲ್ಲಿ ಬಹುತೇಕ ರಾಷ್ಟ್ರಗಳಲ್ಲಿ ನೆಲೆ ನಿಂತಿಲ್ಲ. ಆಧ್ಯಾತ್ಮಿಕ ಸಿಂಚನ, ಧರ್ಮದ ತಳಹದಿ ಮೇಲೆ ಜನರನ್ನು ಸರಿದಾರಿಗೆ ತರಲು ಪ್ರಯತ್ನ ಮಾಡಿದ್ದರ ಫಲವಾಗಿ ಬಸವಣ್ಣನವರ ಕ್ರಾಂತಿ ಮತ್ತು ಸುಧಾರಣೆಗಳು 900 ವರ್ಷಗಳಾದರೂ ನಾಡಿನಲ್ಲಿ ಶಾಶ್ವತವಾಗಿದೆ ಎಂದರು.

ಸಾಮಾನ್ಯರು, ದೊಡ್ಡವರು ಎಂಬ ಭೇದವಿಲ್ಲದೆ ಎಲ್ಲರೊಡನೆ ನಿಂತು ಧಾರ್ಮಿಕ ಜಾಗೃತಿ ಮೂಡಿಸಿದ ಗುರು ಮಲ್ಲೇಶ್ವರರು ಆಧ್ಯಾತ್ಮಿಕ ಸಂಚಲನ ಸೃಷ್ಟಿಸಿದವರು. ಅವರ ಹೆಸರಿನಲ್ಲಿರುವ ನಿಲಸೋಗೆ ಮಠದ ಧಾರ್ಮಿಕ ಪರಂಪರೆಯನ್ನು 4ನೇ ಶ್ರೀಗಳಾದ ಮಲ್ಲಪ್ಪ ಸ್ವಾಮೀಜಿ ಬಹಳ ಎತ್ತರಕ್ಕೆ ಕೊಂಡೊಯ್ದರು. ಈಗಿನ ಶ್ರೀಗಳು ಹಲವು ಮೂಲಗಳಿಂದ ಸಂಪನ್ಮೂಲ ಕ್ರೋಢೀಕರಿಸಿ, ಗ್ರಾಮೀಣ ಪ್ರದೇಶದಲ್ಲಿ ಧಾರ್ಮಿಕ ಕಾರ್ಯಗಳಿಗೆ ಸಭಾ ಭವನ ನಿರ್ಮಾಣ ಮಾಡಿರುವುದು ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು. ಕನಕಪುರ ದೇಗುಲ ಮಠದ ಚನ್ನಬಸವ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ, ಮುಡುಕನಪುರ ಹಲವಾರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಕುದೇರು ಮಠದ ಇಮ್ಮಡಿ ಗುರುಲಿಂಗ ಸ್ವಾಮೀಜಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿದ್ದಪ್ಪ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಎಸ್. ಎಂ.ಪ್ರಕಾಶ್, ನರಗ್ಯಾತನಹಳ್ಳಿ ವಿರಕ್ತಮಠದ ಇಮ್ಮಡಿ ಶಿವಕುಮಾರ ಸ್ವಾಮೀಜಿ, ಚಿದರವಳ್ಳಿ ಗವಿಮಠದ ಮಲ್ಲಿಕಾರ್ಜುನ ಸ್ವಾಮೀಜಿ, ನಿಲಸೋಗೆ ಶ್ರೀಗುರುಮಲ್ಲೇಶ್ವರ ಭಿಕ್ಷದ ದಾಸೋಹ ಮಠದ ಮಲ್ಲಪ್ಪ ಸ್ವಾಮೀಜಿ, ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಶೇಖರಪ್ಪ, ಚೌಹಳ್ಳಿ ಮಹದೇವಪ್ಪ ಸಿ.ಬಿ.ಹುಂಡಿ ಪ್ರಕಾಶ್, ಚಿನ್ನಸ್ವಾಮಿ, ಸಿಆರ್‌ಸಿ ಮಹದೇವಪ್ಪ, ಗೌಡ್ರು ಶ್ರೀಕಂಠಪ್ಪ, ಮಹದೇವ ಪ್ರಸಾದ್, ಗುರು ಮಲ್ಲೇಶ್ವರ ಯುವಕರ ಸಂಘದವರು ಹಾಗೂ ಬಸವೇಶ್ವರ ಸಂಘದ ಮುಖಂಡರು ಹಾಗೂ ಸೇವಾ ಪ್ರತಿಷ್ಠಾಪನ ಟ್ರಸ್ಟ್ ಪದಾಧಿಕಾರಿಗಳು, ಗ್ರಾಮಸ್ಥರು ಹಾಗೂ ಮಠದ ಭಕ್ತವೃಂದ ಇದ್ದರು.

ನೋಬೆಲ್ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ



ಕಂಪಲಾಪುರದ ಎಂ.ಆರ್.ನೋಬೆಲ್ ಶಾಲೆಯಲ್ಲಿ 78ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಈ ವೇಳೆ ಭಾರತೀಯ ಸೇನೆಯ ಮಧು, ತಾಲೂಕು ಫೋಟೋಗ್ರಾಫರ್ಸ್ ಅಸೋಸಿಯೇಷನ್ ಉಪಾಧ್ಯಕ್ಷ ಲೋಕೇಶ್, ಸಂಸ್ಥೆ ಕಾರ್ಯದರ್ಶಿ ಗಿರಿಧರ್, ಮುಖ್ಯ ಶಿಕ್ಷಕಿ ಜಾಕ್ಲಿನ್ ಜಸಿಂತಾ, ಸಿಮ್ರಾನ್ ಭಾನು ಮತ್ತಿತರರಿದ್ದರು.

78ನೇ ಸ್ವಾತಂತ್ರ್ಯ ದಿನಾಚರಣೆ



ಜಯಪುರ ರಾಘವೇಂದ್ರ ವಿದ್ಯಾ ಪೀಠ ಪ್ರೌಢಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯಿತು. ಈ ವೇಳೆ ನಿವೃತ್ತ ಮುಖ್ಯಶಿಕ್ಷಕ ಎಸ್.ವೈದ್ಯನಾಥ್, ಸಮಾಜ ಸೇವಕ ಎಸ್.ಶ್ರೀಕಾಂತ್, ಪ್ರಭಾರಿ ಮುಖ್ಯಶಿಕ್ಷಕ ಸಿದ್ದರಾಮು ಇನ್ನಿತರರಿದ್ದರು

ಜ್ಯೋತಿಷ್ಯ ವೇದದಷ್ಟೇ ಪುರಾತನವಾದದು



ಸಭೆಯಲ್ಲಿ ಸಮಾಜದ ಹಿರಿಯರನ್ನು ಗೌರವಿಸಲಾಯಿತು.

ಸರಗೂರು, ಆ.17– ಜ್ಯೋತಿಷ್ಯ ವೇದದಷ್ಟೇ ಪುರಾತನವಾದದ್ದು ಎಂದು ಶ್ರೀಚಿಕ್ಕದೇವಮ್ಮನವರ ಬೆಟ್ಟದ ಪಾರುಪತ್ತೇಗಾರ ಮಹದೇವಸ್ವಾಮಿ ತಿಳಿಸಿದರು.

ಪಟ್ಟಣದ ಶ್ರೀಸೋಮೇಶ್ವರ ದೇವಾಲಯದ ಆವರಣದಲ್ಲಿ ನಡೆದ ಕೋಟೆ, ಸರಗೂರು ತಾಲೂಕು ಶಿವಾರ್ಚಕರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಭಾರತೀಯ ಜ್ಯೋತಿಷ್ಯ ಶಾಸ್ತ್ರ ಬೆಳೆಸಿದ ಋಷಿಮುನಿಗಳು, ಪಂಡಿತರು ತಾವು ಗಳಿಸಿದ ಜ್ಞಾನವನ್ನು ಲಿಖಿತ ರೂಪದಲ್ಲಿ ಉಳಿಸಿ ಹೋಗಿದ್ದಾರೆ. ಅಂತಹ ದಿವ್ಯ ಜ್ಞಾನವನ್ನು ಇಂದಿನ ಜ್ಯೋತಿಷ್ಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪುಸ್ತಕ ರೂಪದಲ್ಲಿ ಹೊರತರುವ ಅವಶ್ಯಕತೆ ಇದೆ. ಮನುಷ್ಯನ ಭವಿಷ್ಯದ ಮೇಲೆ ಬೆಳಕು ಚೆಲ್ಲುವ ಮತ್ತು ದಾರಿದೀಪವಾಗುವುದರಿಂದ ಜ್ಯೋತಿಷ್ಯ ಶಾಸ್ತ್ರ ಎಂಬ ಹೆಸರು ಬಂದಿದೆ. ಜ್ಯೋತಿಷ್ಯ ಶಾಸ್ತ್ರವನ್ನು ಬ್ರಹ್ಮಾದಿ ದೇವತೆಗಳು, ಧ್ಯಾನದ ಮೂಲಕ ಋಷಿಗಳು ತಮ್ಮ ದಿವ್ಯ ಜ್ಞಾನದಿಂದ ಮನಗೊಂಡು ಫಲಾಫಲ ನಿರ್ದೇಶನಗಳನ್ನು ಒಬ್ಬ ವ್ಯಕ್ತಿಗೆ ಸಾಕಷ್ಟು ಅನ್ವಯವಾಗುವ ರೀತಿ ಪ್ರತಿಪಾದಿಸಿದ್ದಾರೆ. ಹೀಗಾಗಿ ಶಿವಾರ್ಚಕರ ಮಕ್ಕಳು ಉನ್ನತ ವಿದ್ಯಾಭ್ಯಾಸ ಮಾಡುವ ಜೊತೆಗೆ ತಮ್ಮ ಮೂಲ ಕಾಯಕದಲ್ಲೂ ತೊಡಗಿಸಿಕೊಳ್ಳಿ ಎಂದರು.

ಕಾರ್ಯಕ್ರಮಕ್ಕೂ ಮುನ್ನ ದೈವಾಧೀನರಾದವರಿಗೆ ಸಂತಾಪ ಸೂಚಿಸಲಾಯಿತು. ಸಮಾಜದ ಹಿರಿಯರನ್ನು ಗೌರವಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಶಿವಾರ್ಚಕರ ಸಂಘದ ತಾಲೂಕು ಅಧ್ಯಕ್ಷ ಕೆ.ಜಿ.ಯಶ್ವಂತ್, ಮಾಜಿ ಅಧ್ಯಕ್ಷ ರವಿಶಾಸ್ತ್ರಿ ಮಾತನಾಡಿದರು. ಸಂಘದ ಗೌರವಾಧ್ಯಕ್ಷ ನಾಗರಾಜಪ್ಪ, ಸಿ.ನಾಗರಾಜು, ಸುಬ್ಬಣ್ಣ, ಉಪಾಧ್ಯಕ್ಷ ಪ್ರಸನ್ನಕುಮಾರ್, ಕಾರ್ಯದರ್ಶಿ ವೀರಣ್ಣ, ಖಜಾಂಚಿ ಶಿವಕುಮಾರ್, ನಿರ್ದೇಶಕರಾದ ರವಿಕುಮಾರ್, ರಾಜಜ್ಞಾಪಿ, ನಂಜಪ್ಪ, ಮಹದೇವಪ್ಪ, ಎನ್.ಚಂದ್ರಪ್ಪ, ಸುರೇಶ್, ಸತೀಶ್, ನೀಲಕಂಠ, ನಟರಾಜು, ಸೋಮಣ್ಣ, ಸಲಹೆಗಾರ ನಂಜುಂಡಸ್ವಾಮಿ, ಮಹದೇವಸ್ವಾಮಿ, ಜಗದೀಶ್ ಸೇರಿದಂತೆ ಇನ್ನಿತರರಿದ್ದರು.

ಆಂತೋಣಿ ನಿಧನ




ಹೆಚ್.ಡಿ.ಕೋಟೆ, ಆ.17– ಪಟ್ಟಣದ ಸ್ಟೇಡಿಯಂ ಬಡಾವಣೆ ನಿವಾಸಿ ಆಂತೋಣಿ(58) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಹೆಣ್ಣು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಸಂಜೆ 4 ಗಂಟೆಗೆ ಪಟ್ಟಣದ ಕ್ರೈಸ್ತ ಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ವಿರೋಧಿಸಿ

ನಂಜನಗೂಡು, ಕೆ.ಆರ್.ನಗರದಲ್ಲಿ ಪ್ರತಿಭಟನೆ





ರಾಜ್ಯಪಾಲರ ವಿರುದ್ಧ ನಂಜನಗೂಡು, ಕೆ.ಆರ್.ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು/ಕೆ.ಆರ್.ನಗರ, ಆ.17– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿರುದ್ಧ ಸಿದ್ದರಾಮಯ್ಯ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರು ನಂಜನಗೂಡು, ಕೆ.ಆರ್.ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ನಂಜನಗೂಡು: ತುಂತುರು ಮಳೆ ನಡುವೆ ಹುಲ್ಲಹಳ್ಳಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಬಿಜೆಪಿ, ಜೆಡಿಎಸ್ ಹಾಗೂ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿರುದ್ಧ ಘೋಷಣೆಗಳನ್ನು ಕೂಗಿ, ಟೈರ್‌ಗೆ ಬೆಂಕಿ ಹಚ್ಚಿ, ನಂಜನಗೂಡು–ಮೈಸೂರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ. ಶಂಕರ್ ಮಾತನಾಡಿ, ಅಹಿಂದ ವರ್ಗಗಳ ನಾಯಕ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕ್ಷುಲ್ಲಕ ಕಾರಣ ನೀಡಿ, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ಅಲ್ಲದೇ 135ಕ್ಕೂ ಹೆಚ್ಚಿನ ಶಾಸಕರ ಬಹುಮತ ಹೊಂದಿರುವ ಸರ್ಕಾರವನ್ನು ಕೆಡವಲು ಕೇಂದ್ರ ಸರ್ಕಾರದ ಜೊತೆ ಕೈಜೋಡಿಸಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ತಮ್ಮ ಜಮೀನಿಗೆ ಬದಲಾಗಿ ಮುಡಾದಿಂದ ದೊರಕಿದ ನಿವೇಶನ ನ್ಯಾಯಯುತವಾಗಿದೆ. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿರುವ ಬಡವರ ಪರವಾದ ಮುಖ್ಯಮಂತ್ರಿಯನ್ನು ಸುಲಭವಾಗಿ ತೆಗೆಯಲು ಸಾಧ್ಯವಿಲ್ಲ. ರಾಜ್ಯಾದ್ಯಂತ ಜನರು ಧಂಗೆ ಏಳಲಿದ್ದಾರೆ ಎಂದರು.

ಜಿಪಂ ಮಾಜಿ ಸದಸ್ಯ ಕೆ.ಮಾರುತಿ ಮಾತನಾಡಿದರು. ಪ್ರತಿಭಟನೆಯಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ರಾಜ್ಯ ಹಿಂದುಳಿದ ವರ್ಗಗಳ ಪ್ರಧಾನ ಕಾರ್ಯದರ್ಶಿ ಎನ್.ಟಿ.ಗಿರೀಶ್, ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ನಗರಸಭಾ ಸದಸ್ಯರಾದ ಗಂಗಾಧರ್, ಮುಖಂಡರಾದ ರಾಜು, ಜೈಚಂದ್ರ ಶಿವಸ್ವಾಮಿ, ನಾಗರಾಜು, ಶಿವಣ್ಣ, ಆರ್.ಮಹದೇವು, ಬಸವೇಗೌಡ, ಪ್ರಭು, ವಿಶ್ವನಾಥ್, ವಕೀಲರಾದ ಶಿವಬಸಪ್ಪ, ಕೆಂಪಿಸಿದ್ದನಹುಂಡಿ ಗ್ರಾಪಂ ಅಧ್ಯಕ್ಷ ರವಿ ಉಪಸ್ಥಿತರಿದ್ದರು.

ಕೆ.ಆರ್.ನಗರ: ಇಲ್ಲಿನ ಹಾಸನ–ಮೈಸೂರು ರಸ್ತೆಯ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿಯಿಂದ ರಾಜ್ಯಪಾಲರ ವಿರುದ್ಧ ಧಿಕ್ಕಾರ ಕೂಗುತ್ತಾ ಹೊರಟ ನೂರಾರು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುವ ಜೊತೆಗೆ ಇದೀಗ ಸಾಂವಿಧಾನಿಕ ಹುದ್ದೆಯಾಗಿರುವ ರಾಜ್ಯಪಾಲರ ಘನತೆ ಮಣ್ಣುಪಾಲು ಮಾಡಿದ್ದು ಇದನ್ನು ದೇಶದ ಜನತೆ ಕ್ಷಮಿಸುವುದಿಲ. ಕೂಡಲೇ ಪ್ರಾಸಿಕ್ಯೂಷನ್ ಅನುಮತಿ ವಾಪಾಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ರಾಜ್ಯಪಾಲರ ವಿರುದ್ಧ ತಹಶೀಲ್ದಾರ್ ಜಿ.ಸುರೇಂದ್ರಮೂರ್ತಿ ಮೂಲಕ ರಾಷ್ಟ್ರಪತಿಗಳಿಗೆ ದೂರು ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ರಾಜ್ಯ ಕಾಂಗ್ರೆಸ್ ಎಸ್‌ಟಿ ಘಟಕದ ಉಪಾಧ್ಯಕ್ಷ ಶ್ರೀನಿವಾಸ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ದಲಿತ ಮುಖಂಡ ರಾಮಯ್ಯ, ಜಿಪಂ ಮಾಜಿ ಸದಸ್ಯ ಶಿವರಾಮ್, ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು, ಗೀತಾ, ಸದಸ್ಯ ಪ್ರಕಾಶ್, ಎಂ.ನಟರಾಜು, ತಾಲೂಕು ಕಾಂಗ್ರೆಸ್ ಎಸ್‌ಟಿ ಘಟಕದ ಅಧ್ಯಕ್ಷ ಮಹದೇವನಾಯಕ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ. ಎಸ್.ಮಹದೇವ್, ಉದಯಶಂಕರ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ನಿರ್ದೇಶಕರಾದ ಪ್ರಸನ್ನ ಕುಮಾರ್, ಸೈಯದ್ ಜಾಬೀರ್, ಸರಿತಾ, ಕುರುಬರ ಸಂಘದ ನಿರ್ದೇಶಕರಾದ ಕೆ.ಹೆಚ್.ಬುಡೀಗೌಡ, ಅಪ್ಪಾಜಿಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಟಿ.ಚಂದ್ರೇಗೌಡ, ಮುಖಂಡರಾದ ಕೆ.ಪಿ.ಜಗದೀಶ್, ಎಂ.ಎಸ್.ಅನಂತ, ಸುಧಾಕರ್, ನಾಗರಾಜನಾಯಕ, ಪ್ರದೀಪ್‌ಕುಮಾರ್, ರಾಜನಾಯಕ, ಬಿ.ಹೆಚ್.ಕುಮಾರ್, ರಾಜಯ್ಯ, ಕೆ.ಎಂ.ಹರೀಶ್, ಬೋರಪ್ಪ, ಸೇರಿದಂತೆ ನೂರಾರು ಮಂದಿ ಹಾಜರಿದ್ದರು.

ಮೈಸೂರು ಮಿತ್ರ

ದಸರಾ ಉತ್ಸವ ಸಾಂಗವಾಗಿ ನೆರವೇರಲು ವಿವಿಧ ಜವಾಬ್ದಾರಿ ಹಂಚಿಕೆ

ದಸರಾ ಉಪ ಸಮಿತಿಗಳಿಗೆ ಉಪವಿಶೇಷಾಧಿಕಾರಿ, ಕಾರ್ಯಾಧ್ಯಕ್ಷರು, ಕಾರ್ಯದರ್ಶಿಗಳ ನೇಮಕ

● ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಆದೇಶ ● ದಸರಾ ಸಿದ್ಧತೆಗಳಿಗೆ ವಿಧ್ಯುಕ್ತ ಚಾಲನೆ ● ವೆಚ್ಚಕ್ಕೆ ಆಡಿಟ್ ಕಡ್ಡಾಯ ● ಅಧಿಕಾರಿಗಳು ಲೋಪ ಎಸಗಬಾರದು ● ಅಧಿಕಾರೇತರ ಪದಾಧಿಕಾರಿಗಳೊಂದಿಗೆ ಸಮನ್ವಯತೆ ಸಲಹೆ



ಮೈಸೂರು, ಆ.17(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಕಾರ್ಯಕ್ರಮಗಳ ರೂಪು–ರೇಷೆಗಳನ್ನು ಸಿದ್ಧಪಡಿಸಲು ಮೈಸೂರು ಜಿಲ್ಲಾಧಿಕಾರಿಗಳೂ ಆದ ದಸರಾ ವಿಶೇಷಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ 19 ಉಪ ಸಮಿತಿಗಳಿಗೆ ಉಪ ವಿಶೇಷಾಧಿಕಾರಿ, ಕಾರ್ಯಾಧ್ಯಕ್ಷರು, ಸಹ ಕಾರ್ಯಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳನ್ನು ನೇಮಕ ಮಾಡಿದ್ದಾರೆ.

ದಸರಾ ಅನುದಾನವನ್ನು ಉಪ ಸಮಿತಿಗಳು ನಿಯಮಾನುಸಾರ ಪಾರದರ್ಶಕತೆಯಿಂದ ವೆಚ್ಚ ಮಾಡಬೇಕು, ಯಾವುದೇ ಲೋಪವಿಲ್ಲದೆ ತಮ್ಮ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು, ಕಾರ್ಯಕ್ರಮಗಳನ್ನು ಸಿದ್ಧಪಡಿಸಿದ ಮೇಲೆ ತಮ್ಮ ಅನುಮೋದನೆ ಪಡೆಯಬೇಕು, ವೆಚ್ಚ ಮಾಡಲಾದ ಅನುದಾನಕ್ಕೆ ಆಡಿಟ್ ಮಾಡಿಸಿ ವೋಚರ್ ಮತ್ತು ಉಪಯುಕ್ತ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು ಎಂದು ತಾಕೀತು ಮಾಡಿದ್ದಾರೆ.

ಉಪ ಸಮಿತಿ ಕೈಗೊಳ್ಳುವ ಪೂರ್ವ ಸಿದ್ಧತಾ ಕಾರ್ಯಕ್ರಮಗಳನ್ನು ತಮಗೆ ಖುದ್ದಾಗಿ ಅಥವಾ ದೂರವಾಣಿ ಮೂಲಕ ತಿಳಿಸಬೇಕು, ಉಪ ಸಮಿತಿಗಳಿಗೆ ನೇಮಕವಾಗುವ ಅಧಿಕಾರೇತರ ಪದಾಧಿಕಾರಿಗಳೊಂದಿಗೆ ಸಮನ್ವಯ ಮಾಡಿಕೊಂಡು ಕಾರ್ಯಕ್ರಮ ರೂಪಿಸುವಂತೆ ಕೂಡ ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದ್ದಾರೆ.

ಸ್ವಾಗತ, ಆಮಂತ್ರಣ ಮತ್ತು ಸ್ಥಳಾವಕಾಶ ಉಪ ಸಮಿತಿ: ಉಪವಿಶೇಷಾಧಿಕಾರಿಯಾಗಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ಕಾರ್ಯಾಧ್ಯಕ್ಷರಾಗಿ (ಸ್ವಾಗತ ಮತ್ತು ಆಮಂತ್ರಣ) ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ, ಸಹ ಕಾರ್ಯಾಧ್ಯಕ್ಷರಾಗಿ ನಗರಪಾಲಿಕೆಯ ಅಧೀಕ್ಷಕ ಅಭಿಯಂತರರಾದ ಸಿಂಧು, ಉಪ ವಿಭಾಗಾಧಿಕಾರಿ (ಸ್ಥಳಾವಕಾಶ) ಕೆ.ಆರ್.ರಕ್ಷಿತ್, ಕಾರ್ಯದರ್ಶಿಯಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕುಬೇರಪ್ಪ ಹಾಗೂ ತಹಶೀಲ್ದಾರ್ ಮಹೇಶ್ ಕುಮಾರ್

ಮೆರವಣಿಗೆ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಕಾರ್ಯಾಧ್ಯಕ್ಷರಾಗಿ ಡಿಸಿಪಿ ಮುತ್ತುರಾಜ್, ಕಾರ್ಯದರ್ಶಿಯಾಗಿ ಎಸಿಪಿ ಶಾಂತಮಲ್ಲಪ್ಪ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್.

ಪಂಜಿನ ಕವಾಯತು ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಕಾರ್ಯಾಧ್ಯಕ್ಷರಾಗಿ ಡಿಸಿಪಿಗಳಾದ ಡಾ.ಜಾಹ್ನವಿ ಮತ್ತು ಮಾರುತಿ, ಕಾರ್ಯದರ್ಶಿಯಾಗಿ ಎಸಿಪಿ ಸಿ.ಕೆ.ಅಶ್ವಥ್ ನಾರಾಯಣ್ ಮತ್ತು ಮುಡಾದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರೂಪಶ್ರೀ.

ಸ್ತಬ್ಧಚಿತ್ರ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಕಾರ್ಯಾಧ್ಯಕ್ಷರಾಗಿ ಗ್ರಾಮೀಣ ಕುಡಿಯುವ ನೀರು ಸರಬರಾಜಿನ ಕಾರ್ಯಪಾಲಕ ಅಭಿಯಂತರ ರಂಜಿತ್, ಕಾರ್ಯದರ್ಶಿಯಾಗಿ ಜಿಲ್ಲಾ ಪಂಚಾಯತ್‌ನ ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆಯ ಉಪ ನಿರ್ದೇಶಕಿ ಮೇಘಲಾ.

ರೈತ ದಸರಾ (ಗ್ರಾಮೀಣ ದಸರಾ) ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣಂರಾಜು, ಕಾರ್ಯಾಧ್ಯಕ್ಷರಾಗಿ ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್, ಸಹ ಕಾರ್ಯಾಧ್ಯಕ್ಷರಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಶಿವಲಿಂಗಯ್ಯ, ಕಾರ್ಯದರ್ಶಿಯಾಗಿ ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್.



ಜಿ.ಲಕ್ಷ್ಮಿಕಾಂತ ರೆಡ್ಡಿ

ಕ್ರೀಡಾ ದಸರಾ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಮುಡಾ ಕಾರ್ಯದರ್ಶಿ ವಿ.ಕೆ. ಪ್ರಸನ್ನಕುಮಾರ್, ಕಾರ್ಯಾಧ್ಯಕ್ಷರಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪ ನಿರ್ದೇಶಕ ಡಾ.ಜಿತೇಂದ್ರ ಶೆಟ್ಟಿ, ಕಾರ್ಯದರ್ಶಿಯಾಗಿ ಯುವ ಜನಸೇವಾ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್.

ಸಾಂಸ್ಕೃತಿಕ ದಸರಾ ಉಪ ಸಮಿತಿ: ಅರಮನೆ ವೇದಿಕೆಯ ಉಪ ವಿಶೇಷಾಧಿಕಾರಿಯಾಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ, ಕಾರ್ಯಾಧ್ಯಕ್ಷರಾಗಿ ಅರಮನೆ ಮಂಡಳಿಯ ಉಪ ನಿರ್ದೇಶಕ ಟಿ.ಎನ್. ಸುಬ್ರಹ್ಮಣ್ಯ, ಕಾರ್ಯದರ್ಶಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್.

ಇತರೆ ವೇದಿಕೆಯ ಉಪ ಸಮಿತಿ: ವಿಶೇಷಾಧಿಕಾರಿಯಾಗಿ ಪ್ರಾಚ್ಯವಸ್ತು ಸಂಗ್ರಹಾಲಯದ ಆಯುಕ್ತ ಎ.ದೇವರಾಜು, ಕಾರ್ಯಾಧ್ಯಕ್ಷರಾಗಿ ಕಾವಾ ಕಾಲೇಜಿನ ಮುಖ್ಯಸ್ಥ ಬಿಂದುರಾಯ ಆರ್. ಬಿರಾದಾರ್, ಕಾರ್ಯದರ್ಶಿಯಾಗಿ ಕಾವಾ ಕಾಲೇಜಿನ ಪ್ರೋಗ್ರಾಮಿಂಗ್ ಅಸಿಸ್ಟೆಂಟ್ ಹೆಚ್.ಬಿ.ಜಯಶಂಕರ್.

ದೀಪಾಲಂಕಾರ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ಕಾರ್ಯಾಧ್ಯಕ್ಷರಾಗಿ ಚೆಸ್ಕಾಂ ಅಧೀಕ್ಷಕ ಇಂಜಿನಿಯರ್ ಸುನೀಲ್, ಕಾರ್ಯದರ್ಶಿಯಾಗಿ ಚೆಸ್ಕಾಂ ಕಾರ್ಯಪಾಲಕ ಇಂಜಿನಿಯರ್ ಪೂರ್ಣಚಂದ್ರ ತೇಜಸ್ವಿ

ಕವಿಗೋಷ್ಠಿ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಕಾರ್ಯಾಧ್ಯಕ್ಷರಾಗಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಎನ್.ಕೆ. ಲೋಲಾಕ್ಷಿ, ಕಾರ್ಯದರ್ಶಿಯಾಗಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ.

ಯೋಗ ದಸರಾ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಭೂ ದಾಖಲೆ ಇಲಾಖೆಯ ಉಪ ನಿರ್ದೇಶಕಿ ರಮ್ಯ, ಕಾರ್ಯಾಧ್ಯಕ್ಷರಾಗಿ ಜಿಲ್ಲಾ ಆಯುಷ್ ಅಧಿಕಾರಿ ಡಾ. ಪುಷ್ಪಾ, ಕಾರ್ಯದರ್ಶಿಯಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿ ಎಂ.ಆರ್.ಅನಂತರಾಜು

ಯುವ ಸಂಭ್ರಮ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್, ಕಾರ್ಯಾಧ್ಯಕ್ಷರಾಗಿ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಪಿ.ಶಿವಕುಮಾರ್, ಸಹ ಕಾರ್ಯಾಧ್ಯಕ್ಷರಾಗಿ ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಇಂಜಿನಿಯರ್ ಹರೀಶ್, ಕಾರ್ಯದರ್ಶಿಯಾಗಿ ಮುಡಾ ವಿಶೇಷ ತಹಶೀಲ್ದಾರ್ ಮೋಹನ ಕುಮಾರಿ ಮತ್ತು ನಗರ ಪಾಲಿಕೆಯ ವಲಯ ಆಯುಕ್ತೆ ಸತ್ಯವತಿ.

ಯುವ ದಸರಾ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಕಾರ್ಯಾಧ್ಯಕ್ಷರಾಗಿ ಉಪ ವಿಭಾಗಾಧಿಕಾರಿ ಕೆ.ಆರ್.ರಕ್ಷಿತ್, ಕಾರ್ಯದರ್ಶಿಗಳಾಗಿ ಮುಡಾ ವಿಶೇಷ ಭೂಸ್ವಾಧೀನಾಧಿಕಾರಿ ಮಂಜುನಾಥ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಶುಭ, ಸಮನ್ವಯಾಧಿಕಾರಿಯಾಗಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಕ್ಷೇತ್ರ ಪ್ರಚಾರ ಅಧಿಕಾರಿ ಎಸ್.ಟಿ.ಶೃತಿ.

ಮಹಿಳಾ, ಮಕ್ಕಳ ದಸರಾ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕಿ ಕೆ.ಪ್ರಿಯದರ್ಶಿನಿ, ಕಾರ್ಯಾಧ್ಯಕ್ಷರಾಗಿ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪ ನಿರ್ದೇಶಕಿ ಬಿ.ಎಸ್.ಪ್ರಭಾ, ಸಹ ಕಾರ್ಯಾಧ್ಯಕ್ಷರಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್, ಕಾರ್ಯದರ್ಶಿಯಾಗಿ ಡಿಡಿಪಿಐ ಎಸ್.ಟಿ.ಜವರೇಗೌಡ.

ಆಹಾರ ಮೇಳ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಕಾರ್ಯಾಧ್ಯಕ್ಷರಾಗಿ ಜಿಲ್ಲಾ ಅಂಕಿತ ಅಧಿಕಾರಿ ಡಾ.ಕಾಂತರಾಜು, ಕಾರ್ಯದರ್ಶಿಯಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಹಾಯಕ ನಿರ್ದೇಶಕ ಪತೀಕ್ ಜಿ.ಹೆಗ್ಡೆ.

ಸ್ವಚ್ಛತೆ ಮತ್ತು ವ್ಯವಸ್ಥೆ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಕಾರ್ಯಾಧ್ಯಕ್ಷರಾಗಿ ನಗರ ಪಾಲಿಕೆಯ ಉಪ ಆಯುಕ್ತ ಸೋಮು ಶೇಖರ್, ಕಾರ್ಯದರ್ಶಿಯಾಗಿ ನಗರಪಾಲಿಕೆಯ ಮುಖ್ಯ ಆರೋಗ್ಯಾಧಿಕಾರಿ ಡಾ.ವೆಂಕಟೇಶ್.

ಚಲನಚಿತ್ರ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಬಸವರಾಜು, ಕಾರ್ಯಾಧ್ಯಕ್ಷರಾಗಿ ಮುಡಾದ ನಗರ ಯೋಜಕ ಸದಸ್ಯ ಶಿವರಾಮ್, ಸಹ ಕಾರ್ಯಾಧ್ಯಕ್ಷರಾಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ, ಕಾರ್ಯದರ್ಶಿಯಾಗಿ ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್.

ಕುಸ್ತಿ ಉಪ ಸಮಿತಿ: ಉಪ ವಿಶೇಷಾಧಿಕಾರಿಯಾಗಿ ಅಪರ ಪೊಲೀಸ್ ಅಧೀಕ್ಷಕರು, ಕಾರ್ಯಾಧ್ಯಕ್ಷರಾಗಿ ಕೆಐಎಡಿಬಿ ವಿಶೇಷ ಭೂ ಸ್ವಾಧೀನಾಧಿಕಾರಿ ವೆಂಕಟರಾಜು, ಕಾರ್ಯದರ್ಶಿಯಾಗಿ ಪೊಲೀಸ್ ಉಪ ಅಧೀಕ್ಷಕ ರಘು.

ಗಜಪಯಣ ಉಪ ಸಮಿತಿ: ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯ, ಕಾರ್ಯಾಧ್ಯಕ್ಷರಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಐ.ಬಿ.ಪ್ರಭುಗೌಡ, ಕಾರ್ಯದರ್ಶಿಯಾಗಿ ವಲಯ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಹೂಗಾರ್.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಡಬಲ್ ಐಸ್ಮಾರ್ಟ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವೇದ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ತಂಗಾಲಾನ್ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಗೌರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ಡಬಲ್ ಐಸ್ಮಾರ್ಟ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.55ಕ್ಕೆ, ಮ.1.35ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ಕಮಿಟಿ ಕುರ್ರೋಳು (ತೆ): ರಾ.9.55ಕ್ಕೆ.
ಸ್ಕ್ರೀನ್ 2	ಭೀಮಾ (ಕ): ಬೆ.10.05ಕ್ಕೆ, ಮಿನ್‌ಮಿನಿ (ತ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.50ಕ್ಕೆ, ರಾಯನ್ (ತ): ರಾ.7.15ಕ್ಕೆ, ಅಡಿಯೋಸ್ ಅಮಿಗೋ (ಮ): ಬೆ.10.05ಕ್ಕೆ.
ಸ್ಕ್ರೀನ್ 3	ಕಬಂಧ (ಕ): ಬೆ.10.35ಕ್ಕೆ, ಜೀನಿಯಸ್ ಮುತ್ತ (ಕ): ಮ.1.20ಕ್ಕೆ, ಅಂಧಗನ್ ದಿ ಪೇನಿಸ್ಟ್ (ತ): ಸಂ.4ಕ್ಕೆ, ಇಟ್ ಎಂಡ್ಸ್ ವಿಥ್ ಅಸ್ (ಇಂ): ರಾ.7ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ಭೀಮಾ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಂಧಗನ್ (ತ): ಮ.1.30ಕ್ಕೆ, ಸಂ.6.30ಕ್ಕೆ, ಪೇಚಿ (ತ): ಸಂ.4.15ಕ್ಕೆ, ಸೂಪರ್ ಜಿಂದಗಿ (ಮ): ರಾ.9.15ಕ್ಕೆ.
ಸ್ಕ್ರೀನ್ 2	ಭೀಮಾ (ಕ): ಬೆ.9.30ಕ್ಕೆ, ಮ.12.30ಕ್ಕೆ, ಮ.3.30ಕ್ಕೆ, ಸಂ.6.30ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಸಂ.4.45ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ರಾಯನ್ (ತ): ಮ.1.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶೋಷಿತ ಸಮುದಾಯಗಳ ಮನೆ ಬಾಗಿಲಿಗೆ ಸರ್ಕಾರದ ಕಾರ್ಯಕ್ರಮ ತಲುಪಿಸಿದರೆ ನಮ್ಮ–ನಿಮ್ಮ ಶ್ರಮ ಸಾರ್ಥಕ

ಸರ್ಕಾರಿ ನೌಕರರಿಂದ ಸನ್ಮಾನ ಸ್ವೀಕರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು



ಬೆಂಗಳೂರು, ಆ.17(ಕೆಎಂಶಿ)–ಶೋಷಿತ ಸಮುದಾಯಗಳ ಮನೆ ಬಾಗಿಲಿಗೆ ಸರ್ಕಾರದ ಕಾರ್ಯಕ್ರಮಗಳನ್ನು ತಲುಪಿಸಿದಾಗ ಮಾತ್ರ ಸರ್ಕಾರ ಮತ್ತು ಸರ್ಕಾರಿ ನೌಕರರ ಶ್ರಮ ಸಾರ್ಥಕವಾಗುತ್ತದೆ, ನಾವು–ನೀವು ಸೇರಿ ಸ್ವಾಸ್ಥ್ಯ ಸಮಾಜ ರೂಪಿಸಬೇಕಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಕರೆ ನೀಡಿದರು. ರಾಜ್ಯ ಸರ್ಕಾರಿ ನೌಕರರ ಸಂಘ ಆಯೋಜಿಸಿದ್ದ 'ಮುಖ್ಯಮಂತ್ರಿಗಳಿಗೆ ನಮ್ಮ ಅಭಿನಂದನೆ' ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸಮಸಮಾಜದ ಆಶಯದಿಂದ ಸರ್ಕಾರ ಜಾರಿ ಮಾಡುವ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ನಿಮ್ಮಗಳ ಮೇಲಿದೆ ಎಂದರು.

ಡಾ.ಅಂಬೇಡ್ಕರ್, ಮಹಾತ್ಮ ಗಾಂಧಿ, ಬಸವಾದಿ ಶರಣರು ಸಮಸಮಾಜದ ಕನಸು ಕಂಡಿದ್ದರು, ಇವರೆಲ್ಲರ ಕನಸು ನನಸು ಮಾಡುವ ಜವಾಬ್ದಾರಿ ನಿಮ್ಮೆಲ್ಲರ ಮೇಲಿದೆ, ಇದಕ್ಕಾಗಿ ಶ್ರಮಿಸೋಣ. ಇದು ನಿಮ್ಮೆಲ್ಲರ ಸರ್ಕಾರ, ಸರ್ಕಾರಿ ನೌಕರರ ಹಿತ ಕಾಯಲು ನಾನು ಮತ್ತು ನಮ್ಮ ಸಚಿವ ಸಂಪುಟ ಸದಾ ಸಿದ್ಧವಿದೆ, ಸರ್ಕಾರ ಅಂದರೆ ಎಲ್ಲಾ ಸರ್ಕಾರಿ ನೌಕರರೂ ಒಳಗೊಂಡಿರುತ್ತಾರೆ, ನೀವೆಲ್ಲಾ ಒಟ್ಟು ಸೇರಿದರೇನೇ ಸರ್ಕಾರ.

ನಾನು ಮುಖ್ಯಮಂತ್ರಿಯಾಗಿ ಎರಡು ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿ ಮಾಡಿದ್ದೇನೆ. ನಿಮ್ಮೆಲ್ಲರ ಬೇಡಿಕೆಯಂತೆ ಹಳೇ ಪಿಂಚಣಿ ಯೋಜನೆ ಮತ್ತು ಆರೋಗ್ಯ ಸಂಜೀವಿನಿ ಬಗ್ಗೆಯೂ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ. ನಾನು ನಿಮ್ಮ ಜೊತೆ ಇರುತ್ತೇನೆ. ನಾವು–ನೀವು ಒಟ್ಟಾಗಿ ಇದ್ದು, ಜನರ ಋಣ ತೀರಿಸೋಣ ಎಂದರು.

ಫೀಲ್ಡ್ ಮಾರ್ಷಲ್ ಕೊಡವ ಕ್ಷೇಮಾಭಿವೃದ್ಧಿ ಸಂಘದ ಮಹಾಸಭೆ



ಫೀಲ್ಡ್ ಮಾರ್ಷಲ್ ಕೊಡವ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿದ್ದ ಗಣ್ಯರು

ಮೈಸೂರು, ಆ.17–ಮೈಸೂರಿನ ಫೀಲ್ಡ್ ಮಾರ್ಷಲ್ ಕೊಡವ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆ ಹಾಗೂ ಸಂತೋಷ ಕೂಟ ಹೆಬ್ಬಾಳ್‌ನ ನ್ಯೂ ಕೋಸ್ಟಲ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯಿತು.

ಸಂಘದ ಅಧ್ಯಕ್ಷರಾದ ದೇಯಂಡ ಜಯಾ ಚಂಗಪ್ಪ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಕೊಡವ ಸಮಾಜದ ಮಾಜಿ ಅಧ್ಯಕ್ಷ ಪಿ.ಎಸ್. ಗಣಪತಿ ಮತ್ತು ಶ್ರೀಮತಿ ಪುಷ್ಪಾ ಗಣಪತಿ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದರು. ಚೇನಂಡ ರಘು ಉತ್ತಪ್ಪ, ಶ್ರೀಮತಿ ಸರಳಾ ಉತ್ತಪ್ಪ, ಮುಕ್ಕಾಟಿರ ಗಣೇಶ್, ಶ್ರೀಮತಿ ಪಾಲಿ ಗಣೇಶ್ ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದರು. ಕೊಡವ ಸಮಾಜದ ಮಾಜಿ ಅಧ್ಯಕ್ಷ ಮೂವೇರ ಕೆ.ಕುಟ್ಟಪ್ಪ ಮಾತನಾಡಿದರು. ಶ್ರೀಮತಿ ನಂಬಿಯಪಂಡ ಸೀಮಾ ಮಹೇಶ್ ಕಾರ್ಯಕ್ರಮ ನಿರೂಪಿಸಿದರು. ಮೇಕೇರಿರ ಭರತ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಮಹಿಳೆಯರ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅಲ್ಲಪಂಡ ದೀಪ್ತಿ ಮುಟ್ಟಪ್ಪ, ಚೇಂದಂಡ ಲಕ್ಷ್ಮಿತಾ ಉತ್ತಪ್ಪ ನಡೆಸಿಕೊಟ್ಟರು. ಸ್ಪರ್ಧೆಗಳಲ್ಲಿ ಜಯಗಳಿಸಿದವರಿಗೆ ಸಂಘದ ಅಧ್ಯಕ್ಷರಾದ ದೇಯಂಡ ಜಯಾ ಚಂಗಪ್ಪ ಮತ್ತು ಪಿ.ಎಸ್. ಗಣಪತಿ ಬಹುಮಾನ ವಿತರಿಸಿದರು.

ಬಾಂಗ್ಲಾ ಹಿಂದೂಗಳ ರಕ್ಷಣೆಗೆ ಜೈನ ಸಮಾಜ ಆಗ್ರಹ



ಮೈಸೂರು, ಆ.17(ಜಿಎ)– ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ಆಗುತ್ತಿರುವ ದೌರ್ಜನ್ಯ ಹಾಗೂ ಕ್ರೌರ್ಯ ಖಂಡಿಸಿ ಶ್ರೀ ದಿಗಂಬರ ಜೈನ ಸಮಾಜದವರು ಮೈಸೂರಿನ ಗಾಂಧಿ ಚೌಕದಲ್ಲಿ ಶನಿವಾರ ಮೌನ ಪ್ರತಿಭಟನೆ ನಡೆಸಿದರು.

ಬಾಂಗ್ಲಾದ ಹಿಂದೂಗಳನ್ನು ರಕ್ಷಿಸಬೇಕು. ಹಿಂದೂಗಳ ಮೇಲಿನ ಕ್ರೌರ್ಯ ನಿಲ್ಲಬೇಕು. ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆಯದಂತೆ ಕ್ರಮ ವಹಿಸಬೇಕು. ಅಲ್ಲಿನ ದೇವಾಲಯಗಳನ್ನು ರಕ್ಷಿಸಬೇಕು ಎಂಬಿತ್ಯಾದಿ ಘೋಷಣಾ ಫಲಕಗಳನ್ನಿಡಿದು ಆಗ್ರಹಿಸಿದರು.

ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್.ಸುನಿಲ್ ಕುಮಾರ್, ಪದಾಧಿಕಾರಿಗಳಾದ ಬಿ.ಭರತ್ ರಾಜ್, ಪಿ.ಎಸ್.ಲಕ್ಷ್ಮೀಶ್ ಬಾಬು, ಬಿ.ಜ್ವಾಲೇಂದ್ರಪ್ರಸಾದ್, ಕಾರ್ಯಕಾರಿ ಸಮಿತಿ ಸದಸ್ಯರಾದ ಎಸ್.ಡಿ.ಮಹೇಶ್ ಪ್ರಸಾದ್, ಎ.ಎನ್.ಧರಣೇಂದ್ರನ್, ಕೆ.ಚಂದ್ರಶೇಖರ್ ಆರಿಗ, ಅಶೋಕ್ ಪಾಟೀಲ್, ವಿ.ಭರತ್, ಎಸ್.ಪಿ.ಶ್ರೀಕಾಂತ್, ವಸುಪಾಲ್, ಎನ್. ಜಿನೇಂದ್ರ ಪ್ರಕಾಶ್, ಬಿ.ಸೀಮಂತಿನಿ ಇತರರು ಉಪಸ್ಥಿತರಿದ್ದರು.

ವಯನಾಡು ದುರಂತ ಮಾದರಿ ಪ್ರಕೃತಿ ವಿಕೋಪ ನಿರ್ವಹಣೆಗೆ ಸಮಿತಿ ರಚನೆ

ಮೈಸೂರು ಜಿಪಂ ಸಿಇಒ ಕೆ.ಎಂ. ಗಾಯತ್ರಿ ವಿವರಣೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕೇರಳದ ವಯನಾಡು ಭೂ ಕುಸಿತ ಪ್ರಕರಣದ ಛಾಯಾಚಿತ್ರ ಪ್ರದರ್ಶನವನ್ನು ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ ವೀಕ್ಷಿಸುತ್ತಿರುವುದು.

ಮೈಸೂರು,ಆ.17(ಎಂಟಿವೈ)– ಸಂಭವನೀಯ ಪ್ರಕೃತಿ ವಿಕೋಪ ತಡೆಗೆ ವಿವಿಧ ಇಲಾಖೆಗಳನ್ನೊಳಗೊಂಡ ಜಿಲ್ಲಾ ಮಟ್ಟದ ಪ್ರಕೃತಿ ವಿಕೋಪ ಸಮಿತಿಯನ್ನು ರಚಿಸಿ, ಅಣಕು ಪ್ರದರ್ಶನದ ಮೂಲಕ ತರಬೇತಿ ನೀಡಿ ಕಾರ್ಯಾಚರಣೆಗೆ ಸಜ್ಜುಗೊಳಿಸಲಾಗುತ್ತಿದೆ ಎಂದು ಮೈಸೂರು ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಆಯೋಜಿಸಿದ್ದ 'ವಯನಾಡು ಪ್ರಕೃತಿ ವಿಕೋಪ, ಮಾಧ್ಯಮ ಸವಾಲು–ಸಂವಾದ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ಪ್ರತಿ ವರ್ಷವೂ ಪ್ರಕೃತಿ ವಿಕೋಪ ಎದುರಿಸಲು ಕಂದಾಯ ಇಲಾಖೆ ಹಾಗೂ ಇನ್ನಿತರ ಇಲಾಖೆಯ ಸಿಬ್ಬಂದಿಗಳಿರುವ ಪ್ರಕೃತಿ ವಿಕೋಪ ನಿರ್ವಹಣೆ ತಂಡವನ್ನು ಸಜ್ಜುಗೊಳಿಸಲಾಗುತ್ತದೆ. ಈ ತಂಡದ ಸದಸ್ಯರು ಪ್ರಕೃತಿ ವಿಕೋಪ ಸಂಭವಿಸಿದರೆ ಹೇಗೆ ಕಾರ್ಯಾಚರಣೆ ಮಾಡಬೇಕು. ಸಂತ್ರಸ್ತರನ್ನು ರಕ್ಷಣೆ ಮಾಡುವುದೂ ಸೇರಿದಂತೆ ಕಾರ್ಯಾಚರಣೆಯ ಸ್ವರೂಪದ ಬಗ್ಗೆ ಮಾಹಿತಿ ನೀಡಿ, ಸಜ್ಜುಗೊಳಿಸಲಾಗುತ್ತದೆ. ಅಲ್ಲದೆ, ಅಣಕು ಪ್ರದರ್ಶನದ ಮೂಲಕವೂ ತರಬೇತಿ ನೀಡಲಾಗುತ್ತಿದೆ. ಕೊರೊನಾ ಸಮಸ್ಯೆ ನಂತರ ಗ್ರಾ.ಪಂ ಮಟ್ಟದಲ್ಲೂ ಸ್ಥಳೀಯ ಗ್ರಾ.ಪಂ ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಲಾಗಿದ್ದು, ಅವರಿಗೆ ಇರುವ ಮಾಹಿತಿ ಮೂಲಕ ರಕ್ಷಣಾ ಕಾರ್ಯಾಚರಣೆಗೆ ರೂಪುರೇಷೆ ಸಿದ್ಧಪಡಿಸಲಾಗುತ್ತದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಜಿಲ್ಲಾಡಳಿತ, ಜಿ.ಪಂ ಹಾಗೂ ಕಂದಾಯ ಇಲಾಖೆ ವತಿಯಿಂದ ಪ್ರತಿ ವರ್ಷವೂ ಸಂಭವನೀಯ ಪ್ರಕೃತಿ ವಿಕೋಪಗಳ ಬಗ್ಗೆ ಸ್ಪಂದಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡಿರುತ್ತೇವೆ. ಅತಿವೃಷ್ಟಿಯಿಂದಾಗಿ ಯಾವ ಯಾವ ಭಾಗಗಳಲ್ಲಿ ಹಾನಿಯಾಗಬಹುದಾಗಿದೆ ಎಂಬ ಮಾಹಿತಿಯನ್ನು ಗ್ರಾಪಂ ಮಟ್ಟದಲ್ಲಿಯೇ ಮುಂದಾಗಿಯೇ ಪಡೆಯಲಾಗಿರುತ್ತದೆ. ಈ ರೀತಿ ನಷ್ಟ ತಪ್ಪಿಸಲು ಜಿಲ್ಲಾಡಳಿತಗಳು ರಾಜ್ಯದಲ್ಲಿ ಸಜ್ಜಾಗಿರುತ್ತವೆ ಎಂದರು.

ಕೇರಳದ ವಯನಾಡು ಭಾಗದಲ್ಲಿ ಸಂಭವಿಸಿದ ಭೂ ಕುಸಿತ ಪ್ರಕರಣದಲ್ಲಿ ಮೈಸೂರಿನ ಪತ್ರಕರ್ತರು ವಸ್ತುನಿಷ್ಠ ವರದಿ ಮಾಡಿರುವುದು ಶ್ಲಾಘನೀಯ. ಪ್ರಕೃತಿ ವಿಕೋಪದಂತಹ ಘಟನೆಗಳ ವರದಿಗಾರಿಕೆಯಲ್ಲಿ ಸತ್ಯ ಹಾಗೂ ವಸ್ತುನಿಷ್ಠ ವರದಿ ಮಾಡುವ ಅಗತ್ಯವಿದೆ. ಊಹಾಪೋಹದ ಆಧಾರದಲ್ಲಿ ವರದಿ ಮಾಡುವುದರಿಂದ ಜನರಲ್ಲಿ ಆತಂಕ ಹೆಚ್ಚುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಎಟಿಐ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರದ ಮುಖ್ಯಸ್ಥರಾದ ಡಾ. ಅಶೋಕ್ ಎಸ್.ಸಂಗನಾಳ ಮಾತನಾಡಿ, ಕೇರಳದ ವಯನಾಡು ಜಿಲ್ಲೆಯ ಮುಂಡಕ್ಕೈ, ಚೂರನ್ಮಲಾ ಭಾಗದಲ್ಲಿ ಸಂಭವಿಸಿದ ಭೂ ಕುಸಿತ ಪ್ರಕರಣದಿಂದಾಗಿ ಇದೀಗ ಪ್ರಕೃತಿ ವಿಕೋಪದ ಮುನ್ಸೂಚನೆ ನೀಡುವ ವ್ಯವಸ್ಥೆ ಅಳವಡಿಸಿಕೊಳ್ಳಲು ಚರ್ಚೆ ನಡೆಯುತ್ತಿದೆ. ಅತ್ಯಾಧುನಿಕ ವ್ಯವಸ್ಥೆಯುಳ್ಳ ಸೆನ್ಸಾರ್ ಯಂತ್ರಗಳನ್ನು ಪಶ್ಚಿಮಘಟ್ಟಗಳಲ್ಲಿ ಅಳವಡಿಸಿಕೊಳ್ಳುವ ಮೂಲಕ ಪ್ರಕೃತಿ ವಿಕೋಪದಿಂದ ಜನರ ಸಾವು–ನೋವು ತಡೆಗೆ ಕ್ರಮ ಕೈಗೊಳ್ಳಬೇಕು ಎಂಬ ಚರ್ಚೆ ನಡೆಯುತ್ತಿದೆ. ಪಶ್ಚಿಮಘಟ್ಟಗಳ ಸಂರಕ್ಷಣೆ ಕುರಿತಂತೆ ಚರ್ಚೆ ನಡೆಯುತ್ತಿದ್ದು, ಕೇರಳದ ಪ್ರಕರಣ ಎಚ್ಚರಿಕೆ ಘಂಟೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ವಯನಾಡು ಭೂ ಕುಸಿತದ ವರದಿಗಾರಿಕೆ ಕುರಿತು ಮಾತನಾಡಿ, ಕೇರಳದ ವಯನಾಡಿನ ಮುಂಡಕ್ಕೈ ಭಾಗದಲ್ಲಿ ಭೂ ಕುಸಿತ ಸಂಭವಿಸಿದ ನಂತರ, ಆ ಭಾಗದಲ್ಲಿ ನಿಜವಾದ ಭಾರತದ ದರ್ಶನವಾಯಿತು. ಜಾತಿ, ಧರ್ಮದ ಹೆಸರಲ್ಲಿ ರಾಜಕೀಯ ಮಾಡಿ, ಬಡಿದಾಡಲು ಪ್ರಚೋದನೆ ನೀಡುವವರು ಮುಂಡಕ್ಕೈ ಭಾಗಕ್ಕೆ ತೆರಳಿ ಅಲ್ಲಿನ ನೈಜದರ್ಶನ ಪಡೆಯಬೇಕಾದ ಅನಿವಾರ್ಯತೆ ಇದೆ ಎಂದರು.

ಇದೇ ವೇಳೆ ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ ಪ್ರಕೃತಿ ವಿಕೋಪದ ವರದಿಗಾರಿಕೆಯಲ್ಲಿ ಉಂಟಾಗುವ ಸವಾಲು ಕುರಿತು ಮಾತನಾಡಿದರೆ, ಪತ್ರಕರ್ತ ರಂಗಸ್ವಾಮಿ ಮಾದಾಪುರ ಅನುಭವ ಹಂಚಿಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಸಂಸ್ಥಾಪಕ ಅಮರನಾಥ ರಾಜೇ ಅರಸ್ ಹಾಗೂ ಇನ್ನಿತರರು ಇದ್ದರು.

ಸಿದ್ದರಾಮಯ್ಯ ಸಿಎಂ ಆಗಿ ಮುಂದುವರೆದರೆ ಖುಷಿ



ಬೆಂಗಳೂರು, ಆ.17– ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರೆದರೆ ನನ್ನಷ್ಟು ಖುಷಿಪಡುವ ವ್ಯಕ್ತಿ ಮತ್ತೊಬ್ಬರಿರುವುದಿಲ್ಲ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಹಗರಣದಲ್ಲಿ ಸಿದ್ದರಾಮಯ್ಯ ವಿಚಾರಣೆಗೆ ರಾಜ್ಯಪಾಲರು ಅನುಮತಿ ನೀಡಿದ್ದಾರೆ. ಆದರೆ ಸಿದ್ದರಾಮಯ್ಯ ನುರಿತ ರಾಜಕಾರಣಿ. ಈ ವಿಚಾರದಲ್ಲಿ ಏನು ಮಾಡಬೇಕು ಎನ್ನುವುದು ಸಿದ್ದರಾಮಯ್ಯ ಸಾಹೇಬರಿಗೆ ಚೆನ್ನಾಗಿ ಗೊತ್ತಿದೆ. ನಾನು ಅವರು ಬಹಳ ಆತ್ಮೀಯರು. ನಾವಿಬ್ಬರೂ ಒಟ್ಟಿಗೆ ಕೆಲಸ ಮಾಡಿದ್ದೇವೆ. ಒಂದು ದಿನದ ಹಿಂದಷ್ಟೇ ಅವರ ಜೊತೆ ಮಾತನಾಡಿದ್ದೆ. ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ವಿಚಾರ ಕಾನೂನು ಪ್ರಕಾರ ನಡೆಯುತ್ತದೆ ಎಂದು ತಿಳಿಸಿದರು.